ಖಾಸಗಿ ಪ್ರಸಾರಕ್ಕಾಗಿ

# ನವ ಮಾನವ ಮಾಸಿಕ

**ಅಕ್ಟೋಬರ್ ೨೦೧೨** **ಪುಟ:** ೨೦ **ಚಂದಾ:** ನೀವು ಕೊಟ್ಟಷ್ಟು

ಸಂಪಾದಕ: **ಡಿ.ಎಸ್.ನಾಗಭೂಷಣ**

ವಿಳಾಸ: **ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೊಬ ನಗರ, ಶಿವಮೊಗ್ಗ- ೫೭೭ ೨೦೪**

**ದೂ: ೦೮೧೮೨-೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್:** dsnagabhushana@gmail.com

## ಸಂಪಾದಕನ ಟಿಪ್ಪಣಿಗಳು

ಪ್ರಿಯ ಓದುಗರೇ,

ಅಂತೂ ನಮ್ಮ ಪ್ರಧಾನ ಮಂತ್ರಿಯವರು ತಮ್ಮದು ಧೀರ ನೀತಿ, ಧೀರ ರಾಜಕಾರ್ಥಣ ಎಂದು ರಾಷ್ಟ್ರಕ್ಕೆ ಮನವರಿಕೆ ಮಾಡುವ ಗಂಭೀರ ಪ್ರಯತ್ನವೊಂದನ್ನು ಮಾಡಿದ್ದಾರೆ. ತಾವು ರಾತ್ರೋರಾತ್ರಿ ಇದ್ದಕ್ಕಿದ್ದಂತೆ ಪ್ರಕಟಿಸಿದ ಡೀಸಲ್ ಬೆಲೆ ಏರಿಕೆ, ಸಬ್ಸಿಡಿ ಆಧಾರಿತ ಅಡುಗೆ ಅನಿಲ ಸಿಲಿಂಡರುಗಳ ಪೂರೈಕೆ ಮೇಲಿನ ಮಿತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಹು ಮುದ್ರೆ ಚಿಲ್ಲರೆ ಮಾರಾಟದಲ್ಲಿ ಶೇ.೫೧ರವರೆಗೆ ನೇರ ಬಂಡವಾಳ ಹೂಡಿಕೆಗೆ ಅನುಮತಿ ನೀಡುವ ಕಾರ್ಯಕ್ರಮವನ್ನು ಘೋಷಿಸಿದ್ದಾರೆ. ಇದರ ವಿರುದ್ಧ ವಿರೋಧ ಪಕ್ಷಗಳು ನಡೆಸಿರುವ ಚಳುವಳಿಯಿಂದ ಅತಂಕಿತರಾದವರಂತೆ, ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣವೊಂದನ್ನು ಯೋಜಿಸಿಕೊಂಡು ತಮ್ಮ ಈ ಕಾರ್ಯಕ್ರಮದ ಅನಿವಾರ್ಯತೆ ಮತ್ತು ಪ್ರಯೋಜನಗಳನ್ನು ಜನತೆಗೆ ವಿವರಿಸಿದ್ದಾರೆ.

ಅವರ ಈ ಭಾಷಣದಲ್ಲಿ ಈವರೆಗೆ ಈ ಬಗ್ಗೆ ಕೇಳಿರಲಾರದ ಯಾವುದೇ ಹೊಸ ಮಾತು ಇರಲಿಲ್ಲವಾದರೂ, ಒಂದು ಮಾತು ಇವೊತ್ತಿನ ರಾಜಕಾರಣದ ಸಂದರ್ಭದಲ್ಲಿ ಮಹತ್ವದ್ದು ಎನ್ನಿಸುವ ಒಂದು ಮಾತು ಇತ್ತು. ಅದು ಅವರ ಈ ಭಾಷಣದ ಕೇಂದ್ರ ಮಾತೂ ಹೌದು ಅದೆಂದರೆ, 'ಹಣ ಗಿಡದಲ್ಲಿ ಹುಟ್ಟುವುದಿಲ್ಲ' ಎಂಬುದು. ಇದು ಅಸಾಮಾನ್ಯ ಮಾತೇನೂ ಅಲ್ಲವಾದರೂ, ಮನಮೋಹನ ಸಿಂಗರ ಅರ್ಥಶಾಸ್ತ್ರ ಮತ್ತು ಅದನ್ನಾಧರಿಸಿದ ರಾಜಕಾರಣದ ಸಂದರ್ಭದಲ್ಲಿ ಬಹು ಮುಖ್ಯ ಮಾತು ಎಂದು ನನಗನ್ನಿಸುತ್ತದೆ. ಏಕೆಂದರೆ ಈ ಮಾತಿನ ಮೂಲಕ ಅವರು ತಮ್ಮ ಅರ್ಥಶಾಸ್ತ್ರ ಮತ್ತು ರಾಜಕಾರಣದ ಚಾಲಕ ಶಕ್ತಿ ಹಣ ಎಂದು ಅವರು ನೇರವಾಗಿ ಹೇಳುತ್ತಿದ್ದಾರೆ.. ಹೌದು ಇಂದಿನ ಆಧುನಿಕ ಜಗತ್ತಿನಲ್ಲಿ ಒಬ್ಬ ಮನುಷ್ಯ ಅಥವಾ ಒಂದು ರಾಷ್ಟ್ರ ಬದುಕಲು ಹಣ ಅಗತ್ಯವಷ್ಟೇ ಅಲ್ಲ, ಮುಖ್ಯ ಕೂಡ. ಇದರ ಬಗ್ಗೆ ಎರಡು ಮಾತಿಲ್ಲ. ಆದರೆ ಈ ಮಾತಿನ ಜೊತೆಗೇ, ಈ ಹಣ ಎಷ್ಟು ಬೇಕು, ಏಕೆ ಬೇಕು ಮತ್ತು ಎಷ್ಟು ಮುಖ್ಯ, ಹೇಗೆ ಮುಖ್ಯ ಎಂಬ ಪ್ರಶ್ನೆಗಳನ್ನೂ ಕೇಳಿಕೊಳ್ಳದೇ ಹೋದರೆ ಈ ಹಣವೇ ಬದುಕಿನ ಚಾಲಕ ಶಕ್ತಿಯಾಗಿ ಮನುಷ್ಯ ಕ್ರೂರಿಯೂ, ರಾಷ್ಟ್ರವು ಹಿಂಸಕವೂ ಆಗುತ್ತಾ ಹೋಗುತ್ತದೆ. ಈ ಸತ್ಯವನ್ನು ನಾವಿಂದು ಮನುಷ್ಯ ಮತ್ತು ರಾಷ್ಟಗಳೆರಡೂ ನೆಲೆಗಳಲ್ಲಿ ನೋಡುತ್ತಿದ್ದೇವೆ. ನಮ್ಮ ರಾಷ್ಟ್ರ ಜೀವನವನ್ನು ಒಮ್ಮೆ ಅವಲೋಕಿಸಿದರೆ ಯಾರಿಗಾದರೂ ಹೀಗನ್ನಿಸುವುದಿಲ್ಲವೇ?

ಇದರ ವಿವರಣೆಗೆ ಆಮೇಲೆ ಬರೋಣ. ಮೊದಲು ಮನಮೋಹನ ಸಿಂಗರಿಗೆ ಹಣ ಏಕೆ ಬೇಕಾಗಿದೆ ನೋಡೋಣ. ಅವರಿಗೆ ಹಣ ಈಗ ಮುಖ್ಯವಾಗಿ ಬೇಕಾಗಿರುವುದು ತಮ್ಮ ಮಹತ್ವಾಕಾಂಕ್ಷೆಯ ಮುಂಗಡ ಪತ್ರದಲ್ಲಿನ ಕೊರತೆಯನ್ನು ತುಂಬಿಕೊಳ್ಳಲು. ಇದು ಎರಡು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಒಂದು, ಮೊದಲಾಗಿ ಈ ಕೊರತೆ ಸೃಷ್ಟಿಯಾದದ್ದು ಹೇಗೆ, ಏಕೆ? ಎರಡು, ಈ ಕೊರತೆಯನ್ನು ತುಂಬಿಕೊಳ್ಳುವ ತುರ್ತು ಈಗಲೇ ಏಕೆ ಉಂಟಾಯಿತು? ಒಂದು ರಾಷ್ಟ್ರದ ಹಣಕಾಸು ಕೊರತೆಯ ಸೃಷ್ಟಿ ಎಂದರೆ, ನಿರೀಕ್ಷಿತ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವ ಆಡಳಿತ ಎಂದರ್ಥ. ಅಂದರೆ ಅನುತ್ಪಾದಕ ವೆಚ್ಚದ ಮತ್ತು ಆದಾಯ ಸೋರಿಕೆಯ ಮೇಲಿನ ನಿಯಂತ್ರಣ ತಪ್ಪಿದ ಅದಕ್ಷ ಆಡಳಿತ.

ಬಡತನ ನಿವಾರಣೆಗಾಗಿ ಈ ಸರ್ಕಾರ ಹೂಡಿರುವ ಕೋಟಿ ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡಿರುವ ಯೋಜನೆಗಳ ನಿರ್ವಹಣೆಯಲ್ಲಿ ಮುಕ್ತ ಮತ್ತು ವೈವಿಧ್ಯಮಯ ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಿರುವ ಈ ಮನಮೋಹನ ಸಿಂಗರ ಸರ್ಕಾರ ಲಕ್ಷ ಲಕ್ಷ ಕೋಟಿ ರೂಪಾಯಿಗಳ ಈ ಭ್ರಷ್ಟಾಚಾರದ ಹಗರಣಗಳು ಈಗ ಒಂದೊಂದಾಗಿ ಬಯಲಾಗುತ್ತಿದ್ದಂತೆ 'ಬಜೆಟ್ ಕೊರತೆ ನೀಗಿಸುವ' ಅರ್ಥಶಾಸ್ತ್ರೀಯ ಪರಿಭಾಷೆಯ ಮೋಡಿ ಹಾಕುವ ಮೂಲಕ ಈ ಹಗರಣಗಳನ್ನು ಸಾರ್ವಜನಿಕ ಚರ್ಚೆಯಿಂದ ದೂರ ಸರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದೇ ಹೇಳಬೇಕಾಗುತ್ತದೆ. ಹಾಗೇ ಈ ಭ್ರಷ್ಟಾಚಾರದ ಪಿಡುಗನ್ನು ನೇರ ಎದುರಿಸಿ ಇದು ದೋಚಿಕೊಂಡು ಹೋಗಿರುವ ಜನರ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸಿಕೊಳ್ಳುವ ರಾಜಕೀಯ ಇಚ್ಛಾಶಕ್ತಿಯ ಕೊರತೆಯನ್ನು ಒಪ್ಪಿಕೊಂಡಿದ್ದಾರೆ. ಹಾಗೆಂದೇ ಅವರನ್ನು ಎಲ್ಲರೂ ದುರ್ಬಲ ಪ್ರಧಾನಿ ಎಂದು ಕರೆಯುತ್ತಿರುವುದು.

ಈ ದೌರ್ಬಲ್ಯದ ಎರಡು ಮೂಲಗಳೆಂದರೆ ಅವರು ಜನತೆಯ ನೇರ ಪ್ರತಿನಿಧಿಯಾಗದೆ ರಾಷ್ಟ್ರದ ರಾಜಕೀಯ ನಾಯಕ ಸ್ಥಾನವಾದ ಪ್ರಧಾನಿಯ ಪಟ್ಟವೇರಿರುವುದು. ಇನ್ನೊಂದು, ಅವರು ನಂಬಿರುವ ಮುಕ್ತವೆಂದು ಕರೆಯಲಾಗುವ ಆರ್ಥಿಕ ನೀತಿಯೇ ಮೂಲತಃ ಭ್ರಷ್ಟಾಚಾರದ ಆಧಾರದ ಮೇಲೇ ನಿಂತಿರುವುದು. ಮುಕ್ತ ಹೂಡಿಕೆಗಳಲ್ಲಿ ಅದರ ಮುಕ್ತತೆಯ ಕಾರಣದಿಂದಾಗಿಯೇ ಅದರ ಒಂದು ಭಾಗ ಮಧ್ಯವರ್ತಿಗಳ ಪಾಲಾಗಿ ಕಪ್ಪು ಹಣ ಸೃಷ್ಟಿಯಾಗುವುದು ಸಹಜ ಮತ್ತು ಇದೆಲ್ಲ ಇಂತಹ ಆರ್ಥಿಕತೆಯ ಅವಿಭಾಜ್ಯ ಅಂಗ ಎಂದು ಅದರ ರಾಜಕಾರಣ ನಂಬಿದೆ. ಹಾಗಾಗಿಯೇ, ೨ಜಿ, ಕಾಮನ್‌ವೆಲ್ತ್ ಕ್ರೀಡೆ, ದೆಹಲಿ ವಿಮಾನ ನಿಲ್ದಾಣ, ಏರ್ ಇಂಡಿಯಾ, ಕಲ್ಲಿದ್ದಲು ಗಣಿ ಗುತ್ತಿಗೆ ಇತ್ಯಾದಿ ಬೃಹತ್ ಹಗರಣಗಳು ನಡೆಯುತ್ತಿದ್ದರೂ, ಈ ಬಗ್ಗೆ ಹಲವು ನೆಲೆಗಳಿಂದ ಎಚ್ಚರಿಕೆ ಬಂದಿದ್ದರೂ, ಮನಮೋಹನ ಸಿಂಗ್ ಮತ್ತು ಅವರ ಸಹಚರರು ಅದನ್ನು ನೋಡಿಯೂ ನೋಡದಂತಿದ್ದುದು. ಇದಕ್ಕೆ ಪ್ರತಿಯಾಗಿ ಮನಮೋಹನ್ ಶುದ್ಧ ಹಸ್ತದ ಮನುಷ್ಯನೆಂಬುದು ವಿವಾದಾತೀತ ಸಂಗತಿಯಲ್ಲವೇ ಎಂದು ಕೇಳುವವರಿದ್ದಾರೆ. ಆದರೆ ಭ್ರಷ್ಟ ಬಂಡವಾಳವಾದ ತಮ್ಮ ಕಾರುಬಾರು ನಡೆಸಲಾರಂಭಿಸುವುದೇ ಇಂತಹ ಶುದ್ಧ ಹಸ್ತದ ಮುಖವಾಡಗಳನ್ನು ಬಳಸಿಯೇ ಎಂಬುದು ಆಧುನಿಕ ಬಂಡವಾಳವಾದದ ಸಾಧನವಾದ ವಾಣಿಜ್ಯ ವ್ಯವಸ್ಥಾಪನಾ ಶಾಸ್ತ್ರ ಪ್ರತಿಪಾದಿಸುವ ತಂತ್ರಗಳನ್ನು ಬಲ್ಲ ಯಾರಿಗೂ ಹೇಳುವ ಅಗತ್ಯವಿಲ್ಲ. ರಾಜಕಾರಣದ ಹಿನ್ನೆಲೆಯೇ ಇಲ್ಲದ ಮನಮೋಹನರು ಭಾರತದ ರಾಜಕಾರಣವನ್ನು ಪ್ರವೇಶಿಸಿದ್ದೇ ಅವಸರವಸರದಲ್ಲಿ ರಾಜ್ಯ ಸಭೆ ಎಂಬ ಹಿಂಬಾಗಿಲಿನಿಂದ; ಅದೂ ಅವರು ಅಸ್ಸಾಂ ರಾಜ್ಯದ ಗೌಹಾತಿ ನಗರದ ಬಹುಕಾಲದ ನಿವಾಸಿ ಎಂದು ನಮ್ಮ ಸಂವಿಧಾನಕ್ಕೆ ಹಸಿ ಸುಳ್ಳು ಹೇಳುವ ಮೂಲಕ. ಇದೆಂತಹ

ನೈತಿಕ ರಾಜಕಾರಣ? ಯಾಕೆ ಇದು ಆಗ ಅಗತ್ಯವಾಯಿತು? ಯೋಚಿಸಬೇಕು.

ಇನ್ನು ಈ ಕೊರತೆಯನ್ನು ನೀಗಿಸುವ ತುರ್ತು ಈಗಲೇ ಏಕೆ ಉಂಟಾಯಿತು ಎಂಬ ಪ್ರಶ್ನೆ. ಈ ತುರ್ತಿಗೆ ಕಾರಣ, ಮೇಲೆ ಹೇಳಿದಂತಹ ಅದಕ್ಷ ಆರ್ಥಿಕ ಆಡಳಿತದ ಪರಿಣಾಮವಾಗಿ, ಹಣದುಬ್ಬರ ಇನ್ನೂ ಹೆಚ್ಚಾಗುತ್ತಾ ಹೋಗಿ, ಅದು ನಮ್ಮ ಆರ್ಥಿಕತೆಯನ್ನು ಒಳಗಿಂದಲೇ ಕೊರೆದುಹಾಕುವುದರ ಪರಿಣಾಮವಾಗಿ ನಮ್ಮ ಆರ್ಥಿಕತೆಯ ಅಂತಾರಾಷ್ಟ್ರೀಯ ವಿಶ್ವಾಸಾರ್ಹತೆ ತೀರಾ ಕೆಳಗಿಳಿದು ಹಣವಂತ ರಾಷ್ಟಗಳಿಂದ ಮತ್ತು ಸಂಸ್ಥೆಗಳಿಂದ ಸಾಲ/ಹೂಡಿಕೆ ದೊರೆಯದೇ ಹೋಗುವ ಭೀತಿ ಸನ್ನಿಹಿತವಾದುದರಿಂದ. ನಮ್ಮ ಆರ್ಥಿಕತೆ ಅಷ್ಟರಮಟ್ಟಿಗೆ 'ಹೊರಗುತ್ತಿಗೆ' ವ್ಯವಸ್ಥೆಯಲ್ಲಿ ಇಂದು ಸಿಕ್ಕಿಹಾಕಿಕೊಂಡಿದೆ. ಎಷ್ಟರ ಮಟ್ಟಿಗೆ ಎಂದರೆ, ತೊಂಭತ್ತರ ದಶಕದಲ್ಲಿ ನಾವು ನಮ್ಮ ರಾಷ್ಟ್ರದ ಚಿನ್ನವನ್ನೆಲ್ಲ ವಿಶ್ವಬ್ಯಾಂಕಿನಲ್ಲಿ ಅಡವಿಟ್ಟು ಬದುಕಿಕೊಂಡೆವೆಂದು ಹೇಳುತ್ತಾರಲ್ಲಾ, ಆ ಸ್ಥಿತಿಗೆ ನಾವು ಇಂದು ಬಂದು ಮುಟ್ಟಿದ್ದೇವೆಂದು ಮನಮೋಹನ ಸಿಂಗ್ ಎಚ್ಚರಿಸಿದ್ದಾರೆ! ಆದರೆ ಇದು ಎಂತಹ ವಿಚಿತ್ರ ವಿಪರ್ಯಾಸವೆಂದರೆ, ಆ ಬಿಕ್ಕಟ್ಟನ್ನು ತಮ್ಮ ಮುಕ್ತ ಆರ್ಥಿಕ ನೀತಿಯ ಮೂಲಕ ಪರಿಹರಿಸಿದ್ದಾಗಿ ಹೇಳಿಕೊಳ್ಳುವ ಮನಮೋಹನಸಿಂಗರೇ ಈ ಮೂಲಕ ಪರೋಕ್ಷವಾಗಿ ತಮ್ಮ ಈ ಪರಿಹಾರವೇ ಇಂದು ಸಮಸ್ಯೆಯಾಗಿದೆ ಎಂದು ಹೇಳಿಕೊಳ್ಳುವ ಸ್ಥಿತಿ ತಲುಪಿದ್ದಾರೆ! ಪಶ್ಚಿಮದ ಸಮೃದ್ಧಿಯ ಹೆಸರಿನಲ್ಲಿ, ಎರಡಂಕಿ ಪ್ರಗತಿಯ ಹೆಸರಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಈ ಇಪ್ಪತ್ತು ವರ್ಷಗಳಲ್ಲಿ ರಾಷ್ಟ್ರಜೀವನದಲ್ಲಿ ಸಲ್ಲದ ಆಸೆಗಳನ್ನು ಕೆರಳಿಸಿಬಿಟ್ಟು, ಈಗ ಅದನ್ನು ಪೂರೈಸಲಾಗದ ರಾಜಕೀಯ ಬಿಕ್ಕಟ್ಟಿಗೆ ಸಿಲುಕಿಕೊಂಡಿರುವ ಈ ಮನಮೋಹನ ಸಿಂಗ್, ಜನರೀಗ ಒಂದಿಷ್ಟು ತ್ಯಾಗ ಮಾಡದಿದ್ದರೆ ಪಶ್ಚಿಮದ ರಾಷ್ಟ್ರಗಳ ಗತಿ ನಮಗೂ ಆದೀತು ಎಂದು ಎಚ್ಚರಿಸುತ್ತಿರುವುದು ಒಂದು 'ಕಾಮಿಡಿ' ನಾಟಕದ ದೃಶ್ಯದಂತೆ ಮಾತ್ರ ಕಾಣುತ್ತಿದೆ!

ಇದು ನಮ್ಮನ್ನು ಮೊದಲ ಪ್ರಶ್ನೆಗೆ ಕೊಂಡೊಯ್ಯುತ್ತದೆ: ಹಣ ಬೇಕು ನಿಜ. ಆದರೆ ಏಕೆ, ಎಷ್ಟು ಬೇಕು? 'ಹಣ ಗಿಡದಲ್ಲಿ ಬೆಳೆಯುವುದಿಲ್ಲ' ಎಂಬ ಜನಜನಿತ ನಾಣ್ನುಡಿಯ ಉಲ್ಲೇಖದ ಮೂಲಕ ರಾಷ್ಟ್ರಕ್ಕೆ ವಿವೇಕ ಹೇಳಿದ ಮನಮೋಹನಸಿಂಗ್‌ರಿಗೆ ಈ ಸಂದರ್ಭದಲ್ಲಿ ಇಷ್ಟೇ ಜನಜನಿತವಾದ 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಸರಳ ನಾಣ್ನುಡಿಯ ಮೂಲಕ ಯಾರಾದರೂ ವಿವೇಕ ಹೇಳಬೇಕಿದೆ. ಏಕೆಂದರೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳದ ವಿವೇಕಹೀನ ಆರ್ಥಿಕ ನೀತಿಯನ್ನು, ಆ ಮೂಲಕ ರಾಷ್ಟ್ರ ಜೀವನದಲ್ಲಿ ಎಂದೂ ತಣಿಯದ ಒಟ್ಟಾರೆ ದಾಹವನ್ನೂ ಸೃಷ್ಟಿಸಿ ದೇಶದ ತುಂಬಾ ವಿವಿಧ ನೆಲೆಗಳಲ್ಲಿ ಮತ್ತು ಸ್ತರಗಳಲ್ಲಿ ಅಶಾಂತಿಯ, ಅಭದ್ರತೆಯ ವಾತಾವರಣವನ್ನು ಸೃಷ್ಟಿಸಿದ್ದಾರೆ. ದೇಶದ ಸಾಮಾನ್ಯ ಪ್ರಜೆಗಳ ಮೇಲೇ ದೇಶ ದ್ರೋಹದ ಮೊಕದ್ದಮೆಗಳನ್ನು ಒಂದಾದಮೇಲೊಂದರಂತೆ ಹೂಡುವ ಪರಿಸ್ಥಿತಿ ಉಂಟಾಗಿದೆ ಎಂದ ಮೇಲೆ ನಾವಿಂದು ಒಂದು ರಾಷ್ಟ್ರವಾಗಿ, ಒಂದು ಪ್ರಜಾಪ್ರಭುತ್ವವಾಗಿ ಎಂತಹ ಅಸ್ಥಿರತೆಯ ಪರಿಸ್ಥಿತಿಯಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಇದರರ್ಥ ಇಷ್ಟೆ: ಹಳೆಯ ಆರ್ಥಿಕ ನೀತಿಯ ವಿಫಲತೆಗೆ ನೀತಿಯಷ್ಟೇ ಕಾರಣವೇ ಅಥವಾ ಬೇರೇನಾದರೂ ಕಾರಣಗಳಿವೆಯೇ ಎಂಬುದರ ಅಧ್ಯಯನದ ಗೋಜಿಗೂ ಹೋಗದೆ, ಅದರ ಸ್ಥಗಿತತೆಯನ್ನೇ ನೆಪವಾಗಿಸಿಕೊಂಡು, ನಮ್ಮ ಆಂತರಿಕ ಸಾಮರ್ಥ್ಯವನ್ನು ಮೀರಿದ ಪ್ರಗತಿಯ ಗುರಿ ಇಟ್ಟುಕೊಂಡ ಆರ್ಥಿಕ ನೀತಿಗೆ ಬಹು ನಾಟಕೀಯವಾಗಿ ಬಲಿ ಬಿದ್ದುದರ ಹಿಂದಿನ ರಾಜಕಾರಣ ನಮಗಿನ್ನೂ ಪೂರ್ತಿ ಅರ್ಥವಾಗಬೇಕಿದೆ.

ಒಂದು ಮುಂಗಡ ಪತ್ರದಲ್ಲಿನ ಕೊರತೆಯನ್ನು ನೀಗುವುದಿರಲಿ, ಪೂರ್ತಾ ಮೂರ್ನಾಲ್ಕು ಮುಂಗಡ ಪತ್ರಗಳಿಗೆ ಸಾಕಾಗುವಷ್ಟು ವಿದೇಶಿ ಬ್ಯಾಂಕುಗಳಲ್ಲಿರುವ ಬೃಹತ್ ಮೊತ್ತದ ಕಪ್ಪು ಹಣವನ್ನು ವಾಪಸ್ ತರಲು ಸರ್ಕಾರ ಅನುಮಾನಾಸ್ಪದವಾದ ರೀತಿಯಲ್ಲಿ ತಡಮಾಡುತ್ತಿರುವುದಾದರೂ ಏಕೆ? ಕಳೆದ ವರ್ಷ ಆರ್ಥಿಕ ಹಿಂಜರಿತದ ಕಾರಣದ ಮೇಲೆ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡಿದ ೫ ಲಕ್ಷ ಕೋಟಿ ರೂಪಾಯಿಗಳ ಮುಂದೆ ಡೀಸಲ್ ಮತ್ತು ಅಡುಗೆ ಸಿಲಿಂಡರುಗಳ ಮೇಲೆ ನೀಡುವ ಸಬ್ಸಿಡಿ ಎಲ್ಲಿ ನಿಲ್ಲುತ್ತದೆ? ಡೀಸಲ್ ಶ್ರೀಮಂತರ ಇಂಧನ ಮತ್ತು ಬಡವರು ವರ್ಷಕ್ಕೆ ಆರು ಅಡುಗೆ ಸಿಲಿಂಡರುಗಳಿಗಿಂತ ಹೆಚ್ಚು ಬಳಸುವುದಿಲ್ಲ ಎಂಬ ಹಸಿ ಸುಳ್ಳುಗಳನ್ನು ಏಕೆ ಹೇಳುವಿರಿ? ಕೃಷಿ ಕ್ಷೇತ್ರದಲ್ಲಿ, ನಿರ್ದಿಷ್ಟವಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ಶೀತಲೀಕರಣ ಕೇಂದ್ರಗಳ ಸ್ಥಾಪನೆಯ ಮೇಲಿನ ಹೂಡಿಕೆಯನ್ನು ಬೇಕೆಂದೇ ಕಡಿಮೆ ಮಾಡಿ ಈಗ ನೇರ ವಿದೇಶಿ ಬಂಡವಾಳ ಹೂಡಿಕೆಯಿಂದ ರೈತರಿಗೆ ಪ್ರಯೋಜನವಾಗುವುದು, ಶೀತಲೀಕರಣ ಕೇಂದ್ರಗಳ ಸ್ಥಾಪನೆಗೆ ಬಂಡವಾಳ ಲಭ್ಯವಾಗುವುದು ಎಂಬ ಆತ್ಮದ್ರೋಹದ ಮಾತುಗಳನ್ನೇಕೆ ಆಡುತ್ತಿರುವಿರಿ? ಈ ರಾಜಕಾರಣ ಯಾವ ಮಟ್ಟಕ್ಕೆ ಬಂದು ಮುಟ್ಟಿದೆಯೆಂದರೆ, ಈ ರಾಜಕಾರಣವನ್ನು ರಾಷ್ಟ್ರ ಬಾಯಿ ಮುಚ್ಚಿಕೊಂಡು ಒಪ್ಪಿಕೊಳ್ಳದಿದ್ದಲ್ಲಿ, ಕೋಮುವಾದಿ ಸರ್ಕಾರ ಬಂದುಬಿಡುತ್ತದೆ ಎಂಬ ಗುಮ್ಮನನ್ನು ಕರೆಯುವ ವಿದೂಷಕತನಕ್ಕೂ ಕೆಲವರು ಇಳಿದಿದ್ದಾರೆ! ಪ್ರಜಾಪ್ರಭುತ್ವವೆಂದರೆ ಅದಕ್ಷತೆ, ಭ್ರಷ್ಟಾಚಾರ ಮತ್ತು ಕೋಮುವಾದಗಳ ನಡುವಿನ ಆಯ್ಕೆಯ ಆಟವಷ್ಟೇ ಎಂದು ಇವರು ತಿಳಿದಿರುವಂತಿದೆ.

ಆದರೆ ಇದು ಡೀಸಲಿನ ಬೆಲೆ ಏರಿಕೆ, ಸಿಲಿಂಡರುಗಳ ಸಬ್ಸಿಡಿ, ವಿದೇಶಿ ನೇರ ಬಂಡವಾಳದ ಅಗತ್ಯವನ್ನು ಕುರಿತ ಇಂದು ರಾಷ್ಟ್ರದಲ್ಲಿ ನಡೆದಿರುವ ಬೇಕು–ಬೇಡಗಳ ಚರ್ಚಾಸ್ಪರ್ಧೆಯನ್ನು ಮೀರಿದ, ರಾಷ್ಟ್ರದ ಇಡಿಯಾದ ಬದುಕಿನ ಒಟ್ಟಾರೆ ಸಂತೋಷ, ನೆಮ್ಮದಿ, ಆರೋಗ್ಯ ಮತ್ತು ಸುಸ್ಥಿರತೆಯ ಪ್ರಶ್ನೆ. ಬಹು ದೊಡ್ಡ ಪ್ರಶ್ನೆ. ಗಾಂಧಿಗೆ ಜನ್ಮ ಕೊಟ್ಟ ನಾಡು ಈ ಪ್ರಶ್ನೆಯ ಕಡೆ ಮುಖ ಕೂಡ ತಿರುಗಿಸದಂತಹ ಸ್ಥಿತಿ ತಲುಪಿದೆ ಎಂದರೆ, ಮುಂದೆ ಮಾತೇ ಹೊರಡದು.

**–ಸಂಪಾದಕ**

## ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ(ರಿ), ಸಾಗರ

**ನಮ್ಮ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ಇದೇ ಅಕ್ಟೋಬರ್ ೨೦ ಹಾಗೂ ೨೧ರಂದು(ಶನಿವಾರ ಮತ್ತು ಭಾನುವಾರ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಕುವೆಂಪು ಪ್ರತಿಷ್ಠಾನದ ಸಹಕಾರದೊಂದಿಗೆ ಎರಡು ದಿನಗಳ ಸಮಾಜವಾದಿ ಅಧ್ಯಯನ ಶಿಬಿರವನ್ನು ಆಯೋಜಿಸುತ್ತಿದೆ. ಈ ಬಾರಿಯ ಶಿಬಿರದ ಅಧ್ಯಯನ ವಿಷಯ: 'ಗಾಂಧಿ ಮತ್ತು ಸಮಾಜವಾದ.' ನಾಡಿನ ಪ್ರಖ್ಯಾತ ಚಿಂತಕರೂ ಮತ್ತು ಹೋರಾಟಗಾರರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಎರಡು ದಿನಗಳ ಸುಮಾರು ಏಳು ಗೋಷ್ಠಿಗಳಲ್ಲಿ ಈ ವಿಷಯದ ವಿವಿಧ ಮಗ್ಗುಲಗಳ ಬಗ್ಗೆ ಚರ್ಚೆ ನಡೆಸಿಕೊಡುವರು.**

**ಶಿಬಿರಾರ್ಥಿಗಳಾಗಿ ಭಾಗವಹಿಸುವವರಿಗೆ ಈ ಎರಡೂ ದಿನ ಊಟ ಉಪಾಹಾರ ಮತ್ತು ವಸತಿ ವ್ಯವಸ್ಥೆ ಮಾಡಲಾಗುವುದು. ಇದರ ಮತ್ತು ಇತರೆ ಖರ್ಚು ವೆಚ್ಚಗಳಿಗಾಗಿ ಪ್ರತಿ ಶಿಬಿರಾರ್ಥಿಯೂ ತಲಾ ನೂರೈವತ್ತು ರೂಪಾಯಿಗಳ ಶುಲ್ಕ ನೀಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಈ ಶುಲ್ಕ ನೂರು ರೂಪಾಯಿಗಳು. ವಸತಿ ವ್ಯವಸ್ಥೆ ಸೀಮಿತವಾಗಿರುವುದರಿಂದ ಆದ್ಯತೆಯ ಮೇಲೆ ಶಿಬಿರಾರ್ಥಿಗಳ ಸಂಖ್ಯೆಯನ್ನು ಸೀಮಿತಗೊಳಿಸಬೇಕಾಗಿದ್ದು ಆಸಕ್ತರು ಆದಷ್ಟು ಬೇಗನೆ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬೇಕಾಗಿ ಕೋರುವೆವು.**

. ಸಂಪರ್ಕ ದೂರವಾಣಿ ಸಂಖ್ಯೆಗಳು : ೯೭೩೧೯೨೯೭೩೧, ೯೪೪೮೨೩೮೬೩೮ ಮತ್ತು ೯೫೩೫೬೫೧೫೫೩

ಡಿ.ಎಸ್.ನಾಗಭೂಷಣ
ಅಧ್ಯಕ್ಷರು

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

'ನವ ಮಾನವ' ಮಾಸಿಕಕ್ಕೆ ಒಂದು ವರ್ಷ ತುಂಬಿದ್ದು ಖುಷಿಯೆನ್ನಿಸುತ್ತದೆ. ತಡವಾಗಿ ಶುಭಾಶಯ ಹೇಳುತ್ತಿರುವುದಕ್ಕಾಗಿ ಕ್ಷಮೆ ಇರಲಿ. ಲೋಹಿಯಾ ಚಿಂತನೆಗಳ ಜೊತೆ ಜೊತೆಗೆ ಮೂಡಿ ಬರುತ್ತಿರುವ ಇತರ ಸಮಾಜವಾದಿ ಚಿಂತನೆಗಳು ಪರಿಣಾಮಕಾರಿಯಾಗಿವೆ. ಆಧುನಿಕತೆಯ, ನವ ಕಲೋನಿಯಲ್ ವ್ಯವಸ್ಥೆಯ ತಲ್ಲಣಗಳಿಗೆ, ಹತಾಶೆಗಳಿಗೆ 'ನವ ಮಾನವ' ನೀಡುತ್ತಿರುವ ಉತ್ತರಗಳ ಮಾದರಿಗಳು ಅತ್ಯಂತ ಪ್ರಸ್ತುತವಾಗಿವೆ. ಕೂಡುಂಕುಳಂ ಅಣು ಸ್ಥಾವರದ ಅಪಾಯಗಳನ್ನು ಕುರಿತಾದ ಲೇಖನಗಳು ಮತ್ತು ಹಳೆಯ ಸಮಾಜವಾದಿಗಳ ಕುರಿತಾದ ಪರಿಚಯಾತ್ಮಕ ಆಪ್ತ ಬರಹಗಳು 'ನವ ಮಾನವ'ದ ಹೈಲೈಟ್ಸ್.

ಆದರೆ ಸೆಪ್ಟಂಬರ್ ಸಂಚಿಕೆಯಿಂದ ಶುರುವಾಗಿರುವ 'ಕಿಡಿಗೇಡಿ'ಯ ಅಂಕಣ ಪತ್ರಿಕೆಗೆ ಹೊಂದಿಕೆಯಾಗುತ್ತಿಲ್ಲ. ತುರುಕಿದಂತೆ ಭಾಸವಾಗುತ್ತಿದೆ. ಹಾಗೇ 'ಅಂಬೇಡ್ಕರವಾದಿ'ಗಳ ಬಗೆಗೆ ಸಂಪಾದಕರ ಸ್ವಲ್ಪ ಅತಿಯೆನ್ನಬಹುದಾದ ಕಟು ಧೋರಣೆ ಹಾಗೂ ಅಣ್ಣಾ ಹಜ಼ಾರೆ ಚಳುವಳಿ ಕುರಿತಾಗಿ ತಳೆದ ಅತಿಯಾದ ಮೃದು ಧೋರಣೆ ಬಗೆಗೆ ನನ್ನ ಭಿನ್ನಾಭಿಪ್ರಾಯವಿದೆ. ಆದರೆ ಕನ್ನಡ ಸಾಹಿತ್ಯ ಪರಿದೃಶ್ಯ ಕುರಿತ ನಿಮ್ಮ ನಿಷ್ಠುರ ನಲುವುಗಳಿಗೆ ನನ್ನ ಸಹಮತವಿದೆ.

**–ಬಿ. ಶ್ರೀಪಾದ ಭಟ್,** ಬೆಂಗಳೂರು

ವಿಶೇಷ ಸಂಚಿಕೆ ಚೆನ್ನಾಗಿ ಮೂಡಿಬಂದಿದೆ. ನೆಹರೂ ಅವರ ನಿಜ ಬಣ್ಣ ಬಯಲಾಗಿದೆ. ಒಂದು ವರ್ಷವಾದರೂ ಪತ್ರಿಕೆಯ ಬಗ್ಗೆ ತಿಳಿದಿರಲಿಲ್ಲವೆಂದು ಬೇಸರವಾಯಿತು. ಇರಲಿ. ಪ್ರಚಲಿತ ಸಾಮಾಜಿಕ–ಸಾಂಸ್ಕೃತಿಕ ಸಂಗತಿಗಳ ಬಗ್ಗೆ ಆದ್ಯ ಗಮನವಿರಲಿ. 'ನವ ಮಾನವ' ಸದಾ ಜೀವಂತಿಕೆಯ ಚಿಲುಮೆಯಾಗಿರಲಿ.

**–ಯು.ಎನ್. ಸಂಗನಾಳಮಠ,** ಹೊನ್ನಾಳಿ

ನಿಮ್ಮ 'ಇಂದಿನ ಸಾಹಿತ್ಯ ಪರಿದೃಶ್ಯ' ತುಂಬ ಒಳ್ಳೆಯ ಲೇಖನ. ಪತ್ರಿಕೆ, ಅದರಲ್ಲೂ ಸಂಪಾದಕೀಯಗಳು ತುಂಬ ತೃಪ್ತಿಕೊಡುತ್ತವೆ.

**–ಡಾ. ವಿಜಯಾ,** ಬೆಂಗಳೂರು

'ನವ ಮಾನವ' ತಪ್ಪದೆ ಬರುತ್ತಿದೆ. ಓದುತ್ತಿದ್ದೇನೆ. ಈ ಮೂಲಕ ಒಂದು ಸಾವಿರದ ನೂರ ಇಪ್ಪತ್ತೈದು ರೂಪಾಯಿಗಳ ಡಿ.ಡಿ ಕಳಿಸುತ್ತಿರುವೆ, ಸ್ವೀಕರಿಸಿ. ಈಗಾಗಲೇ ಅನೇಕರು ಹೇಳಿರುವಂತೆ ಮುಖ್ಯ ವಾಹಿನಿ ಮಾಧ್ಯಮಗಳು ಕೈಬಿಟ್ಟಿರುವ ಅನೇಕ ಮುಖ್ಯ ಸಂಗತಿಗಳು 'ನವ ಮಾನವ'ದಲ್ಲಿ ಕಾಣಿಸಿಕೊಂಡು ಪತ್ರಿಕೆ ವಿಶಿಷ್ಟವೆನಿಸಿದೆ.

**–ಜಿ.ಎಸ್. ಜಯದೇವ,** ಚಾಮರಾಜನಗರ

ಇಂದಿನ ಸಾಹಿತ್ಯ ಪರಿದೃಶ್ಯ ಕುರಿತ ಲೇಖನವನ್ನು ಈಗಷ್ಟೇ ಓದಿ ಮುಗಿಸಿದೆ. ಸಾಹಿತ್ಯ ಪ್ರಸ್ಥಾನಗಳ ರಾಜಕಾರಣ ಇವೊತ್ತಿನ ಆರ್ಥಿಕೀಕೃತ ಸಾಹಿತ್ಯ 'ಶ್ರೇಷ್ಠಿ'ಗಳನ್ನು ಸರಿಯಗಿ ಗುರುತಿಸಿದ್ದೀರಿ. ಬೆಂಗಳೂರು ಗುಂಪುಗಳಕಾರ್ಯಾಚರಣೆಗಳಂತೂ ಭೀಕರ! ನಮ್ಮಂಥವರು ಅವರಿಗೆ ಅಸ್ಪೃಶ್ಯರೇ ಸರಿ.

**–ಕೆ.ಪಿ. ಮೃತ್ಯುಂಜಯ,** ಬಜಗೋಳಿ

ಸೆಪ್ಟಂಬರ್ ಸಂಚಿಕೆಯಲ್ಲಿನ ಫುಕುಶಿಮಾ ಮತ್ತು ಡರ್ಬನ್ ಮಾತುಕತೆ ಕುರಿತ ಎರಡೂ ಮುಖ್ಯ ಲೇಖನಗಳು ಸಮಾಜವಾದಿ ದರ್ಶನದ ವಿಶಾಲ ವ್ಯಾಪ್ತಿಯನ್ನು ಪರಿಚಯ ಮಾಡಿಕೊಡುವಂತಿವೆ. ಕಿಡಿಗೇಡಿಯ ಕಿರಣಗಳಿಂದಾಗಿ ಪತ್ರಿಕೆಗೆ ಒಂದು ಮಂದಸ್ಮಿತ ಪ್ರಾಪ್ತವಾಗಿದೆ. ಹಾಗೇ 'ಇದು ಭಾರತ! ಇದು ಭಾರತ!! ಅಂಕಣ ಕೂಡ ಇಂದಿನ ವಸ್ತುಸ್ಥಿತಿಯನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವಂತಿದೆ.

**–ಎನ್ ಸುರೇಶ್ ಬಾಬು,** ಚಿಕ್ಕಮಗಳೂರು



## ಸದ್ದು! ವಿಚಾರಣೆ ನಡೆಯುತ್ತಿದೆ!!

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ನ್ಯಾಯಾಂಗದ ಇಂದಿನ ಪರಿಸ್ಥಿತಿಯ ಬಗ್ಗೆ ಬರೆಯುತ್ತಾ, ಅದನ್ನು ರಾಷ್ಟ್ರ ಕಲ್ಪನೆಯ ಚರ್ಚೆಗೆ ತಂದು ನಿಲ್ಲಿಸಿದ್ದೀರಿ, ಅದು ಅರ್ಥವಾಗುತ್ತಿಲ್ಲ ಎಂದು ಕೆಲವು ಓದುಗರು ತಿಳಿಸಿದ್ದಾರೆ. ಅನ್ಯಾಯ ಸಂಭವಿಸುವುದು ಒಂದು ಸಂದರ್ಭದಲ್ಲಿ, ಒಂದು ಸ್ಥಳದಲ್ಲಿ. ಒಂದು ಕಾಲದಲ್ಲಿ. ಅದರ ಪರಿಶೀಲನೆ ಮತ್ತು ಇತ್ಯರ್ಥದ ಕೆಲಸವನ್ನು ಆ ಸಂದರ್ಭ, ಸ್ಥಳ ಮತ್ತು ಕಾಲಗಳಿಂದ ದೂರ ದೂರಕ್ಕೆ ಒಯ್ದಷ್ಟೂ ಅದು ಅಸ್ಪಷ್ಟತೆ, ಜಟಿಲತೆ, ತಂತ್ರ–ಕುತಂತ್ರಗಳಿಗೆ ಈಡಾಗುತ್ತಾ ಹೋಗುತ್ತದೆ. ಇಂದು ನಾವು ಅಳವಡಿಸಿಕೊಂಡಿರುವ ವ್ಯಾಜ್ಯ ಪರಿಹಾರ ವಿಧಾನ ಅಥವಾ ಆಧುನಿಕ ನ್ಯಾಯಾಂಗ ಪದ್ಧತಿ ಈ ಅಪಾಯಗಳಲ್ಲೇ ಹುಟ್ಟಿದುದಾಗಿದೆ. ಕಾರಣ ಬ್ರಿಟಿಷರು ತಮ್ಮ ಸಾಮ್ರಾಜ್ಯ ವಿಸ್ತರಣಾ ನೀತಿಯ ಮೂಲಕ ಕಟ್ಟಿಕೊಟ್ಟ ಏಕ ಕೇಂದ್ರಿತ ರಾಷ್ಟ್ರ ಕಲ್ಪನೆ ಮತ್ತು ಅದಕ್ಕೆ ಅಗತ್ಯವಾಗಿ ಅವರು ರೂಪಿಸಿಕೊಂಡ ಆಡಳಿತ ವಿಧಾನ ಮತ್ತು ಅದು ಒತ್ತಾಯಿಸುವ ಏಕ ರೂಪದ ಅಂದರೆ ಏಕ ಪರಿಭಾಷೆಯ ನ್ಯಾಯ ಪರಿಹಾರ ವಿಧಾನ. ನಮ್ಮ ಸಂವಿಧಾನದ ಮೂಲಸ್ಫೂರ್ತಿ ಬ್ರಿಟಿಷ್ ಪ್ರಭುತ್ವದ ೧೯೩೫ ಭಾರತ ರಕ್ಷಣಾ ಕಾಯಿದೆ ಎಂಬುದನ್ನು ಅರಿತರೆ, ಎಲ್ಲವೂ ಸ್ಪಷ್ಟವಾದೀತು. ಸ್ಪಷ್ಟವಾಗದಿದ್ದರೆ, ಹೋದ ಸಂಚಿಕೆಯಲ್ಲಿ ತಿಳಿಸಿದಂತೆ ರುಚಿಕಾ ಗಿರ್ಹೋತ್ರಾ ಮೊಕದ್ದಮೆಯ ವಿವರಗಳನ್ನು ಇಲ್ಲಿ ನೀಡಲಾಗುತ್ತಿದೆ. ನಂತರ ನಿವೃತ್ತ ನ್ಯಾಯಮೂರ್ತಿಯೊಬ್ಬರ ಲೇಖನವನ್ನೂ ನೀಡಲಾಗುತ್ತಿದೆ. ದಯವಿಟ್ಟು ಓದಿ ತಿಳಿದುಕೊಳ್ಳಿರಿ.–ಸಂ

## ರುಚಿಕಾ ಗಿರ್ಹೋತ್ರಾ ಪ್ರಕರಣವೂ, ಕಾನೂನುಬದ್ಧ ಆಡಳಿತವೂ...



**ಚಂ**ಡೀಗಢದ ಸೇಕ್ರೆಡ್ ಹಾರ್ಟ್ ಶಾಲೆಯ ೯ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದ ೧೪ ವರ್ಷಗಳ ಬಾಲೆ ರುಚಿಕಾ ಗಿರ್ಹೋತ್ರಾ ೧೯೯೦ರ ಆಗಸ್ಟ್‌ನಲ್ಲಿ ಅದೇ ನಗರದ ಟೆನ್ನಿಸ್ ಕ್ಲಬ್‌ನಲ್ಲಿ ತನ್ನ ಗೆಳತಿ ಆರಾಧನಾಳೊಂದಿಗೆ ಟೆನ್ನಿಸ್ ತರಬೇತಿಗೆ ಹೋದ ಒಂದು ಸಂಜೆ ಆ ಕ್ಲಬ್ಬಿನ ಮುಖ್ಯಸ್ಥನೂ, ಹರ್ಯಾಣದ ಐ.ಜಿ.ಪಿ.ಯೂ ಅಗಿದ್ದ ಶಂಭುಪ್ರಸಾದ್ ರಾಥೋಡ್‌ನಂದ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾಳೆ. ಈ ಕಿರುಕುಳವನ್ನು ಅವಳು ಪ್ರತಿಭಟಿಸಿ, ಅದರಿಂದಾಗಿ ಅದು ನಿಲ್ಲುವುದೆಂದು ನಿರೀಕ್ಷಿಸಿದಳಾದರೂ, ನಿರೀಕ್ಷೆ ಸುಳ್ಳಾದ ಕೂಡಲೇ ಅದನ್ನು ಗೆಳತಿಯೊಂದಿಗೆ ಚರ್ಚಿಸಿ ಬ್ಯಾಂಕ್ ಮ್ಯಾನೇಜರ್ ಆಗಿದ್ದ ತನ್ನ ತಂದೆ ಸುಭಾಷ್ ಗಿರ್ಹೋತ್ರಾ ಮತ್ತು ಎಂಜಿನಯರ್ ಆಗಿದ್ದ ಆರಾಧನಾಳ ತಂದೆ ಆನಂದ ಪ್ರಕಾಶ್‌ಗೆ ತಿಳಿಸುತ್ತಾಳೆ. ಈ ಸುದ್ದಿ ಆ ಟೆನ್ನಿಸ್ ಕ್ಲಬ್ಬಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದ ಇತರ ಕುಟುಂಬಗಳಿಗೆ ಹರಡಿ ಅವರೆಲ್ಲ ಸಭೆ ಸೇರಿ ಈ ಬಗ್ಗೆ ದೂರು

ದಾಖಲಿಸಬೇಕೆಂದು ಈ ಇಬ್ಬರು ಹಿರಿಯರನ್ನೂ ಒತ್ತಾಯಿಸುತ್ತಾರೆ. ಆರೋಪಿ ಹಿರಿಯ ಪೋಲೀಸ್ ಅಧಿಕಾರಿಯಾದುದರಿಂದ ಈ ಇಬ್ಬರೂ ರಾಜ್ಯದ ಗೃಹ ಕಾರ್ಯದರ್ಶಿಯನ್ನು ಭೇಟಿ ಮಾಡಿ ದೂರು ಸಲ್ಲಿಸುತ್ತಾರೆ.

ಇದರ ವಾಸನೆ ಹಿಡಿದ ರಾಥೋಡ್ ತನ್ನ ಜಾತಿಯ ರಾಜಕೀಯ ಪುಢಾರಿಯೊಬ್ಬನ ಸಹಾಯ ಪಡೆದು ಗಿರಹೋತ್ರಾ ಮನೆ ಮುಂದೆ ಗಲಾಟೆ ಮಾಡಿಸುವುದಲ್ಲದೆ, ಕೆಳ ಅಧಿಕಾರಿಗಳಿಗೆ ಹೇಳಿ ಸುಭಾಷ್ ಮತ್ತು ಆನಂದ ಪ್ರಕಾಶ್ ವಿರುದ್ಧ ಕಳ್ಳತನ, ಕೊಲೆ ಸೇರಿದಂತೆ ಹಲವು ಸುಳ್ಳು ಕೇಸುಗಳನ್ನು ಹಾಕಿ ಹೆದರಿಸುವ ಪ್ರಯತ್ನ ಮಾಡುತ್ತಾರೆ. ಹಾಗೇ ಸುಭಾಷ್ ಗಿರ್ಹೋತ್ರಾರ ವರ್ಗಾವಣೆಯ ಸರಣಿ ಆರಂಭವಾಗುತ್ತದೆ. ಈ ಮಧ್ಯೆ ರಾಜ್ಯದ ಡಿಜಿಪಿಯವರಿಂದ ನಡೆದ ದೂರಿನ ವಿಚಾರಣೆ ಸೆಪ್ಟಂಬರ್‌ನಲ್ಲಿ ರಾಥೋಡರನ್ನು ಅಪರಾಧಿಯೆಂದು ಸೂಚಿಸುತ್ತದೆ. ಇದರಿಂದ ಕೆರಳಿದ ರಾಥೋಡ್ ರುಚಿಕಾಳ ಶಾಲೆಯ ಮೇಲೆ ಒತ್ತಡ ತಂದು ಅವಳನ್ನು ಶಾಲೆಯಿಂದ ಹೊರಹಾಕಿಸುತ್ತಾನೆ. ಆದರೆ ಜಿಲ್ಲಾಧಿಕಾರಿ ತನಿಖೆ ನಡೆಸಿ ಶಾಲೆಯ ತೀರ್ಮಾನವನ್ನು ರದ್ದುಗೊಳಿಸಿದಾಗ ಅವಳ ವಿರುದ್ಧ ಬೀದಿ ರೌಡಿಗಳನ್ನು ಬಿಟ್ಟು ಹಿಂಸೆ ನೀಡುವ ಪರಿಪಾಠ ಆರಂಭವಾಗುತ್ತದೆ. ಗೆಳತಿ ಆರಾಧನಾ ಮೇಲೆಯೂ ವಿವಿಧ ಮೊಕದ್ದಮೆಗಳನ್ನು ದಾಖಲಿಸಲಾಗುತ್ತದೆ. ಸಾಲದೆಂಬಂತೆ ರುಚಿಕಾಳ ೧೩ ವರ್ಷಗಳ ತಮ್ಮ ಆಶುವಿನ ಮೇಲೆ ಕಾರು ಕಳ್ಳತನ ಸೇರಿದಂತೆ ಐದು ಕಳ್ಳತನದ ಕೇಸುಗಳನ್ನು ದಾಖಲಿಸಲಾಗುತ್ತದೆ,

ಇದ್ದಕ್ಕಿದ್ದಂತೆ ಒಂದು ದಿನ ಆಶುವನ್ನೂ, ಅವನ ಅಕ್ಕ ರುಚಿಕಾಳನ್ನೂ ಬೀದಿ ಬದಿಯಿಂದ ಜೀಪಿನಲ್ಲಿ ಹಾರಿಸಿಕೊಂಡು ಹೋದ ಅಪರಾಧ ವಿಭಾಗದ ಪೋಲೀಸರು ಅವರಿಬ್ಬರನ್ನೂ ಠಾಣೆಯಲ್ಲಿರಿಸಿ ಆಶುಗೆ ಚಿತ್ರಹಿಂಸೆ ನೀಡಿ ಆತನಿಂದ ತಾನು ೧೧ ಕಾರುಗಳನ್ನು ಕದ್ದಿರುವುದಾಗಿ ಬರೆದುಕೊಡಲು ಒತ್ತಾಯಿಸುತ್ತಾರೆ. ರುಚಿಕಾಳನ್ನು ದೂರು ಹಿಂಪಡೆಯದಿದ್ದರೆ ಅವಳ ಮನೆಯವರಿಗೆಲ್ಲ ಇದೇ ಗತಿಯುಂಟಾಗುವುದೆಂದು ಹೆದರಿಸಿ ಮನೆಗೆ ಕಳಿಸುತ್ತಾರೆ. ನಂತರ ಆ ಬಾಲಕನ ಕೈಗಳಿಗೆ ಕೋಳ ತೊಡಿಸಿ ಅವನ ಮನೆಯ ಬೀದಿಯಲ್ಲಿ ಮೆರವಣಿಗೆ ಮಾಡುತ್ತಾರೆ. ಕೆಲವೇ ದಿನಗಳಲ್ಲಿ ರುಚಿಕಾ ತನ್ನ ಮನೆಯರಿಗೆ ಆಗುತ್ತಿದ್ದ ಈ ಹಿಂಸೆಯನ್ನು ಸಹಿಸಲಾರದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ರುಚಿಕಾಳ ಶವಪರೀಕ್ಷೆಯ ವಿಷಯದಲ್ಲೂ ತಲೆ ಹಾಕಿದ ರಾಥೋಡ್, ರುಚಿಕಾಳ ಹೆಸರನ್ನು ಬಾಲ್ಯದ ಅವಳ ಮುದ್ದು ಹೆಸರಾದ ರೂಬಿ ಎಂದು ಬದಲಿಸಿ ಬರೆಯುವಂತೆ ಪ್ರಭಾವ ಬೀರಿ ಅದರ ವರದಿಯನ್ನೇ ತಿದ್ದಿಸುತ್ತಾನೆ.

೧೯೯೪ರಲ್ಲಿ ಚೌಟಾಲ ಸರ್ಕಾರ ರಾಥೋಡ್‌ಗೆ ಡಿಜಿಪಿಯಾಗಿ ಬಡ್ತಿ ನೀಡುವುದಲ್ಲದೆ ಆತನಿಗೆ ರಾಷ್ಟ್ರಪತಿ ಪದಕಕ್ಕಾಗಿ ಶಿಫಾರ್ಸೂ ಮಡುತ್ತದೆ! ಮಾಧ್ಯಮಗಳ ಗಲಾಟೆಯಿಂದ ಅದು ಅಲ್ಲೇ ನಿಲ್ಲುತ್ತದೆಯಷ್ಟೆ. ಈ ನಡುವೆ ಆಶುವಿನ ಮೇಲೇ ಹೊರಿಸಲಾಗಿದ್ದ ಎಲ್ಲ ಮೊಕದ್ದಮೆಗಳೂ ಅಪ್ಪಟ ಸುಳ್ಳೆಂದು ನ್ಯಾಯಾಲಯ ತೀರ್ಪು ನೀಡಿ ರಾಥೋಡ್‌ನ ಕೈಗೊಂಬೆಯಾಗಿ ವರ್ತಿಸುವ ಮೂಲಕ ಈ ಬಾಲಕನ ಮೇಲಿನ ಈ ಹಿಂಸಾಕಾಂಡದ ರೂವಾರಿಯಾದ ಅಪರಾಧ ವಿಭಾಗದ ಪೋಲೀಸ್ ವರಿಷ್ಠನಿಗೆ ಛೀಮಾರಿ ಹಾಕುತ್ತದೆ. ಆದರೆ ಆತನಿಗೆ ಪರಿಹಾರವಾಗಿ ನಂತರವೇ ರಾಜ್ಯ ಸರ್ಕಾರ ರಾಜ್ಯದ ಐ.ಜಿ.ಪಿ.ಯಾಗಿ ಬಡ್ತಿ ನೀಡುತ್ತದೆ!

ರಾಥೋಡ್ ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಹುಕುಂಸಿಂಗ್, ಭಜನ್‌ಲಾಲ್ ಮತ್ತು ಚೌಟಾಲರನ್ನು ತನ್ನ ಸಂಪರ್ಕಗಳ ಮೂಲಕ ಪ್ರಭಾವಿಸಿ, ತನ್ನ ವಿರುದ್ಧದ ವರದಿಯ ಬಗ್ಗೆ ಸರ್ಕಾರ ಏನೂ ಕ್ರಮ ಕೈಗೊಳ್ಳದಂತೆ ಏಳು ವರ್ಷಗಳ ಕಾಲ ಯಶಸ್ವಿಯಾಗಿ ನೋಡಿಕೊಳ್ಳುತ್ತಾನೆ. ಆ ಮೂಲಕ ರುಚಿಕಾಳ ಕುಟುಂಬ ಸಂಪೂರ್ಣ ಹಾಳಾಗಿ ಸುಸ್ತಾಗಿ ಕೂರುವಂತೆ ಮಾಡಿರುತ್ತಾನೆ. ಆದರೆ ಮಗಳು ಅರಾಧನಾಳನ್ನು ಆಸ್ಟ್ರೇಲಿಯಾಗೆ ಮದುವೆ ಮಾಡಿ ಕಳಿಸಿದ ನಂತರ ಆನಂದ ಪ್ರಕಾಶ್ ಚುರುಕಾಗುತ್ತಾರೆ. ಅವರು ಮೂರು ವರ್ಷಗಳ ಕಾಲ ಎಡಬಿಡದೆ ಹೋರಾಡಿ, ೧೯೯೭ರಲ್ಲಿ ರಾಥೋಡ್‌ನ ವಿರುದ್ಧದ ವರದಿಯ ಒಂದು ಪ್ರತಿಯನ್ನು ಪಡೆದು ಹೈಕೋರ್ಟಿನ ಮುಂದೆ ಹಾಜರುಪಡಿಸಿ ರಾಥೋಡ್ ವಿರುದ್ಧ ಕ್ರಮಕ್ಕೆ ಅರ್ಜಿ ಹಾಕುತ್ತಾರೆ. ಇಡೀ ಪ್ರಕರಣದ ವಿವರ ತಿಳಿದಿದ್ದ ಪಂಕಜ್ ಭಾರದ್ವಾಜ್ ಎಂಬ ಸಾರ್ವಜನಿಕ ಹಿತಾಸಕ್ತಿಯ ವಕೀಲರೊಬ್ಬರು ಇವರ ಪರ ಉಚಿತವಾಗಿ ವಕಾಲತ್ತು ವಹಿಸಿಕೊಳ್ಳಲು ಮುಂದೆ ಬರುತ್ತಾರೆ. ಇದರ ಫಲವಾಗಿ ೧೯೯೮ರಲ್ಲಿ ಪಂಜಾಬ್ ಮತ್ತು ಹರ್ಯಾಣಾ ಹೈಕೋರ್ಟು ಇಡೀ ಪ್ರಕರಣವನ್ನು ಸಿ.ಬಿ.ಐ.ಗೆ ತನಿಖೆಗಾಗಿ ಒಪ್ಪಿಸುತ್ತದೆ. ಇದಕ್ಕಾಗಿ ರಾಥೋಡ್ ಪ್ರತೀಕಾರವಾಗಿ ರಾಜ್ಯದ ರಾಜಕಾರಣಿಗಳು ಮತ್ತು ಅಧಿಕಾರಗಳ ಮೇಲಿನ ತನ್ನ 'ಪ್ರಭಾವ'ದ ಮೂಲಕ ಆನಂದ್ ಪ್ರಕಾಶ್ ವಿರುದ್ಧ ಕಾರ್ಯಾಚರಣೆ ನಡೆಸಿ ಅವರ ಹಿಂಬಡ್ತಿ, ಅಮಾನತ್ತು, ಕೊನೆಗೆ ಕಡ್ಡಾಯ ನಿವೃತ್ತಿಗೆ ಕಾರಣನಾಗುತ್ತಾನೆ. ಆದರೆ ಆನಂದಪ್ರಕಾಶ್ ಇದರ ವಿರುದ್ಧ ಹೋರಾಡಿ ಅರ್ಹ ಪರಿಹಾರ ಪಡೆಯುತ್ತಾರೆ.

ಕೋರ್ಟು ಆರು ತಿಂಗಳಲ್ಲಿ ತನಿಖೆ ಪೂರೈಸಿ ಆರೋಪ ಪಟ್ಟಿ ದಾಖಲಿಸಬೇಕೆಂದೂ ಸೂಚಿಸಿತ್ತಾದರೂ, ರಾಥೋಡ್ ದೆಹಲಿಯ ಸಿ.ಬಿ.ಐ. ಕಛೇರಿಯ ಸಿಬ್ಬಂದಿಯ ಮೇಲೂ ಹಲವು ಹಂತಗಳಲ್ಲಿ ಪ್ರಭಾವ ಬೀರುವ ಪ್ರಯತ್ನಗಳನ್ನು ಮಾಡುತ್ತಾ, ತನಿಖೆ ಕ್ಷಿಪ್ರ ಗತಿಯಲ್ಲಿ ಮುಂದುವರೆಯದಂತೆ ಕಾನೂನಿನ ಅಡೆ ತಡೆಗಳನ್ನು ಒಡ್ಡುತ್ತಾ ಹೋದ ಪರಿಣಾಮವಾಗಿ ಎರಡು ವರ್ಷಗಳ ನಂತರ, ೨೦೦೦ರಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗುತ್ತದೆ. ಆದರೆ ಇದರಲ್ಲಿ ರುಚಿಕಾಳ ಆತ್ಮಹತ್ಯೆಗೆ ಪ್ರಚೋದಿಸಿದ ಆರೋಪ ಸೇರಿರದಿದ್ದ ಕಾರಣ ಎರಡು ವರ್ಷಗಳ ಕಾಲ ಮತ್ತೆ ಎರಡೂ ಕಡೆ ವಾದಗಳು ನಡೆದು, ಸಿ.ಬಿ.ಐ. ವಿಶೇಷ ಕೋರ್ಟಿನ ನ್ಯಾಯಾಧೀಶ ಜಗದೇವಸಿಂಗ ಧಂಜಾಲ್ ಸಿ.ಬಿ.ಐ.ನ್ನು ಕಟುವಾಗಿ ಟೀಕಿಸಿ, ಆತ್ಮಹತ್ಯೆ ಪ್ರಚೋದನೆಯ ಅರೋಪವನ್ನು ಸೇರಿಸುವಂತೆ ಆದೇಶಿಸುತ್ತಾರೆ. ಆದರೆ ಇದರ ವಿರುದ್ಧ ರಾಥೋಡ್ ಮೇಲ್ಮನವಿ ಸಲ್ಲಿಸದಾಗ ಅದು ಮತ್ತೆ ಒಂದು ವರ್ಷ ವಿಚಾರಣೆ ನಡೆದು, ಪಂಜಾಬ್ ಹೈಕೋರ್ಟಿನ ನ್ಯಾ॥ ಕೆ.ಸಿ. ಕಥೂರಿಯಾ ರಾಥೋಡ್ ಪರವಾಗಿ ತೀರ್ಪು ನೀಡುತ್ತಾರೆ. ಇದೇಕೆಂದು ಮಾಧ್ಯಮಗಳು ಕೆದಕಿ ನೋಡಿದಾಗ, ಈ ನ್ಯಾ॥ ಕಥೂರಿಯಾ, ಗಿರ್ಹೋತ್ರಾರ ಮನೆಯ ಪಕ್ಕದ ಮನೆಯ ನಿವಾಸಿಯಾಗಿದ್ದು, ಇಬ್ಬರ ನಡುವೆ ಆಸ್ತಿಯೊಂದಕ್ಕೆ ಸಂಬಂಧಿಸಿದಂತೆ ಜಟಾಪಟಿ ನಡೆದಿತ್ತು ಮತ್ತು ಇವರ ಹತ್ತಿರದ ಸಂಬಂಧಿಯಾದ ಓ.ಪಿ. ಕಥೂರಿಯಾ ರಾಥೋಡ್ ಅಧ್ಯಕ್ಷನಾಗಿದ್ದ ಟೆನ್ನಿಸ್ ಕ್ಲಬ್ಬಿನ ಪ್ರತಿಷ್ಠಿತ ಪದಾಧಿಕಾರಿಗಳಲ್ಲೊಬ್ಬ ಎಂದು ಗೊತ್ತಾಗುತ್ತದೆ! ಅಷ್ಟೇ ಅಲ್ಲ, ರಾಥೋಡ್ ವಿರುದ್ಧ ತೀರ್ಪು ನೀಡಿದ ನ್ಯಾ॥ ಧಂಜಾಲ್ ಎರಡು ವರ್ಷಗಳ ನಂತರ ಕಡ್ಡಾಯ ನಿವೃತ್ತಿಗೆ ಒಳಗಾಗುತ್ತಾರೆ ಮತ್ತು ನ್ಯಾ॥ ಕಥೂರಿಯಾ ಸೇವಾ ನಿವೃತ್ತಿಯ ನಂತರ ಹರ್ಯಾಣಾದ ಗ್ರಾಹಕ ವಿವಾದ ಆಯೋಗದ ಅಧ್ಯಕ್ಷರಾಗಿ ನೇಮಕಗೊಳ್ಳುತ್ತಾರೆ!

ಅದೇನೇ ಇರಲಿ, ಲೈಂಗಿಕ ದುರ್ವರ್ತನೆಯ ಮೊಕದ್ದಮೆಯ ವಿಚಾರಣೆಯನ್ನು ರಾಥೋಡ್ ಕಾನೂನುಗಳಲ್ಲಿನ ದೌರ್ಬಲ್ಯಗಳನ್ನು ಬಳಸಿಕೊಂಡು ವಿಚಾರಣೆಯನ್ನು ಮತ್ತೆ ಏಳು ವರ್ಷಗಳ ಕಾಲ ಎಳೆಯುವುದರಲ್ಲಿ ಯಶಸ್ವಿಯಾಗುತ್ತಾರೆ. ಮೊಕದ್ದಮೆ ಕೋರ್ಟಿನಿಂದ ಕೋರ್ಟಿಗೆ ವರ್ಗಾವಣೆಯಾಗುತ್ತಾ, ಅಂತಿಮವಾಗಿ ೪೦ ಮುಂದೂಡಿಕೆಗಳು ಮತ್ತು ೪೦೦ಕ್ಕೂ ಹೆಚ್ಚು ಆಲಿಕೆಗಳ ನಂತರ ಚಂಡೀಗಢದ ಸಿ.ಬಿ.ಐ. ಕೋರ್ಟು ರಾಥೋಡ್ ಅಪರಾಧಿಯೆಂದು ಘೋಷಿಸಿ, ಆರು ತಿಂಗಳ ಸೆರೆವಾಸ ಮತ್ತು ಒಂದು ಸಾವಿರ ರೂಪಾಯಿಗಳ ದಂಡ ಪಾವತಿಯ ಶಿಕ್ಷೆ ಪ್ರಕಟಿಸುತ್ತದೆ. ಇದು ಆಗುವುದು ಅಪರಾಧ ನಡೆದ ೧೯ ವರ್ಷಗಳ ನಂತರ!

ಆಯಿತು, ಇಷ್ಟಾದರೂ ಆಯಿತಲ್ಲಾ ಎಂದು ಯಾರಾದರೂ ಸಮಾಧಾನ ಪಟ್ಟುಕೊಳ್ಳುವವರು ಬೆಚ್ಚಿ ಬೀಳುವಂತೆ, ಹತ್ತೇ ನಿಮಿಷಗಳಲ್ಲಿ ರಾಥೋಡ್ ಹತ್ತು ಸಾವಿರ ರೂಪಾಯಿಗಳ ಭದ್ರತೆ ಒದಗಿಸಿ ಜಾಮೀನು ಪಡೆದು ನಿರಾಳನಾಗುತ್ತಾನೆ! ಸಾರ್ವಜನಿಕರ ಹಾಹಾಕಾರ ಮತ್ತು ಮಾಧ್ಯಮಗಳ ಒತ್ತಡದಿಂದಾಗಿ ಶಿಕ್ಷೆ ಹೆಚ್ಚಿಸುವಂತೆ ಸಿ.ಬಿ.ಐ. ಮೇಲ್ಮನವಿ ಸಲ್ಲಿಸುತ್ತದೆ. ಇದರ ಪರಿಣಾಮವಾಗಿ ಒಂದು ವರ್ಷದ ವಿಚಾರಣೆ ನಡೆದು

ರಾಥೋಡ್‌ನ ಶಿಕ್ಷೆಯ ಪ್ರಮಾಣ ಒಂದೂವರೆ ವರ್ಷಗಳ ಸಶ್ರಮ ಸೆರೆವಾಸಕ್ಕೆ ಹೆಚ್ಚುತ್ತದೆ. ಆತನನ್ನು ಸೆರೆಮನೆಗೆ ದೂಡಲಾಗುತ್ತದೆ. ಆದರೆ ಕೆಲವೇ ದಿನಗಳಲ್ಲಿ ರಾಥೋಡ್ ಸರ್ವೋಚ್ಚ ನ್ಯಾಯಾಲಯದಲ್ಲಿ ಇದರ ವಿರುದ್ಧ ಮೇಲ್ಮನವಿ ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ವಿಜಯದ ನಗೆ ಬೀರುತ್ತಾನೆ. ಅಷ್ಟೇ ಅಲ್ಲ, ಈತನ ನಿವೃತ್ತಿ ವೇತನ ಪಾವತಿಯನ್ನು ಸ್ಥಗಿತಗೊಳಿಸಿದ್ದ ಕೇಂದ್ರ ಸರ್ಕಾರದ ಆದೇಶವನ್ನು ಕೇಂದ್ರ ಆಡಳಿತ ನ್ಯಾಯ ಮಂಡಳಿ ೨೦೧೧ರಲ್ಲಿ ರದ್ದುಪಡಿಸುತ್ತದೆ. ೨೦೧೨ರಲ್ಲಿ ಸರ್ವೋಚ್ಚ ನ್ಯಾಯಾಲಯ, ವಿಚಾರಣೆ ಇನ್ನೂ ಪೂರ್ಣಗೊಂಡಿಲ್ಲದ ಕಾರಣ ನೀಡಿ ನ್ಯಾಯ ಮಂಡಳಿಯ ಈ ಆದೇಶವನ್ನು ಎತ್ತಿ ಹಿಡಿಯುತ್ತದೆ!

ರಾಥೋಡ್‌ಗೆ ಈಗ ೭೦ ವರ್ಷ. ಈತನ ಪರವಾಗಿ ಕಾನೂನು ಹೋರಾಟವನ್ನು–ಅದನ್ನು ಹೋರಾಟವೆಂದು ಕರೆಯುವುದೇ ಆದರೆ–ಆತನ ವಕೀಲ ಪತ್ನಿ ಅಭಾ. ಆಕೆಗೆ ಈ 'ವಿಜಯೋತ್ಸವ' ಸಂದರ್ಭದ ಉಡುಗೊರೆಯಾಗಿ ರಾಥೋಡ್ ಎರಡೂವರೆ ಕೋಟಿ ರೂಪಾಯಿಗಳ ಬೆಲೆಯ ಒಂದು ಬಂಗಲೆ ಹಾಗೂ ಮರ್ಸಿಡೀಸ್ ಕಾರನ್ನು ನೀಡಿದ್ದಾನೆ. ಆ ಕಾರಿಗೆ ಆಕೆ ೯ ಲಕ್ಷ ರೂಪಾಯಿ ಹರಾಜು ಕೂಗಿ ೦೦೦೧ ಎಂಬ ವಿಶೇಷ ನೋಂದಣಿ ಸಂಖ್ಯೆಯನ್ನು ಪಡೆದುಕೊಂಡಿದ್ದಾಳೆ. ಆದರೆ ಆ ಕಡೆ ರಾಥೋಡ್ ವಿರುದ್ಧ ನ್ಯಾಯಕ್ಕಾಗಿ ಹೋರಾಟ ಮಾಡಿದವರಿಗೂ ವಯಸ್ಸಾಗಿ, ಅವರು ಬದುಕಿನಲ್ಲಿ ನೆಮ್ಮದಿ ಸೇರಿದಂತೆ ಎಲ್ಲವನ್ನೂ ಕಳೆದುಕೊಂಡು ಇನ್ನು ಹೋರಾಟ ಮುಂದುವರೆಸಲು ತಮ್ಮಿಂದಾಗದು ಎಂದು ಘೋಷಿಸಿದ್ದಾರೆ. ನ್ಯಾಯಾಂಗ, ರಾಷ್ಟ್ರ ಜೀವನದಲ್ಲಿ ಕಾನೂನಿನ ಆಡಳಿತವನ್ನು ಖಚಿತಪಡಿಸಿಕೊಳ್ಳಲು ತನ್ನ ಎಂದಿನ ಕಾನೂನಾತ್ಮಕ ಘನ ಗಾಂಭೀರ್ಯದಿಂದ ಈ ಎಲ್ಲವನ್ನೂ ನೋಡುತ್ತಿದೆ...

ಇನ್ನು ಇಲ್ಲಿ ಯಡ್ಯೂರಪ್ಪ ಮತ್ತವರ ಕುಟುಂಬ ಕಟ್ಟಾ, ಮತ್ತವರ ಕುಟುಂಬ, ಕುಮಾರಸ್ವಾಮಿ ಮತ್ತವರ ಸೋದರ ಮುಂತಾದವರ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ಖಟ್ಲೆಗಳು ಯಾವಾಗ ಎಲ್ಲಿಗೆ ಮುಟ್ಟಬಹುದೆಂದು ಯೋಚಿಸಿ!

**–ಡಿ.ಎಸ್.ನಾಗಭೂಷಣ**

# ನ್ಯಾಯಾಲಯಗಳೆಂಬ ಸೆರೆಮನೆಗಳು...

***ನ್ಯಾ|| ಬಿ.ಜೆ. ಕೋಚರ್**

**(ಬಾಂಬೇ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು)**



ಇದು ಅಷ್ಟೇನೂ ಹಳೆಯ ಕಥೆಯಲ್ಲ. ಆದರೂ ನೀವು ನಂಬಲಾರಿರೇನೋ... ಮುಂಬೈ ಹೈಕೋರ್ಟಿನ ನ್ಯಾಯಾಧೀಶರೊಬ್ಬರು ಸರ್ಕಾರಿ ನೌಕರನೊಬ್ಬನ ವಿಧವಾ ಪತ್ನಿಗೆ ಹತ್ತು ವರ್ಷಗಳಾದರೂ ನೀಡದಿದ್ದ ಅರ್ಹ ನಿವೃತ್ತಿ ವೇತನವನ್ನು ಲೆಕ್ಕ ಹಾಕಿ ಕೂಡಲೇ ಪಾವತಿಸುವಂತೆ ಸಂವಿಧಾನದ ೨೨೬ನೇ ವಿಧಿ ಪ್ರಕಾರ ವಿಶೇಷ ಅಧಿಕಾರ ಚಲಾಯಿಸಿ ಸರ್ಕಾರಕ್ಕೆ ಆದೇಶ ನೀಡಿದ ಪ್ರಕರಣವಿದು. ಇಲ್ಲಿನ ನಿಜವಾದ ಹೃದಯಸ್ಪರ್ಶಿ ಸಂಗತಿ ಎಂದರೆ, ಹಳ್ಳಿಯಿಂದ ಬಂದಿದ್ದ ೭೦ ವರ್ಷಗಳ ಆ ವೃದ್ಧ ವಿಧವೆ, ಈ ಸಂಬಂಧವಾಗಿ ನ್ಯಾಯಾಲಯದಲ್ಲಿ ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ. ಕೊನೆಗೆ, ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಎಂದಾದರೂ ಪರಿಗಣಿಸಬಹುದಾದ ಒಂದು ಅಂಚೆ ಕಾರ್ಡನ್ನೂ ಹಾಕಿರಲಿಲ್ಲ.

ಆಕೆ ಒಂದು ದಿನ ಈ ಘನತೆವೆತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಕಾರ್ಯ ಕಲಾಪ ನಡೆಯುತ್ತಿದ್ದ ವಿಭಾಗೀಯ ಪೀಠದ ಕೊಠಡಿಗೆ ನೇರ ಪ್ರವೇಶಿಸಿ ತನ್ನ ಮೊಮ್ಮೊಗನೊಂದಿಗೆ ಸಂಜೆ ೪.೪೫ರವರೆಗೆ ಕಾದಿದ್ದಳು. ಪೀಠ, ಅಂದು ಕೈಗೆತ್ತಿಕೊಳ್ಳಬೇಕಾದ ಇನ್ನಾವುದೇ ವಿಷಯ ಇಲ್ಲದಿರುವುದನ್ನು ಖಚಿತಪಡಿಸಿಕೊಂಡ ಆ ನ್ಯಾಯಾಧೀಶರು ಬೆಳಗಿನಿಂದ ಮೂಲೆಯಲ್ಲಿ ಕೂತಿದ್ದ ಆ ಮುದುಕಿಯನ್ನು ಗಮನಿಸಿ ಸಾಕ್ಷಿ ಕಟ್ಟೆಗೆ ಕರೆಸಿದರು. ಆಕೆ ಸಂಜೆವರೆಗೂ ಅಲ್ಲಿ ಕಾದಿರಲು ಏನು ಕಾರಣವೆಂದು ಕೇಳಿದರು. ಆ ಮುದುಕಿ ತನ್ನ ಗಂಡ ಸರ್ಕಾರಿ ಸೇವೆಯಲ್ಲಿದ್ದಾಗಲೇ ಮೃತ ಹೊಂದಿದ್ದು, ಸಂಬಂಧಿತ ಅಧಿಕಾರಿಗಳನ್ನು ನೂರಾರು ಬಾರಿ ಕಂಡು ಕೇಳಿಕೊಂಡಿದ್ದರೂ ತನಗೆ ಸಲ್ಲಬೇಕಾದ ನಿವೃತ್ತಿ ವೇತನ ಸಂದಿಲ್ಲವೆಂದು ತನ್ನ ಗೋಳನ್ನು ತೋಡಿಕೊಂಡಳು. ಅವಳನ್ನು ನೋಡಿಯೇ ನಿವೃತ್ತಿ ವೇತನವಿಲ್ಲದೆ ಅವಳು ಪಡುತ್ತಿರುವ ಪಾಡನ್ನು ಅರ್ಥ ಮಾಡಿಕೊಂಡ ನ್ಯಾಯಾಧೀಶರು ಕೂಡಲೇ ಅಲ್ಲಿ ಕೂತಿದ್ದ ಸರ್ಕಾರಿ ವಕೀಲರ ಸಹಾಯಕನೊಬ್ಬನನ್ನು ಕರೆದು ಆ ಮುದುಕಿ ಈವರೆಗೆ ಹೇಳಿದ್ದನ್ನು ಒಂದು ಕಾಗದದ ಮೇಲೆ ಬರೆದು ತಮಗೆ ಕೊಡಲು ತಿಳಿಸಿದರು. ಆ ಕಾಗದ ತಮ್ಮ ಕೈಗೆ ಸಿಕ್ಕ ಕೂಡಲೇ ಒಂದರೆಕ್ಷಣ ಅದರ ಮೇಲೆ ಕಣ್ಣಾಡಿಸಿದ ನ್ಯಾಯಾಧೀಶರು ಈ ಕಾಗದವನ್ನು ಒಂದು ಅರ್ಜಿಯಾಗಿ ಪರಿಗಣಿಸುವಂತೆಯೂ, ಮುಂದಿನ ದಿನವೇ ಅದನ್ನು ವಿಚಾರಣೆಗೆ ಇಡುವಂತೆಯೂ, ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ಮತ್ತು ಹಣಕಾಸು ಕಾರ್ಯದರ್ಶಿಗೂ ಮಧ್ಯಾಹ್ನ ೨.೪೫ರ ಹೊತ್ತಿಗೆ ನ್ಯಾಯಾಲಯದ ಮುಂದೆ ಹಾಜರಾಗುವಂತೆ ತುರ್ತು ಸೂಚನೆ ನೀಡುವಂತೆಯೂ ಆದೇಶ ಹೊರಡಿಸಿದರು.

ಮಾರನೆಯ ದಿನ ಇಡೀ ಇಲಾಖೆ ಸಂಬಂಧಿತ ಎಲ್ಲ ಕಡತಗಳೊಂದಿಗೆ ನ್ಯಾಯಾಲಯದ ಮುಂದೆ ಹಾಜರಿತ್ತು. ಎಲ್ಲರೂ ಗಾಬರಿಯಿಂದ ಉದ್ವಿಗ್ನರಾಗಿ ನಿಂತಿದ್ದರು. ಸರಿಯಾಗಿ ೨.೪೫ಕ್ಕೆ ಪ್ರಕರಣವನ್ನು ಕೂಗಲಾಯಿತು. ಸಹಾಯಕ ಸರ್ಕಾರಿ ಅಭಿಯೋಜಕರು ಸ್ವಲ್ಪ ಕಾಲಾವಕಾಶಕ್ಕಾಗಿ ಮನವಿ ಸಲ್ಲಿಸಿದರು. ಆದರೆ ಅವರ ಮನವಿಯನ್ನು 'ನಿಮ್ಮ ನೌಕರ ಕೊನೆಯುಸಿರೆಳೆದ ನಂತರ ಒಂದು ದಶಕಕ್ಕಿಂತಲೂ ಹೆಚ್ಚು ಕಾಲಾವಕಾಶವನ್ನು ನೀವು ಪಡೆದಿದ್ದೀರಿ. ಒಮ್ಮೆ ಆ ವಿಧವೆಯ ಮುಖ ನೋಡಿರಿ' ಎಂದು ಚುಟುಕಾಗಿ ಹೇಳಿ ತಿರಸ್ಕರಿಸಿದರು. ಕಾರ್ಯದಶಿ ಹೆಚ್ಚು ತಕರಾರು ಒಡ್ಡದೆ, ವಿಧವೆ ನಿವೃತ್ತಿ ವೇತನಕ್ಕೆ ಅರ್ಹಳೆಂದು ನೇರವಾಗಿ ಒಪ್ಪಿಕೊಂಡು, ಸಂಬಂಧಿತ ನೌಕರನು ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿದ್ದುದರಿಂದ ತಮ್ಮ ಇಲಾಖೆಗೆ ಆ ವಿವಿಧ ಇಲಾಖೆಗಳಿಂದ ಸೇವಾ ವಿವರ ಬಂದಿಲ್ಲದ ತಾಂತ್ರಿಕ ಕಾರಣಗಳಿಂದಾಗಿ ನಿವೃತ್ತಿ ವೇತನದ ನಿಖರ ಮೊಬಲಗನ್ನು ಲೆಕ್ಕ ಮಾಡಲಾಗಿಲ್ಲವೆಂದು ಹೇಳಿದರು. ಇದನ್ನು ಕೇಳಿದ ಕೂಡಲೇ ಗುಡುಗಿದ ನ್ಯಾಯಾಧೀಶರು ಇನ್ನು ೨೪ ತಾಸುಗಳೊಳಗಾಗಿ ಆ ವಿಧವೆಯ ಮೂರು ತಿಂಗಳ ಮಧ್ಯಂತರ ನಿವೃತ್ತಿ ವೇತನವನ್ನು ಅವಳ ಮನೆ ಬಾಗಿಲಿಗೆ ತಲುಪಿಸಬೇಕು ಮತ್ತು ಇನ್ನು ಮೂರು ತಿಂಗಳುಗಳೊಳಗಾಗಿ ನಿಯಮಿತ ನಿವೃತ್ತಿ ವೇತನ ಪ್ರತಿ ತಿಂಗಳೂ ಆಕೆಗೆ ತಲುಪುವಂತೆ ವ್ಯವಸ್ಥೆ ಮಾಡಬೇಕೆಂದು ಆಜ್ಞಾಪಿಸಿದರು. ಇದನ್ನು ಕೇಳಿದ ಆ ಮುದುಕಿ ಕರಗಿಹೋಗಿ ನ್ಯಾಯಾಧೀಶರ ಕಾಲು ಮುಟ್ಟಲು ಬಗ್ಗಿದಳು ಅವಳ ಕಣ್ಣೀರು ಅವರ ಪಾದಗಳನ್ನು ತೋಯ್ಸಿದವು..

ಘನತೆವೆತ್ತ ಈ ನ್ಯಾಯಾಧೀಶರು ನ್ಯಾಯಾಲಯಕ್ಕಿರುವ ಶಕ್ತಿ–ಸಾಮರ್ಥ್ಯವನ್ನೂ, ೨೨೬ರ ವಿಧಿಯ ಪ್ರಕಾರ ತಮಗೆ ದತ್ತವಾಗಿರುವ ಅನ್ಯಾಯವನ್ನು ನಿವಾರಿಸಿ ನ್ಯಾಯವನ್ನು ಒದಗಿಸುವ ಅಧಿಕಾರವನ್ನೂ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿದ್ದರು ಅದನ್ನು ಅವರು ಕೇವಲ ೨೪ ತಾಸುಗಳಲ್ಲಿ ಮಾಡಿದ್ದರು. ಅವರಿಗೆ ಅಂದವಾಗಿ ಬೆರಳಚ್ಚು ಮಾಡಿದ ಅರ್ಜಿಯಾಗಲೀ, ಬುದ್ಧಿವಂತ ವಕೀಲರ ದೀರ್ಘ ವಾದಗಳಾಗಲಿ

ಬೇಕಾಗಲಿಲ್ಲ. ಆದರೆ ಅದೇ ವೇಳೆಗೆ ಇದರಲ್ಲಿ ಕಾನೂನು ಬಾಹಿರವಾದದ್ದಾಗಲೀ, ಸಂವಿಧಾನ ವಿರೋಧಿಯಾದ್ದಾಗಲೀ ಏನೂ ಇರಲಿಲ್ಲ.

ಇಂದು ಅದೇ ಹೈಕೋರ್ಟಿದೆ, ಅದೇ ಸಂವಿಧಾನವಿದೆ, ಅದೇ ೨೨೬ರ ವಿಧಿಯಿದೆ, ಜನತೆಯ ಅದೇ ತರದ ಸಮಸ್ಯೆಗಳಿವೆ; ಆದರೆ ನ್ಯಾಯ ನೀಡಲು ತುದಿಗಾಲಲ್ಲಿ ನಿಂತ ತೀವ್ರ ಕರ್ತವ್ಯ ಪ್ರಜ್ಞೆಯುಳ್ಳ ನ್ಯಾಯಾಧೀಶರು ಇಲ್ಲವಾಗಿದ್ದಾರೆ. ಆ ಜನಾಂಗ ಸದ್ದಿಲ್ಲದೆ ಕಾಣೆಯಾಗಿದೆ. ಗಮನಿಸಿ, ಆ ನ್ಯಾಯಾಧೀಶ ಯಾವುದೇ 'ಸಿದ್ಧಾಂತ'ಕ್ಕೆ ಕಟಿಬದ್ಧನಾದ ವ್ಯಕ್ತಿಯಾಗಿರಲಿಲ್ಲ. ಸಾರ್ವಜನಿಕ ವೇದಿಕೆಗಳಿಂದ ವಿದ್ವತ್ಪೂರ್ಣ ಭಾಷಣಗಳನ್ನೇನೂ ಮಾಡಲಿಲ್ಲ. ಅಥವಾ ನ್ಯಾಯಾಂಗದ ಬಗ್ಗೆ ಇತ್ತೀಚೆಗೆ ಪ್ರಸ್ತಾಪವಾಗುವ ಯಾವುದೇ ನಿರ್ದಿಷ್ಟ 'ಪ್ರವೃತ್ತಿ'ಯ ಪ್ರತಿಪಾದಕರೂ ಆಗಿರಲಿಲ್ಲ. ಅವರಿಗೆ ಇದ್ದುದು ಒಂದೇ ಬದ್ಧತೆ. ಅದು ಸಾಂವಿಧಾನಿಕ ನ್ಯಾಯದ ಬದ್ಧತೆ.

ಅರ್ಪಣಾ ಮನೋಭಾವದ ಸಾರ್ವಜನಿಕ ಸೇವೆಗೆ ಪ್ರಸಿದ್ಧರಾಗಿರುವ, ಎಫ್. ಆರ್. ಸಿ.ಎಸ್. ಪದವಿ ಪಡೆದ ಪರಿಣತ ಹೃದಯ ತಜ್ಞರೊಬ್ಬರ ಈ ಕಥೆ ಕೇಳಿ. ೭೫ ವರ್ಷಗಳ ವಯಸ್ಸಿನ ಮತ್ತು ಕಾಯಿಲೆ ಹಿಡಿದು ಮಲಗಿರುವ ಹೆಂಡತಿಯಿರುವ ಈ ಮುದುಕರು ತಾವು ಸೇವೆ ಸಲ್ಲಿಸಿದ್ದ ರಾಜ್ಯ ಸರ್ಕಾರ ಮತ್ತು ಮುಂಬೈ ಮಹಾನಗರ ಪಾಲಿಕೆಗಳಿಂದ ತಮ್ಮ ನಿವೃತ್ತಿ ವೇತನ ಸಂದಾಯವಾಗಿಲ್ಲವೆಂದು ದೂರಿ ೧೯೯೪ರಲ್ಲಿ ಸಲ್ಲಿಸಿದ್ದ ಅರ್ಜಿ ಇನ್ನೂ ಇತ್ಯರ್ಥವಾಗಿಲ್ಲ. ನಿವೃತ್ತಿ ವೇತನ ಈ ದಂಪತಿಗಳ ಏಕೈಕ ವರಮಾನ ಮೂಲವಾಗಿದೆ ಮತ್ತು ಅದೇ ಅವರ ಬದುಕಿನ ಏಕೈಕ ಆಧಾರವಾಗಿದೆ ಎಂಬುದು ಗೊತ್ತಿದ್ದರೂ ಈ ವೃದ್ಧರನ್ನು ಕಳೆದ ೧೭ ವರ್ಷಗಳಿಂದ ಒಂದೇ ಸಮನೆ ನ್ಯಾಯಾಲಯದ ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ, ಒಂದು ರಜೆ ಪೀಠದಿಂದ ಇನ್ನೊಂದಕ್ಕೆ ಅಲೆಸಲಾಗುತ್ತಿದೆ. 'ನಾನು ನಿಮ್ಮ ಬದುಕನ್ನು ತುರ್ತು ಆಧಾರದ ಮೇಲೆ ಕಾಪಾಡಿದ್ದಕ್ಕೆ ನೀವು ತೋರಿಸುತ್ತಿರುವ ಕೃತಜ್ಞತೆ ಇದೇನಾ?' ಎಂದು ಆ ವೃದ್ಧ ವೈದ್ಯರು ಹೇಳಿದರೆ ಈ ವ್ಯವಸ್ಥೆಯ ಪ್ರತಿಕ್ರಿಯೆಯಾದರೂ ಏನಿದ್ದೀತು ಎಂದು ನನಗೆ ಆಶ್ಚರ್ಯವಾಗುತ್ತದೆ. ನಮ್ಮ ನ್ಯಾಯ ಪದ್ಧತಿ ಮಾನವತೆಯನ್ನೇ ಕಳೆದುಕೊಂಡಿದೆ.

ಈ ಪ್ರಕರಣದ ದುರದೃಷ್ಟಕರ ಭಾಗವೆಂದರೆ, ಇಬ್ಬರು ನ್ಯಾಯಾಧೀಶರ ವಿಭಾಗೀಯ ಪೀಠವು ಈ ವೃದ್ಧ ವೈದ್ಯರ ಅರ್ಜಿಯಲ್ಲಿ ಹುರುಳಿದೆ ಎಂದು ಹೇಳಿದರಾದರೂ, ಸಂಬಂಧಿತ ಅಧಿಕಾರಿಗಳಿಗೆ ಕೂಡಲೇ ನಿವೃತ್ತಿ ವೇತನ ಬಿಡುಗಡೆ ಮಾಡಬೇಕೆಂದು ಆದೇಶಿಸುವ ಧೈರ್ಯ ತೋರಲಾಗಲಿಲ್ಲ. ಆದರೂ ನ್ಯಾಯದ ಬಾಲ ಅಲ್ಲಾಡದಿರಲಿಲ್ಲ. ಪೀಠ ವೈದ್ಯರ ಮನವಿಯನ್ನು ಪುನರ್‌ಪರಿಶೀಲಿಸಿ ಅಂತಿಮ ನಿರ್ಧಾರಕ್ಕೆ ಬರುವಂತೆ ನಗರಪಾಲಿಕೆ ಆಯುಕ್ತರಿಗೆ ಶಿಫಾರ್ಸು ಮಾಡಿತು! ಆಯುಕ್ತ ಆ ಶಿಫಾರ್ಸನ್ನು ಮೂಲೆಗೆ ಒಗೆದು ಸುಮ್ಮನಾದನಷ್ಟೆ. ವೃದ್ಧ ವೈದ್ಯರ ನ್ಯಾಯಕ್ಕಾಗಿ ಹೋರಾಟದ ಇನ್ನೊಂದು ಸುತ್ತು ಈಗ ಆರಂಭವಾಗಿದೆ.

ಹೀಗೇ ಎಷ್ಟೊಂದು ಪ್ರಸಂಗಗಳನ್ನು ಹೇಳುತ್ತಾ ಹೋಗಬಹುದು! ವಯಸ್ಸಾಗುತ್ತಿರುವ ನಿವೃತ್ತ ಐ.ಎ.ಎಸ್. ಅಧಿಕಾರಿಯೊಬ್ಬರು ತಮ್ಮ ಪತ್ನಿಯ ಸಾವಿಗೆ ಅಸೀಮ ವೃತ್ತಿ ನಿರ್ಲಕ್ಷ್ಯದಿಂದ ಕಾರಣನಾದ ಸುಪ್ರಸಿದ್ಧ ಕ್ಯಾನ್ಸರ್ ಶಸ್ತ್ರಚಿಕಿತ್ಸಕನೊಬ್ಬನ ವಿರುದ್ಧ ಪರಿಹಾರ ಪಡೆಯಲು ೧೯೮೭ರಿಂದ ನಡೆಸುತ್ತಿರುವ ನ್ಯಾಯಾಂಗ ಹೋರಾಟ ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ. ಹೃದಯಹೀನ, ನಿರ್ದಯ ವ್ಯವಸ್ಥೆ ಸಾವಿನ ಕಡೆ ಸಾಗುತ್ತಿರುವ ಇಂತಹ ವೃದ್ಧರ ಪ್ರಕರಣಗಳ ಕಡೆ ಗಮನ ಕೊಡಲಾಗುತ್ತಿಲ್ಲ. ಏಕೆಂದರೆ ನಮ್ಮ ನ್ಯಾಯಾಧೀಶರುಗಳಿಗೆ ಜನರ ಬದುಕಿಗಿಂತ ಮಹತ್ವದ ವಿಷಯಗಳ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ...

ಮುಂಬೈ ಹೈಕೋರ್ಟೊಂದರಲ್ಲೇ ಇನ್ನೂ ವಿಚಾರಣೆ ಆರಂಭವಾಗಬೇಕಾದ ೪೦ ಸಾವಿರ ಅರ್ಜಿಗಳಿವೆ. ಇವುಗಳಲ್ಲಿ ೧೪ ಸಾವಿರ ಅರ್ಜಿಗಳು ನ್ಯಾಯಾಡಳಿತಾಧಿಕಾರಿ ಮತ್ತು ಹಿರಿಯ ಯಜಮಾನರುಗಳ ಆದೇಶಗಳಿಗಾಗಿ ಕಾಯುತ್ತಿವೆ. ಕೆಲವು ಅರ್ಜಿದಾರರು ತಮ್ಮ ಬದುಕಿನ ಪ್ಲಾಟಿನಂ ಮಹೋತ್ಸವದ ಅಂಚಿನಲ್ಲಿದ್ದಾರೆ. ಅವರು ನ್ಯಾಯದಾನ ವ್ಯವಸ್ಥೆಯ ಮೃತಶಿಲೆಗಳ ಮೇಲೆ ತಮ್ಮ ನ್ಯಾಯ ಹೋರಾಟದ ಸುವರ್ಣ ಮಹೋತ್ಸವದ ಸಾಲುಗಳನ್ನು ಕೆತ್ತಿಸಿಕೊಂಡಿದ್ದಾರೆ. ಇನ್ನು ಕೆಲವರು ತಮ್ಮ ಹೋರಾಟದ ವಾರಸುದಾರಿಕೆಯನ್ನು ತಮ್ಮ ಮಕ್ಕಳು–ಮೊಮ್ಮಕ್ಕಳುಗಳಿಗೆ ಬಿಟ್ಟು ಈ ಲೋಕವನ್ನೇ ತ್ಯಜಿಸಿ ಹೋಗಿದ್ದಾರೆ. ಇವರಿಗೆಲ್ಲ ಈ ವ್ಯವಸ್ಥೆಯು ತಮ್ಮ ಬದುಕಿನ ಸುವರ್ಣ ಮಹೋತ್ಸವವನ್ನೂ ಹೈಕೋರ್ಟಿನ ಕಡತಗಳ ಭಾರಕ್ಕೆ ಬಾಗಿಹೋಗಿರುವ ಕಪಾಟುಗಳ ಮೇಲೆ ಮತ್ತು ಪ್ಲಾಟಿನಂ ಮಹೋತ್ಸವವನ್ನು ಸರ್ವೋಚ್ಚ ನ್ಯಾಯಾಲಯದ ಭವ್ಯ ಪ್ರಾಂಗಣದಲ್ಲೂ ಆಚರಿಸಿಕೊಳ್ಳುವ ಅವಕಾಶದ ಭರವಸೆ ನೀಡಿದೆ.

ನ್ಯಾಯಾಲಯದ ಶಿರಸ್ತೇದಾರರೊಬ್ಬರು ನನಗೆ ಹೇಳಿದ ಯಾರಿಗಾದರೂ ರಕ್ತ ಕುದಿಯುವಂತೆ ಮಾಡುವ ಘಟನೆಯೊಂದನ್ನು ನಾನು ಮರೆಯಲಾರೆ. ಓರ್ವ ಹೆಚ್ಚುವರಿ ನ್ಯಾಯಾಡಳಿತಾಧಿಕಾರಿಗೆ ನ್ಯಾಯಾಧೀಶನಾಗಿ ಬಡ್ತಿ ನೀಡಿ ಹೈಕೋರ್ಟಿನ ಮೇಲ್ಮನವಿ ವಿಭಾಗದ ಕರ್ತವ್ಯಕ್ಕಾಗಿ ನಿಯೋಜಿಸಲಾಯಿತು. ವಿಚಾರಣೆಯಿಲ್ಲದೆ ಹತ್ತಾರು ವರ್ಷಗಳ ಕಾಲ ಸೆರೆಮನೆಗಳಲ್ಲಿ ಕೊಳೆಯುತ್ತಿದ್ದ ವಿಚಾರಣಾಧೀನ ಕೈದಿಗಳ ಅಪರಾಧಿ ಪ್ರಕರಣಗಳನ್ನು ತ್ವರೆಯಿಂದ ಇತ್ಯರ್ಥಪಡಿಸುವ ಕಳಕಳಿಯಿಂದ ಆ ಮೊಕದ್ದಮೆಗಳ ವಿಚಾರಣೆಯನ್ನು ಇವರ ಮುಂದೆ ಇಡಲಾಯಿತು. ಇದನ್ನರಿತ ಆ ಘನತೆವೆತ್ತ ನ್ಯಾಯಾಧೀಶ ಕೂಡಲೇ ಉರಿದೆದ್ದು, ತನ್ನ ಮುಂದೆ ಹಳೆಯ ಪ್ರಕರಣಗಳನ್ನು ಇಡಕೂಡದೆಂದು ಆಜ್ಞಾಪಿಸಿದರು! ಶಿರಸ್ತೇದಾರರು ಮತ್ತು ಕೋರ್ಟಿನ ಗುಮಾಸರೂ ವಿಚಾರಣಾಧೀನ ಕೈದಿಗಳ ಪಾಡುಗಳನ್ನು ವಿವರಿಸಿದರೂ ಆತ ಪಟ್ಟುಬಿಡಲಿಲ್ಲ. ಹೆಚ್ಚುವರಿ ರಿಜಿಸ್ಟ್ರಾರ್ ಆಗಿದ್ದಾಗಲೇ ಅಧಿಕಾರದ ಮದವೇರಿಸಿಕೊಂಡಿದ್ದ ಈತನಿಗೆ ಹೈಕೋರ್ಟ್ ನ್ಯಾಯಾಧೀಶನಾಗಿ ಬಡ್ತಿ ಬಂದ ಕೂಡಲೇ ಅಸೀಮ ಅಧಿಕಾರದ ಅಮಲೇರಿತ್ತು.

ಇವು ಕೇವಲ ಪ್ರಾತಿನಿಧಿಕ ಘಟನೆಗಳು. ಇವನ್ನು ಕೊನೆಯಿಲ್ಲದೆ ಹೇಳುತ್ತಾ ಹೋಗಬಹುದು. ಪ್ರತಿಯೊಬ್ಬ ಹೈಕೋರ್ಟ್ ನ್ಯಾಯಾಧೀಶನೂ ಕಾನೂನೆಂದರೆ ತಾನು, ತಾನೆಂದರೆ ಕಾನೂನು ಎಂದುಕೊಂಡು ಬಿಡುತ್ತಾನೆ. ತಾನು ನಿವೃತ್ತನಾಗುವ ಅಥವಾ ಸಂಸತ್ತಿನಿಂದ ಛೀಮಾರಿಗೊಳಪಡುವ ತನಕ ತನಗೆ ಹೇಳುವವರು, ಕೇಳುವವರು ಯಾರೂ ಇಲ್ಲ ಎಂದುಕೊಂಡುಬಿಡುತ್ತಾನೆ. ಸಂವಿಧಾನೀಯ ಛೀಮಾರಿ ಎಂಬುದು ಇಂದು ಒಂದು ಭ್ರಮೆ. ನ್ಯಾಯದಾನ ವ್ಯವಸ್ಥೆ ಹೆಚ್ಚುತ್ತಿರುವ ಅದಕ್ಷತೆ ಮತ್ತು ಹೃದಯಹೀನವೂ, ನಿರ್ದಯವೂ ಆದ ತಾಂತ್ರಿಕ ಅವಕಾಶಗಳ ಸೆರೆಮನೆಯಂತಾಗಿರುವ ನ್ಯಾಯದ ನಿರಂತರ ಅವನತಿಯಿಂದಾಗಿ ಕುಸಿಯುತ್ತಿದೆ. ೨೨೬ ಮತ್ತು ೨೨೭ನೇವಿಧಿಗಳು ತಮ್ಮ ಭವ್ಯತೆ ಮತ್ತು ಘನ ಇತಿಹಾಸವನ್ನು ಕಳೆದುಕೊಂಡಿವೆ. ಇಂದಿನ ವ್ಯವಸ್ಥೆಯ ಘೋಷಣೆ 'ಖಟ್ಲೆ ಚಿರಾಯುವಾಗಲಿ' ಎಂಬುದೇ ಆಗಿದೆ. *

(ಕನ್ನಡಕ್ಕೆ: **ಡಿಎಸ್ಸೆನ್**)

**ಪ್ರಿಯ ಓದುಗರೇ,**

**ಪತ್ರಿಕೆಗೆ ಸಹಾಯ ಮಾಡಬಯಸುವವರು ತಮ್ಮ ಶಕ್ತಾನುಸಾರ (ಕನಿಷ್ಠ ನೂರಿಪ್ಪತ್ತೈದು ರೂಪಾಯಿಗಳು) ಹಣವನ್ನು ಸಂಪಾದಕರ ವೈಯುಕ್ತಿಕ ಹೆಸರಿನಲ್ಲಿ , ಅಂದರೆ ಡಿ.ಎಸ್. ನಾಗಭೂಷಣ ಎಂಬ ಹೆಸರಿಗೆ ಎಂ.ಓ/ ಡಿ.ಡಿ/ಚೆಕ್(ಕಮೀಷನ್ ಮೊತ್ತ ಸೇರಿಸಿ) ಮೂಲಕ ಕಳಿಸಬಹುದು. ಅಥವಾ ಕೆನರಾ ಬ್ಯಾಂಕಿನ ಶಿವಮೊಗ್ಗದ ವಿನೋಬನಗರ ಶಾಖೆಯ ಉಳಿತಾಯ ಖಾತೆ ಸಂಖ್ಯೆ: ೨೯೦೭೧೦೧೦೦೦೬೫೧–ಇಲ್ಲಿಗೆ ಜಮಾ ಮಾಡಿ ಒಂದು ಪತ್ರ ಇಲ್ಲವೇ ದೂರವಾಣಿ ಸಂದೇಶ ಕಳಿಸಬಹುದು. ಅಂಚೆ ಮತ್ತು ಈ–ಮೇಲ್ ವಿಳಾಸ, ದೂರವಾಣಿ ಸಂಖ್ಯೆಗಳು ಪತ್ರಿಕೆಯ ಮುಖಪುಟದಲ್ಲಿವೆ.–ಸಂ.**

**ಪ್ರಿಯ ಓದುಗರೇ,**

**ಪತ್ರಿಕೆಗೆ ನಮ್ಮೆಲ್ಲ ಪ್ರಯತ್ನಗಳ ಹೊರತಾಗಿಯೂ, ದೆಹಲಿಯ ವಾರ್ತಾ ಪತ್ರಿಕೆಗಳ ನೋಂದಣಾಧಿಕಾರಿಗಳಿಂದ 'ನವ ಮಾನವ ಮಾಸಿಕ' ಎಂಬ ಶೀರ್ಷಿಕೆ ದೊರೆಯದೆ, 'ಹೊಸ ಮನುಷ್ಯ' ಎಂಬ ಶೀರ್ಷಿಕೆ ದೊರೆತಿದೆ. ಪತ್ರಿಕೆ ಈ ನೋಂದಿತ ಹೊಸ ಶೀರ್ಷಿಕೆಯೊಂದಿಗೆ ಬಂದರೆ ಅಂಚೆ ವೆಚ್ಚದ ರಿಯಾಯ್ತಿ ಮತ್ತು ಸರ್ಕಾರಿ ಜಾಹೀರಾತುಗಳ ಸೌಲಭ್ಯ ದೊರೆಯುತ್ತದೆ. ಆದರೆ ಬೇಡ, 'ನವ ಮಾನವ ಮಾಸಿಕ ' ಶೀರ್ಷಿಕೆಯಲ್ಲೇ ಬರಲಿ ಎಂಬುದು ಕೆಲ ಓದುಗರ ಒಲವು. ದಯವಿಟ್ಟು ನಿಮ್ಮ ಅಭಿಪ್ರಾಯ ತಿಳಿಸಿ.–ಸಂ**

# ಪರ್ಯಾಯ ರಾಜಕಾರಣ, ಜಾಗೃತಿ ಒಟ್ಟಿಗೇ ನಡೆಯಬೇಕು: ನ್ಯಾ॥ ಸಂತೋಷ ಹೆಗ್ಡೆ

**'ನವ ಮಾನವ ಮಾಸಿಕ' ಇತ್ತೀಚೆಗೆ ಮಾಜಿ ಲೋಕಾಯುಕ್ತ ನ್ಯಾ॥ ಸಂತೋಶ್ ಹೆಗ್ಡೆಯವರನ್ನು ಭೇಟಿಯಾಗಿ ಪ್ರಚಲಿತ ವಿಷಯಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿತು..ಅವಕ್ಕೆ ಅವರು ನೀಡಿದ ಉತ್ತರಗಳು ಇಲ್ಲಿವೆ.**

**ನೀವು ಲೋಕಾಯುಕ್ತರಾಗಿ ವರ್ಷಗಟ್ಟಲೆ ಪರಿಶ್ರಮವಹಿಸಿ ಸಾಮಾಜಿಕ ಬದ್ದತೆಯಿಂದ ತಯಾರಿಸಿದ ವರದಿ ಅಥವಾ ತನಿಖಾ ವರದಿ ಸಾರ್ಥಕವಾಗಿದೆ ಎಂದು ಅನಿಸುತ್ತಿದೆಯೆ ?**

ನಾನು ಲೋಕಾಯುಕ್ತನಾಗಿ ವಿಚಾರಣೆ ಮಾಡಿ ನೀಡಿದ ಯಾವ ವರದಿಯನ್ನೂ ಸರ್ಕಾರ ಅನುಷ್ಠಾನಗೊಳಿಸಿಲ್ಲ. ವರದಿಯನ್ನು ಅನುಷ್ಠಾನಗೊಳಿಸುವ ಇಚ್ಛಾಶಕ್ತಿ ಖಂಡಿತವಾಗಿ ಸರ್ಕಾರಕ್ಕೆ ಇಲ್ಲ. ನಾನು ಸರ್ಕಾರಕ್ಕೆ ನೀಡಿದ ಅಕ್ರಮ ಗಣಿಗಾರಿಕೆಯ ವರದಿಯ ಮೊದಲ ಭಾಗವನ್ನು ೨೦೧೦ರ ಡಿಸೆಂಬರ್ ೨೮ ರಂದು ಸರ್ಕಾರಕ್ಕೆ ಕೊಟ್ಟಿರುತ್ತೇನೆ. ೨ನೇ ಭಾಗವನ್ನು ಜುಲೈ ೨೮, ೨೦೧೧ಕ್ಕೆ ಕೊಟ್ಟಿದ್ದೇನೆ. ಆದರೆ ಸರ್ಕಾರ ಯಾವುದೇ ಒಂದು ನಿರ್ದಿಷ್ಟ ಕ್ರಮ ತೆಗೆದುಕೊಂಡಿಲ್ಲ. ಆದರೆ ಸರ್ವೋಚ್ಚ ನ್ಯಾಯಲಯ, ಅ ವರದಿಗಳ ಮೇಲೆ ವಿಚಾರಣೆ ನಡೆಸಿ, ಸಿಇಸಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ ಈ ಸಂಸ್ಥೆ ಕೊಟ್ಟ ಮಾಹಿತಿ ಪ್ರಕಾರ ಸರ್ವೋಚ್ಚ ನ್ಯಾಯಲಯ ಇತ್ತೀಚಿನವರೆಗೆ ಕರ್ನಾಟಕದಲ್ಲಿ ಕಬ್ಬಿಣದ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿದೆ. ಬೇಲಿಕೆರೆಯಲ್ಲಿ ಆದ ಅಕ್ರಮದ ರಪ್ತು ವಿಚಾರದಲ್ಲಿ ಸಿಬಿಐಗೆ ತನಿಖೆಗೆ ಆದೇಶ ನೀಡಿದೆ. ಇದರಿಂದ ನನಗೆ ಸ್ವಲ್ಪವಾದರೂ ಸಮಾಧಾನವಾಗಿದೆ.

**ಇಂದಿನ ಕಾನೂನು ವ್ಯವಸ್ಥೆ ಮತ್ತು ನ್ಯಾಯದಾನ ಪದ್ದತಿಯಲ್ಲಿ ದುಷ್ಟರು ಭ್ರಷ್ಟರಿಗೆ ಸಕಾಲದಲ್ಲಿ ಶಿಕ್ಷೆಯಾಗುವ ಸಂಭವವಿದೆಯೇ?**

ಇಂದಿನ ಕಾನೂನು ವ್ಯವಸ್ಥೆಯಲ್ಲಿ ದುಷ್ಟರು ಭ್ರಷ್ಟರಿಗೆ ಸಕಾಲದಲ್ಲಿ ಶಿಕ್ಷೆಯಾಗುವ ಸಂಭವವಿಲ್ಲ. ಏಕೆಂದರೆ ನಮ್ಮ ಕಾನೂನುಗಳಲ್ಲೇ ಕೆಲವು ಅಸಮರ್ಪಕತೆಗಳಿವೆ. ಉದಾಹರಣೆಗೆ ೧೯೯೬ರಲ್ಲಿ ಕೇಂದ್ರದ ಸುಖರಾಂ ಎನ್ನುವ ಮಂತ್ರಿಯ ಮನೆಯ ಮೇಲೆ ಸಿ.ಬಿ.ಐ.ನವರು ದಾಳಿ ಮಾಡಿದರು ಈ ಬಗ್ಗೆ ಆಗಲೇ ಚಾರ್ಜ್‌ಶೀಟ್ ಹಾಕಲಾಗಿತ್ತು. ಇವರಿಗೆ ಮೊದಲನೇ ಕೋರ್ಟಿನಲ್ಲಿ ಶಿಕ್ಷೆಯಾದದ್ದು ೨೦೦೯ರಲ್ಲಿ. ಆ ಶಿಕ್ಷೆಗೆ ಕೂಡ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇದು ಸಾಧಾರಣವಾಗಿ ರಾಷ್ಟ್ರದ ಎಲ್ಲಾ ಕೋರ್ಟ್‌ಗಳಲ್ಲಿ ಆಗುವ ವಿಳಂಬದ ಮಾದರಿ.. ಇದಕ್ಕೆ ಕಾನೂನು ವ್ಯವಸ್ಥೆಯಲ್ಲಿ ಶೀಘ್ರ ಸುಧಾರಣೆಯಾಗಬೇಕಾಗಿದೆ.

ಅಣ್ಣಾ ಹಜಾರೆಯವರ ಜನ ಲೋಕಪಾಲ ಕರಡು ಮಸೂದೆಯಲ್ಲಿ ಒಂದು ಸಲಹೆ ಏನೆಂದರೆ, ಭ್ರಷ್ಟಾಚಾರದ ಎಲ್ಲಾ ಕೇಸ್‌ಗಳಲ್ಲಿಯೂ ಮೊದಲನೇ ಕೋರ್ಟ್‌ನಲ್ಲಿ ಒಂದು ವರ್ಷದ ಒಳಗೆ ವಿಚಾರಣೆ ನಡೆದು ತೀರ್ಪು ಬರಬೇಕು ಎಬುದು. ಇದರ ಪ್ರಕಾರ ಅದಕ್ಕೆ ಬೇಕಾದಂತಹ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಕೊಡಬೇಕೆಂಬ ಆಗ್ರಹವಿದೆ. ಈ ನಿಟ್ಟಿನಲ್ಲಿ ಇಂತಹ ಸುಧಾರಣೆ ತಂದಲ್ಲಿ ಮಾತ್ರ ಇಂತಹ ಪ್ರಕರಣಗಳಲ್ಲಿ ಶೀಘ್ರವಾಗಿ ತೀರ್ಪು ಬರಲು ಸಾಧ್ಯ. ಇದರಿಂದ ಭ್ರಷ್ಟರಿಗೆ ಬೇಗನೆ ಶಿಕ್ಷೆಯಾಗುವ ಹೆದರಿಕೆ ಹುಟ್ಟಬಹುದು. ಇಂದು ಆ ಹೆದರಿಕೆ ಇಲ್ಲ.



**ಯಡಿಯೂರಪ್ಪ ಮತ್ತು ಅವರ ಸಹಚರರನ್ನು ನ್ಯಾಯಾಂಗದ ಮೂಲಕ ಎದುರಿಸುವುದು ಪರಿಣಾಮಕಾರಿಯೋ? ಚುನಾವಣೆಗಳ ಮೂಲಕ ಎದುರಿಸುವುದು ಪರಿಣಾಮಕಾರಿಯೋ?**

ಕಾನೂನಿನ ಪ್ರಕಾರ ತಪ್ಪು ಮಾಡಿದವರಿಗೆ ನ್ಯಾಯಾಂಗದ ಮೂಲಕ ಶಿಕ್ಷೆ ಕೊಡಿಸುವುದು ನಮ್ಮ ಸಂವಿಧಾನದ ನೀತಿ. ಚುನಾವಣೆ ಮೂಲಕ ಇಂದಿನ ಪರಿಸ್ಥಿತಿಯಲ್ಲಿ ಭ್ರಷ್ಟರಿಗೆ ಶಿಕ್ಷೆ ಸಿಗುವ ಸಂಭವ ಬಹಳ ಕಡಿಮೆ. ಆದರೂ ಕೂಡ ಭ್ರಷ್ಟರು ಚುನಾವಣೆಗೆ ನಿಂತರೆ ಮತದಾರರು ಅವರನ್ನು ತಿರಸ್ಕರಿಸಬೇಕು. ನ್ಯಾಯಾಂಗದ ಶಿಕ್ಷೆಗೂ ಚುನಾವಣೆಯಲ್ಲಿ ಆಗುವ ಸೋಲಿಗೂ ಬಹಳ ವ್ಯತ್ಯಾಸವಿದೆ.

**ಇಂದಿನ ಅವನತಿಗೊಂಡಿರುವ ರಾಜಕೀಯ ಪರಿಸ್ಥಿತಿಯಲ್ಲಿ ಸಾಮಾನ್ಯ ಜನರ ಆಶಾಕಿರಣವೆನಿಸಿದ್ದ ಅಣ್ಣಾ ಆಂದೋಲನ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು? ಅದು ಸಕ್ರಿಯಗೊಳ್ಳುವ ಸಾಧ್ಯತೆಗಳಿವೆಯೆ?**

ಅಣ್ಣಾ ತಂಡದಲ್ಲಿರುವ ಕೆಲವು ಸದಸ್ಯರ ರಾಜಕೀಯ ಮಹತ್ವಕಾಂಕ್ಷೆ. ಅಣ್ಣಾ ಆಂದೋಲನ ಸ್ಥಗಿತಗೊಂಡಿರುವುದಕ್ಕೆ ಕಾರಣ. ರಾಜಕೀಯದಲ್ಲಿ ಬದಲಾವಣೆ ಬರಲೇ ಬೇಕು. ಏಕೆಂದರೆ ಇಂದಿನ ದೇಶದ ಪರಿಸ್ಥಿತಿಗೆ ರಾಜಕೀಯವೇ ಕಾರಣ.

**ಅಣ್ಣಾ ತಂಡದ ಕೆಲವು ಸದಸ್ಯರು ರಾಜಕೀಯ ಪರ್ಯಾಯ ಸಾಹಸಕ್ಕೆ ಹೊರಟಿರುವುದನ್ನು ನೀವು ಹೇಗೆ ನೋಡುವಿರಿ, ಅವರ ಅದರಲ್ಲಿ ಗುರಿ ಮುಟ್ಟಬಹುದ?**

ಒಂದು ಮೌಲ್ಯದ ಆಧಾರದ ಮೇಲೆ ರಾಜಕೀಯ ಬದಲಾವಣೆಯನ್ನು ತರಬೇಕು. ಅದಕ್ಕಾಗಿ ಪರ್ಯಾಯ ರಾಜಕಾರಣದ ಅಗತ್ಯವಿದೆ ಎಂಬುದು ನಿಜ. ಆದರೆ ಅದೇ ರೀತಿಯಲ್ಲಿ ರಾಜಕೀಯದ ಮೇಲೆ ಆಡಳಿತದ ಮೇಲೆ ನಿಗಾ ಇಡುವಂತಹ ಅಣ್ಣಾ ಹಜಾರೆಯವರಂತಹ ತಂಡದ ಅಗತ್ಯವೂ ಇದೆ. ಈ ತಂಡ ರಾಜಕೀಯದಿಂದ ಹೊರಗಿರಬೇಕು. ಅಣ್ಣಾ ಆಂದೋಲನ ಮುಂದಕ್ಕೆ ಕೂಡ ಸಕ್ರಿಯಗೊಳ್ಳಲಿದೆ ಎಂಬ ಆಶಾಭಾವನೆ ನನಗಿದೆ.

**ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ನಿಮ್ಮ ಪಾತ್ರವನ್ನು ನೀವು ಹೇಗೆ ವಿವರಿಸಿಕೊಳ್ಳಬಲ್ಲಿರಿ?**

ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ನಾನು ರಾಜಕೀಯಕ್ಕೆ ಇಳಿಯುವುದಿಲ್ಲ. ಸಂಸ್ಥೆ ಕಟ್ಟುವುದಿಲ್ಲ. ಅದರೆ ಯಾವುದೇ ಸಂಘಟನೆ ಭ್ರಷ್ಟಾಚಾರ ಮುಕ್ತ ಹೋರಾಟ ಮಾಡಲು ಪ್ರಾಮಾಣಿಕವಾಗಿ ಹೊರಟಲ್ಲಿ ನಾನು ಬೆಂಬಲ ನೀಡಿ ಸಹಕರಿಸುತ್ತೇನೆ. ಹಾಗೇ ಯುವಜನರ ಮತ್ತು ವಿದ್ಯಾರ್ಥಿ ಸಮುದಾಯದ ಜೊತೆ ಈ ವಿಷಯದ ಬಗ್ಗೆ ಮತ್ತು ಇತರೆ ಪ್ರಚಲಿತ ಸಮಸ್ಯೆಗಳ ಬಗ್ಗೆ ಸಂವಾದದಲ್ಲಿ ತೊಡಗಿಕೊಳ್ಳುತ್ತೇನೆ. *

**(ಸಂದರ್ಶನ: ಅಪೂರ್ವ ಡಿ'ಸಿಲ್ವ)**

## ಇದು ಭಾರತ! ಇದು ಭಾರತ!!

ಕಳೆದ ಹಣಕಾಸಿನ ವರ್ಷದಲ್ಲಿ ಆರ್ಥಿಕ ಹಿಂಜರಿತದ ಬೊಬ್ಬೆ ಹೊಡೆದು ಸರ್ಕಾರದಿಂದ ೫ ಲಕ್ಷ ಕೋಟಿ ರೂಪಾಯಿಗಳ ಪರಿಹಾರದ ಪ್ಯಾಕೇಜ್ ಪಡೆದ ನಮ್ಮ ಕಾರ್ಪೋರೇಟ್ ವಲಯ ತನ್ನ ಕಂಪನಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ನೀಡಿದ ಸಂಬಳ ಸಾರಿಗೆಗಳ ವಿವರ ಗೊತ್ತೆ? ನವೀನ್ ಜಿಂದಾಲ್ ಪಡೆದ ವಾರ್ಷಿಕ ಸಂಬಳ(ಮಾಲೀಕನಾಗಿ ಪಡೆದ ಲಾಭ ಅಥವಾ ಆದಾಯ ಅಲ್ಲ!) ೭೩ ಕೋಟಿ ರೂಪಾಯಿ! ಅಂದರೆ ತಿಂಗಳಿಗೆ ೬೦ ಲಕ್ಷ ರೂಪಾಯಿಗಳಿಗೂ ಹೆಚ್ಚು! ನಂತರ್ ಸ್ಥಾನ ಕಲಾನಿಧಿ ಮಾರನ್‌ಗೆ. ಆತ ಪಡೆದದ್ದು ತಿಂಗಳಿಗೆ ಸುಮಾರು ಸುಮಾರು ೫೦ ಲಕ್ಷ ರೂಪಾಯಿಗಳು! ಹೀಗೇ ಸಾಗುತ್ತದೆ ಈ ಸಿ.ಇ.ಓ.ಗಳ ದರ್ಬಾರು!

ಇನ್ನು ದೇಶದಲ್ಲಿ ಬಹಳ ಜನ ಬಳಸುವುದು ವರ್ಷಕ್ಕೆ ಆರು ಅಡುಗೆ ಅನಿಲದ ಸಿಲಿಂಡರುಗಳನ್ನು ಮಾತ್ರ ಎಂದು ಹೇಳಿ ಜನಸಾಮಾನ್ಯರಿಗೆ ಅವುಗಳ ಪೂರೈಕೆ ಮೇಲೆ ಮಿತಿ ಹೇರಿರುವ ಸರ್ಕಾರ, ಈ ಮಿತಿ ಅನ್ವಯವಾಗದ ನಮ್ಮ ವಿ.ಐ.ಪಿ.ಗಳಿಗೆ ಈ ಒಂದು ವರ್ಷದಲ್ಲಿ ಪೂರೈಸಿರುವ ಸಿಲಿಂಡರುಗಳ ಸಂಖ್ಯೆಯ ಅಧಿಕೃತ ವಿವರವನ್ನೊಮ್ಮೆ ನೋಡಿ: ನವೀನ್ ಜಿಂದಾಲ್:೩೫೮. ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ: ೧೭೧, ಮಾಯಾವತಿ: ೯೦, ಎ. ರಾಜಾ: ೪೯, ಅಮಿರೀಂದರ್ ಸಿಂಗ್: ೭೨ ! *

# ಅಂದ ಹಾಗೆ: ಕಿಡಿಗೇಡಿಯ ಕಾಲಹರಣದ ಟಿಪ್ಪಣಿಗಳು...

**ಭಾ**ರತ್ ಬಂದ್ ದಿವಸ ಎಡ ಪಕ್ಷಗಳ ಕೈಹಿಡಿದು ಎತ್ತಿ ನಿಂತ ಮುಲಾರ್ಯ ಎಂಬ ಯಾದವ ಕುಲಶ್ರೇಷ್ಠ ಮಾರನೆಯ ದಿವಸವೇ ಆರು ಜನ ಮಮತಾ ಮಂತ್ರಿಗಳು ರಾಜೀನಾಮೆ ನೀಡಿದ್ದನ್ನು ಖಚಿತಪಡಿಸಿಕೊಂಡ ಕೂಡಲೇ ಅತ್ತ ಲಕ್ನೋದಲ್ಲಿ ಆರು ಜನ ಸಮಾಜವಾದಿ ಘಟಂಗರ ಪಟ್ಟಿ ಸಿದ್ಧ ಮಾಡಲು ಹೇಳಿ ಇತ್ತ ಎತ್ತಿದ ಕೈಗಳನ್ನು ಒಂದು ಕಣ್ಣೆ ರೆಪ್ಪೆಯನ್ನೂ ಮಿಟುಕಿಸದೆ ಹಾಗೇ ಇಳಿಸಿ, ಮನಮೋಹನ ಸಿಂಗ್‌ರ ಕೈ ಹಿಡಿದು ಎತ್ತಿ ಪರಮಾಣು ಒಪ್ಪಂದದ ಶೈಲಿಯಲ್ಲಿ ನಿಂತುಬಿಟ್ಟರಂತಲ್ಲಾ!



ಇದನ್ನು ನೋಡಿ ಶಾನೆ ಹೊಟ್ಟೆ ನೋವು ಬಂದಂತಾದ ಮಾಯಾವತಿ ಎಂಬ ಮಾಯಾ ಜಿಂಕೆ ತನ್ನನ್ನು ಹಿಂದೆ ತಮ್ಮ ಸಹಜ ಗೆಣಕಾರ್ತಿಎಂದು ಕರೆದಿದ್ದ ಎಡಪಕ್ಷಗಳ ಕಡೆ ಕಣ್ಣು ಹಾಯಿಸುತ್ತಿದ್ದಂತೆ ಸೋನ್ಯಾ ಗಾಂಧಿ ಸಿ.ಬಿ.ಐ. ಕಛೇರಿ ಕಡೆ ಒಮ್ಮೆ ಸಹಜವಾಗಿ ಕಣ್ಣು ಹಾಯಿಸಿದೊಡನೆ ದಲಿತರು ಯಾವ ಕಡೆಗೂ ಕಣ್ಣು ಕೂಡಾ ಹಾಯಿಸದಂತೆ ಈ ಮನುವಾದಿಗಳು ಮಾಡಿಬಿಟ್ಟಿದ್ದಾರಲ್ಲಾ ಎಂದು ಕಣ್ಣು ಕಣ್ಣು ಬಿಡುತ್ತಾ ಕೂತಿದ್ದಾರಂತಲ್ಲಾ!

ಇತ್ತ ತಾವು ಎತ್ತಿದ ಕೈಗಳೆಲ್ಲ ಹಾಗೇ ಇಳಿದು ಬೀಳುತ್ತಾ ನ್ಯೂಟನ್ನನ ನಿಯಮಗಳೆದರು ಮಾರ್ಕ್ಸ್‌ನ ನಿಯಮಗಳು ಮುರಿದು ಬೀಳುತ್ತಿರುವುದನ್ನು ಕಂಡು ಗಾಬರಿಯಾಗಿರುವ ೨೪ ಕ್ಯಾರೆಟ್ಟಿನ ಕಮ್ಯೂನಿಸ್ಟ್ ನಾಯಕ ಪ್ರಕಾಶ್ ಕಾರಟ್ ಮತ್ತವರ ಗೆಣೆಕಾರರು ಇದರ ಹಿಂದೆ ಪಿಶಾಚ ಕೃತ್ಯವೇನಾದರೂ ಇದೆಯಾ ಎಂಬುದನ್ನು ವೈಜ್ಞಾನಿಕವಾಗಿ ಚರ್ಚಿಸಲು ಮೊನ್ನೆ ಭಾರತ್ ಬಂದ ದಿವಸ ತಮ್ಮ ಪಕ್ಕದಲ್ಲೇ ಹಣೆ ತುಂಬಾ ಕುಂಕುಮ ಗಂಧಾಕ್ಷತೆ ಬಳಿದುಕೊಂಡು ಮಹಾ ಮಂತ್ರವಾದಿಯಂತೆ ಕಾಣುತ್ತಿದ್ದ ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕ ಮುರುಳಿ ಮನೋಹರ ಜೋಷಿಯವರ ಮನೆ ಕಡೆ ಮಧ್ಯರಾತ್ರಿ ಹೊರಟು ಅಲ್ಲಿ ತೂಗುಹಾಕಿದ್ದ ಹಸ್ತಶಾಸ್ತ್ರ, ಗಿಣಿಶಾಸ್ತ್ರ, ಹಣೆ ಶಾಸ್ತ್ರ, ಕವಡೆ ಶಾಸ್ತ್ರ, ಭೂತಶಾಸ್ತ್ರ, ವಶೀಕರಣ ಶಾಸ್ತ್ರ ಇತ್ಯಾದಿ ವೈಜ್ಞಾನಿಕ ಜ್ಯೋತಿಷ್‌ಶಾಸ್ತ್ರ ಸಂಬಂಧಿ ಬೋರ್ಡುಗಳನ್ನು ಬೀದಿ ದೀಪದ ಬೆಳಕಲ್ಲಿ ಬಾಯಿಗಳ ಮೇಲೆ ಬೆರಳುಗಳನ್ನಿಟ್ಟುಕೊಂಡು ಓದುತ್ತಾ ನಿಂತಿರುವುದನ್ನು 'ರಾ' ಗುಪ್ತಚರರ ಮೂಲಕ ತಿಳಿದ ಕಾಂಗ್ರೆಸ್ಸಿನವರು ರಾಜೀವ್ ಶುಕ್ಲಾ, ಮಣಿಶಂಕರ ಅಯ್ಯರ್, ದಿಗ್ವಿಜಯ ಸಿಂಗ್ ಮುಂತಾದ ತಮ್ಮ ವಿದೂಷಕ ಸಮೂಹವನ್ನು ಕಮ್ಯೂನಿಸ್ಟ್ ಕಛೇರಿಯ ಮುಂದೆ ಗಹಗಹಿಸಿ ನಗುವ ಕಾರ್ಯಕ್ರಮಕ್ಕಾಗಿ ಈಗಾಲೇ ಅಣಿಗೊಳಿಸಿ ನಿಲ್ಲಿಸಿದ್ದಾರಂತಲ್ಲಾ



ಪ್ರಧಾನ ಮಂತ್ರಿ ಸ್ಥಾನಕ್ಕೆ ಬಟ್ಟೆ ಹೊಲಿಸಿಕೊಳ್ಳಲು ದರ್ಜಿಗೆ ಅಳತೆ ಕೊಟ್ಟು ಕಾಯುತ್ತಿದ್ದ ಗುಜರಾತಿನ ಹಿಂದೂ ಹೃದಯ ಸಾಮ್ರಾಟನಿಗೆ ತಮ್ಮ ಮಾಜಿ ಆಸ್ಥಾನ ನರ್ತಕಿ ಮಾಯಾ ಕೊಂಡ್ನಾಣಿ ಮತ್ತು ಮಾಜಿ ಆಸ್ಥಾನ ವಿದೂಷಕ ಬಾಬಾ ಬಜರಂಗಿಯನ್ನು ಗುಜರಾತಿನ ಕೋರ್ಟೊಂದು ನಿರ್ದಾಕ್ಷಿಣ್ಯವಾಗಿ ಸಾಯುವವರೆಗೆ ಜೇಲಿಗೆ ತಳ್ಳಿದ ಸುದ್ದಿ ಓದಿದ ರಾತ್ರಿ ದರ್ಜಿಯು ಕೈದಿಯ ಸಮವಸ್ತ್ರವನ್ನು ಹೊಲಿದು ತಂದು ಕೊಟ್ಟಂತೆ ಕನಸು ಬಿದ್ದು ಸಾಮ್ರಾಟರು ಹುಚ್ಚು ಹಿಡಿದವರಂತೆ ಕೂಗುತ್ತಾ, ಅರಚುತ್ತಾ, ಗುಜರಾತ್ ರಾಜ್ಯದ ತುಂಬಾ ಅಲೆಯತೊಡಗಿದ್ದು, ಇದನ್ನು ಗಡ್ಕರಿ, ಉಪ್ಕರಿ, ಶೇಟ್ಕರಿ ಮುಂತಾದ ಅವರ ಅಭಿಮಾನಿಗಳು ರಾಜ್ಯ ವಿಧಾನ ಸಭಾ ಚುನಾವಣೆಗಳಿಗಾಗಿ ನಡೆಸಿರುವ ಪ್ರಚಂಡ ಪ್ರಚಾರ ಎಂದು ಭಾವಿಸಿ ತಮ್ಮ ಸಂತೋಷವನ್ನು ಹಂಚಿಕೊಳ್ಳಲು ನಾಗಪುರದತ್ತ ಧಾವಿಸಿದರಂತಲ್ಲಾ!



ಕರ್ನಾಟಕದಲ್ಲಿ ಉದ್ಯೋಗ ಗ್ಯಾರಂಟಿ ಯೋಜನೆಯಲ್ಲಿ ಆರು ನೂರು ಕೋಟಿ ರೂಪಾಯಿಗಳ ದುರ್ವ್ಯವಹಾರ ನಡೆದಿದೆಯಂತಲ್ಲಾ ಎಂದು ಶಿವಮೊಗ್ಗದಲ್ಲಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪನವರನ್ನು ಕೇಳಲಾಗಿ, ಅವರು ಇದಕ್ಕೂ, ಶಿವಮೊಗ್ಗಾದ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ, ಆತನ ಹೆಂಡತಿ ಮತ್ತು ಮಕ್ಕಳ ಹೆಸರುಗಳು ಈ ಯೋಜನೆಯ ಫಲಾನುಭವಿಗಳ ಪಟ್ಟಿಯಲ್ಲಿ ಕಾಣಿಸಿಕೊಂಡಿರುವುದಕ್ಕೂ ಯಾವುದೇ ಸಂಬಂಧವಿಲ್ಲ, ಒಂದೇ ಕುಟುಂಬ ಇಷ್ಟೊಂದು ದೊಡ್ಡ ಮೊತ್ತದ ಹಣ ನುಂಗಲು ಸಾಧ್ಯವಿಲ್ಲ; ಬೇಕಾದರೆ ಆಯನೂರು ಮಂಜುನಾಥರನ್ನೊಮ್ಮೆ ಕೇಳಿ ನೋಡಿ ಎಂದು ತಮ್ಮ ಕಟಬಾಯನ್ನೊಮ್ಮೆ ನಾಲಿಗೆಯಿಂದ ಒರೆಸಿಕೊಂಡು, ಮನೆ ಮುತ್ತೈದೆಯರೊಂದಿಗೆ ಶನಿದೇವರ ದೇವಸ್ಥಾನದತ್ತ ಕಳಸ ಹೊತ್ತು ಹೊರಟರಂತಲ್ಲಾ!



ಯಡ್ಯೂರಪ್ಪ ಮಾಡಿಕೊಂಡ ಭಾನಗಡಿಗಳ ನಂತರ ಬಿಜೆಪಿ ಬಗ್ಗೆ ಭರವಸೆ ಕಳೆದುಕೊಂಡ ವೀರಶೈವ ಮಠಾಧೀಶರನೇಕರು ವರ್ಷದ ಭರ್ಜರಿ ಬಜೆಟ್ ಭಿಕ್ಷೆಗೆ ಕಲ್ಲು ಬಿದ್ದ ಆಘಾತದಲ್ಲಿ ಶಾಮನೂರ ಶಿವಶಂಕರಪ್ಪನೆಂಬ 'ಸಾಯಂಕಾಲದ ಪೂಜೆ' ಖ್ಯಾತಿಯ ಗಿರಾಕಿ ಹಿಂದೆ ಬಿದ್ದು ರಾಣಿ ಸತೀಶ್, ಅಲ್ಲಂ. ಪಲ್ಲಂ ಮುಂತಾದ ವಿಭೂತಿ ಪುರುಷ–ಮಹಿಳೆಯರ ಜೊತೆ ಕಾಂಗ್ರೆಸ್ ನಾಯಕತ್ವ ಕೇಳಲು ದೆಹಲಿಗೆ ಸಾಗ ಹಾಕಿದರೆ, ಸೋನ್ಯಾ ಮೇಡಂ 'ಅಯ್ಯೋ!ಇವರೆಲ್ಲ ಇನ್ನೂ ಬದುಕಿದ್ದಾರಾ!' ಎಂದಷ್ಟೇ ಹೇಳಿ ಮಾಯವಾಗಲು ಶಾಮನೂರು ಸದ್ದಿಲ್ಲದೆ ದಾವಣಗೆರೆಗೆ ಬಂದು ತಮ್ಮ ಸ್ವಗೃಹದಲ್ಲಿ ನಿರಂತರ 'ಸಂಜೆ ಪೂಜೆ'ಗೆ ಕೂತು ಮಠ–ಮಾನ್ಯಗಳ ಆವರಣದಗಳಲ್ಲಿ ಆತಂಕ ಹುಟ್ಟಿಸಿರುವರಂತಲ್ಲಾ!



ಇದನ್ನು ಕೇಳಿ ಹಗಲು ಮಂಪರಿನಲ್ಲೇ ಮುಖ್ಯಮಂತ್ರಿಯ ಕನಸು ಕಾಣುತ್ತಿದ್ದ ಸಿದ್ಧರಾಮಯ್ಯನವರು ಎದ್ದು 'ಅಷ್ಟೇಯಾ!' ಎಂದು ಆಕಳಿಸಿ ಮತ್ತೆ ಕನಸಿಗೆ ಮರಳಿದರಂತಲ್ಲಾ!

## ಕೊನೆ ಹನಿ:



ರಾಜನಾರಾಯಣ್ ಸಮಾಜವಾದಿ ಚಳುವಳಿಯಲ್ಲಿ ಲೋಹಿಯಾರ ಬಲಗೈ ಬಂಟ. ಹಾಗೇ ಹುಂಬತನಕ್ಕೆ ಹೆಸರಾದ ವಿಚಿತ್ರ ವ್ಯಕ್ತಿ. ಈ ಹುಂಬತನದಲ್ಲೇ ಆತ ಇಂದಿರಾ ಗಾಂಧಿ ವಿರುದ್ಧ ಅಲಹಾಬಾಶದ ಶ್ರೇಷ್ಠ ನ್ಯಾಯಾಲಯದಲ್ಲಿ, ಚುನಾವಣಾ ತಕರಾರು ನಡೆಸಿ ಗೆದ್ದು, ಆಕೆಯನ್ನು ರೇಗಿಸಿ ತುರ್ತು ಪರಿಸ್ಥಿತಿಗೆ ಕಾರಣವಾಗಿದ್ದು. ನಂತರ ಅವರ ವಿರುದ್ಧವೇ ಗೆದ್ದು ಆರೋಗ್ಯ ಮಂತ್ರಿಯಾಗಿ ಬರಿಗಾಲು ವೈದ್ಯರ ಪರಿಕಲ್ಪನೆಗೆ ಚಾಲೂ ನೀಡಿದ್ದು,

ಇವರೊಮ್ಮೆ ಸಮಾಜವಾದಿ ವಿದ್ಯಾರ್ಥಿ ಸಮಾವೇಶವೊಂದನ್ನು ಉದ್ದೇಶಿಸಿ ಮಾತನಾಡುತ್ತಾ, ಈಗಿನ ವಿದ್ಯಾರ್ಥಿಗಳಲ್ಲಿ ಹೋರಾಡುವ ಮನೋಭಾವವೇ ಇಲ್ಲವೆಂದು ಹೇಳುತ್ತಾ ,'ನಾವು ಸಾತಂತ್ರ್ಯ ಹೋರಾಟದ ಸಮಯದಲ್ಲಿ ಗಾಂಧಿ ಕರೆಗೆ ಓಗೊಟ್ಟು ಪುಸ್ತಕ ಮುಚ್ಚಿಟ್ಟು ಬೀದಿಗಿಳಿದೆವು' ಎಂದು ಇನ್ನೂ ವಾಕ್ಯ ಮುಗಿಸಿರಲಿಲ್ಲ. ಹಿಂದಿನಿಂದ ಕೂಗಿ ಬಂತು ಒಂದು ಧ್ವನಿ: ಆಗ ಪುಸ್ತಕ ಮುಚ್ಚಿಟ್ಟವರು ಇನ್ನೂ ತೆರೆದಂತೆ ಕಾಣುವುದಿಲ್ಲ!

–ಕಿಡಿಗೇಡಿ

## ನಮ್ಮ ಸಮಾಜವಾದಿಗಳು

# ನಿಷ್ಠುರ ಪ್ರೀತಿಯ ನಾಯಕ ನೀಲಗಂಗಯ್ಯ ಪೂಜಾರ



**ತ**ಮ್ಮ ಬದುಕಿನುದ್ದಕ್ಕೂ ಸಮಾಜವಾದಿ ಹೋರಾಟದ ಗಾಳಿಯನ್ನೇ ಉಸಿರಾಗಿಸಿಕೊಂಡು ಬಂದಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನೀಲಗಂಗಯ್ಯ ಪೂಜಾರ ಇತ್ತೀಚೆಗೆ ನಮ್ಮನ್ನು ಅಗಲಿ ಹೋಗಿ ಧಾರವಾಡ–ಹುಬ್ಬಳ್ಳಿ ಸೀಮೆಯ ಮಣ್ಣಿನ ಮಕ್ಕಳ ಹೋರಾಟದ ಕೆಚ್ಚಿಗೆ ಆಘಾತವನ್ನೇ ಉಂಟು ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಇಬ್ಬರು ಪುತ್ರರು, ಮೂರು ಜನ ಪುತ್ರಿಯರು, ಹಲವಾರು ಮೊಮ್ಮಕ್ಕಳುಗಳ ಜೊತೆಗೆ ದೊಡ್ಡ ಸಂಖ್ಯೆಯ ಅನುಯಾಯಿ–ಹೋರಾಟಗಾರರನ್ನೂ ಅಗಲಿ ಹೋಗಿರುವ ಪೂಜಾರರು ತಮ್ಮ ಬದುಕಿನುದ್ದಕ್ಕೂ ರಾಜಿ ರಹಿತ ಹೋರಾಟದ ಜೀವನ ನಡೆಸಿದವರು.

೧೯೨೬ರಲ್ಲಿ ಆಗಿನ ಅವಿಭಜಿತ ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಜನಿಸಿದ್ದ ನೀಲಗಂಗಯ್ಯ ತಮ್ಮ ಬಾಲ್ಯದ ದಿನಗಳಲ್ಲಿ ಗಾಂಧಿವಾದದ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದರು. ನಂತರ ಸಮಾಜವಾದಿ ವಿಚಾರಧಾರೆಯಿಂದ ಆಕರ್ಷಿತರಾಗಿದ್ದ ಅವರು 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದೊಡನೆ ಗುರುತಿಸಿಕೊಂಡಿದ್ದರು. ಆಗ ಕನ್ನಡದ ಮಣ್ಣಿನಲ್ಲಿ ಸಮಾಜವಾದಿ ವಿಚಾರಧಾರೆಯನ್ನು ಹರಡುವ ಕಾಯಕದಲ್ಲಿ ತೊಡಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಸದಾಶಿವ ಕಾರಂತರೊಂದಿಗೆ ಸೇರಿ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯ ಕೆಲಸವನ್ನೂ ಮಾಡಿದರು. ನಂತರ ಅನೇಕ ರೀತಿಯ ಕಾರ್ಮಿಕ ಸಂಘಟನೆಯ ಕೆಲಸಗಳಲ್ಲಿ ತೊಡಗಿಕೊಂಡಿದ್ದ ಪೂಜಾರರು ಕೊನೆಗೆ ತಮ್ಮ ಸಮಾಜವಾದಿ ಹೋರಾಟದ ಅಡಿಗಲ್ಲನ್ನಾಗಿ ಮಾಡಿಕೊಂಡದ್ದು ಭೂಮಿಯ ಪ್ರಶ್ನೆಯನ್ನು. ಹಾಗೇ ಅವರು ರೈತ ನಾಯಕರಾಗಿಯೇ ಇಂದೂ ಜನಮನದ ಸ್ಮೃತಿಯಲ್ಲಿ ನೆಲೆಸಿದ್ದಾರೆ.

ನೀಲಗಂಗಯ್ಯ ಎಂದರೆ ಧಾರವಾಡ–ಹುಬ್ಬಳ್ಳಿ ಸೀಮೆಯಲ್ಲಿ ನೆನಪಾಗುವುದು ಹೆಬ್ಬಳ್ಳಿ ಭೂಹೋರಾಟ ಮತ್ತು ಹುಬ್ಬಳ್ಳಿ ನಿವೇಶನ ರಹಿತರ ಹೋರಾಟ. ಕಾಗೋಡು ಸತ್ಯಾಗ್ರಹದಷ್ಟೇ ಮಹತ್ವದ; ಹಾಗೆ ನೋಡಿದರೆ ಇದಕ್ಕಿಂತ ಹೆಚ್ಚು ಫಲಪ್ರದವಾಗಿ ಕಾಣುವ ಹೆಬ್ಬಳ್ಳಿ ಭೂ ಹೋರಾಟವನ್ನು ರೂಪಿಸಿ ಯಶಸ್ವಿಯಾಗಿ ದಡ ಮುಟ್ಟಿಸಿದ ಕೀರ್ತಿ ಪೂಜಾರರದ್ದು. ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಆಗಿನ ಮುಂಬೈ ವಿಧಾನ ಸಭೆಗೆ ಪ್ರಜಾ ಸಮಜವಾದಿ ಪಕ್ಷದಿಂದ ಆಯ್ಕೆಯಾಗಿದ್ದ ಪೂಜಾರರು ಅಲ್ಲಿನ ಭೂ ರಾಜಕಾರಣದ ಒಳಸುಳಿಗಳನ್ನು ಅರ್ಥ ಮಾಡಿಕೊಂಡು ಧಾರವಾಡ ಹೊರವಲಯದ ಹೆಬ್ಬಳ್ಳಿಯಲ್ಲಿದ್ದ ಜಹಗೀರುದಾರಿಯಿಂದ ಬಿಡುಗಡೆಯಾಗಿ ಸರ್ಕಾರದ ವಶದಲ್ಲಿದ್ದ ೧೧ ಸಾವಿರ ಎಕರೆ ಜಮೀನನ್ನು ತಮ್ಮ ಸಹ ಸಮಾಜವಾದಿ ಸಹಚರರಾದ ಗಂಗಾಧರ ಪದಕಿ ಮತ್ತಿತರರ ಸಹಕಾರದೊಂದಿಗೆ ಒಂದು ದೊಡ್ಡ ಹೋರಾಟವನ್ನೇ ರೂಪಿಸಿದರು. ಮೆರವಣಿಗೆ, ಪಿಕೆಟಿಂಗ್, ಸತ್ಯಾಗ್ರಹಗಳಿಂದಷ್ಟೇ ಒಡಗೂಡಿದ ಕೇವಲ ಹತ್ತು ದಿನಗಳ ಈ ಹೋರಾಟ ಸರ್ಕಾರ ಅಲ್ಲಿನ ೩೨೦ ಜನ ಗೇಣಿದಾರರಿಗೆ ಮತ್ತು ೧೧೨ ಜನ ಭೂರಹಿತ ಕೃಷಿ ಕಾರ್ಮಿಕರಿಗೆ ಭೂಮಿ ಹಂಚುವುದರಲ್ಲಿ ಕೊನೆಗೊಂಡಿತು. ಈ ಹೋರಾಟ ಇಷ್ಟು ಸುಗಮ ಮತ್ತು ಕ್ಷಿಪ್ರವಾಗಿ ಯಶಸ್ವಿಯಗಲು ಕಾರಣ, ಪೂಜಾರರ ಶಾಸಕತ್ವದ ಅನುಭವ, ವಕೀಲರಾಗಿ ಕಾನೂನುಗಳ ಬಗ್ಗೆ ಪಡೆದಿದ್ದ ತಿಳುವಳಿಕೆ, ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ಮತ್ತು ಜತ್ತಿಯವರೊಡನೆ ನಡೆಸಿದ ಸಂಧಾನದಲ್ಲಿ ತೋರಿದ ಕೌಶಲ್ಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರ ನಿಸ್ವಾರ್ಥ ಜನಪ್ರೀತಿ ಎಂದೇ ಹೇಳಬೇಕು. ಈ ಹೋರಾಟದ ಯಶಸ್ಸನ್ನು ಪೂಜಾರರು ಸಮಾಜವಾದಿ ನಾಯಕ ಮಧು ಲಿಮಯೆಯವರನ್ನು ಹೆಬ್ಬಳ್ಳಿಗೆ ಕರೆಸಿ ಹೋರಾಟಗಾರರೆಲ್ಲರಿಗೂ ಕರಿಗಡುಬಿನ ಊಟ ಹಾಕಿಸುವ ಮೂಲಕ ಆಚರಿಸಿದರು!

ಪೂಜಾರ ಈ ಜನಪ್ರೀತಿ ಅವರ ರಾಜಕೀಯ ಬದುಕಿನ ಆರಂಭದಿಂದ ಕೊನೆಯವರೆಗೂ ಅದೇ ತೀವ್ರತೆಯಲ್ಲಿ ಉಳಿದಿತ್ತು. ಅದಕ್ಕೆ ಕಾರಣ ಅವರ ಸರಳ ಜೀವನ. ಹಾಗಾಗಿ ಬಡಜನರ ಕಷ್ಟಸುಖಗಳೊಂದಿಗೆ ಗುರುತಿಸಿಕೊಳ್ಳುವ ತಹತಹ. ಪ್ರೀತಿಯೊಂದಿಗೆ ಬಹು ನಿಷ್ಠುರರೂ ಆಗಿದ್ದ ನೀಲಗಂಗಯ್ಯ ಆ ಕಾರಣದಿಂದಲೇ ರಾಜ್ಯ ಮಟ್ಟದಲ್ಲಿ ದೊಡ್ಡ ನಾಯಕರಾಗಲು ಸಾಧ್ಯವಾಗಲಿಲ್ಲ ಎಂದು ಹೇಳಬಹುದು. ಗೋಪಾಲ ಗೌಡರ ಮದುವೆಗೆ ಕಾರಣರಾದ ಇವರು ಗೋಪಾಲ ಗೌಡ ಮತ್ತು ಅವರ ಸಹಚರರ ರಾಜಕಾರಣದ ಕೆಲವು ರೀತಿ ನೀತಿಗಳ ಬಗ್ಗೆ ಅಷ್ಟೇನೂ ಸಮಾಧಾನ ಹೊಂದಿರಲಿಲ್ಲ. ಅವರು ಲೋಹಿಯಾ ಪ್ರತಿಪಾದಿಸಿದ ವಿಶಿಷ್ಟ ಸಮಾಜವಾದಿ ಸಿದ್ಧಾಂತವನ್ನು ವಿವಿರವಾಗಿ ಅಧ್ಯಯನ ಮಾಡಿದವರಾಗಿದ್ದರು ಮತ್ತು ಅದರ ಬಗ್ಗೆ ವಿದ್ವತ್ಪೂರ್ಣವಾಗಿ ಮಾತಾಡಬಲ್ಲವರೂ, ಬರೆಯಬಲ್ಲವರೂ ಆಗಿದ್ದರು. ಆದರೆ ಅದೇ ಸಮಯದಲ್ಲಿ ಸಮಜವಾದಿ ಪಕ್ಷ ಇದ್ದಷ್ಟು ದಿನವೂ ನೆಲ ಮಟ್ಟದ ಹೋರಾಟಗಾರರೂ ಆಗಿದ್ದರು. ಆನಂತರ ಜನತಾ ಪಕ್ಷ ಮತ್ತು ಜನತಾ ಪಕ್ಷ ವಿಘಟಿತವಾದ ನಂತರ ಲೋಕದಳದೊಂದಿಗೆ ಗುರುತಿಸಿಕೊಂಡಿದ್ದ ಪೂಜಾರರು ಹೊಸ ದಿನಗಳ ರಾಜಕಾರಣ ಒತ್ತಡಗಳನ್ನು ಸಹಿಸಲಾರದೆ ೧೯೭೮ರಲ್ಲಿ ಅಧಿಕಾರ ರಾಜಕರಣದಿಂದ ನಿವೃತ್ತಿ ಘೋಷಿಸಿದರು.ಆದರೆ ಹೋರಾಟದ ರಾಜಕಾರಣದಿಂದ ಎಂದೂ ನಿವೃತ್ತರಾಗದೆ, ಬದುಕಿನ ಕೊನೆಯವರೆಗೂ ದೀನ ದಲಿತರ, ಶೋಷಿತರ ದನಿಯಾಗಿ ಅನೇಕ ಹೋರಾಟಗಳನ್ನು ಮಾಡಿದರು.

ಇವುಗಳಲ್ಲಿ ಮುಖ್ಯವಾದುವುಗಳೆಂದರೆ ೧೯೮೩ರಲ್ಲಿ, ಸರ್ಕಾರದ ತಪ್ಪು ನೀತಿಯಿಂದಾಗಿ ಅತಂತ್ರರಾಗಿ ಹೋಗಿದ್ದ ಟಿ.ಸಿ.ಎಚ್. ನಿರುದ್ಯೋಗಿಗಳ ಸಂಘ ಸ್ಥಾಪಿಸಿ ಗುಂಡೂರಾವ್ ಸರ್ಕಾರದ ವಿರುದ್ಧ ೩೦ ದಿನಗಳ ಅಮರಣಾಂತ ಉಪವಾಸ ಕೈಗೊಂಡು ನೂರಾರು ಜನ ಯುವಜನರ ಪಾಲಿಗೆ ಉದ್ಯೋಗಾವಕಾಶದ ದಾರಿ ತೆರೆದದ್ದು. ಆಗ ಇವರನ್ನು ಬೆಂಬಲಿಸಲು ಹಿರಿಯ ಸಮಾಜವಾದಿ ಹೋರಾಟಗಾರ ಜಾರ್ಜ್ ಫರ್ನಾಂಡೀಸ್ ಕೂಡ 'ಧಾರವಾಡಕ್ಕೆ ಧಾವಿಸಿದ್ದರು. ಪೂಜಾರರು ನೇತೃತ್ವ ವಹಿಸಿದ ಇದಕ್ಕಿಂತ ಮಹತ್ವದ ಇನ್ನೊಂದು ಹೋರಾಟವೆಂದರೆ, ನಗರ ಪ್ರದೇಶದ ನಿವೇಶನ ರಹಿತರ ಹೋರಾಟ. ೧೯೭೮ರ ನಂತರ ಆರಂಭಿಸಿ ಅವರ ೮೫ ವರ್ಷ ವಯಸ್ಸಾಗಿದ್ದ ಕೊನೆ ದಿನಗಳವರೆಗೂ ಈ ಹೋರಾಟ ನಡೆಯುತ್ತಾ ಹುಬ್ಬಳ್ಳಿ ಹುಬ್ಬಳ್ಳಿ–ಧಾರವಾಡ ಸೇರಿದಂತೆ ವಿವಿಧೆಡೆ ಸಾವಿರಾರು ಬಡಜನರಿಗೆ ನಿವೇಶನ ದೊರಕಿಸಿಕೊಟ್ಟು ಅವರ ಕುಟುಂಬಗಳಿಗೆ ಸೂರು ಒದಗುವಂತೆ ಮಾಡಿದರು. ಕೊಡಲಿ, ಜಾಗಟೆ, ಹಣೆ ಕಲ್ಲು, ಉಗುಳು ಹೀಗೆ ಹಲವಾರು ಸಂಕೇತಗಳನ್ನು ಬಳಸಿ ತಮ್ಮ ಹೋರಾಟವನ್ನು ರೂಪಿಸುತ್ತಿದ್ದ ಇವರು ಗಂಗಾಧರ ಪದಕಿ, ರಾಚಪ್ಪ ಹಡಪದ, ರಾಚಪ್ಪ ಬೆಟ್ಸೂರು ಅವರಂತಹ ಸಮಕಾಲೀನರ ಜೊತೆಗೆ ಕೆಲಸ ಮಾಡುತ್ತಲೇ ನಾಗರಾಜ ಗುರಿಕಾರ, ನೀಲಕಂಠ ಅಸೂಟಿಯವರಂತಹ ಶಿಷ್ಯರನ್ನೂ ತಯಾರು ಮಾಡಿದರು. ಇಂತಹ ಹೋರಾಟದ ಫಲವಾಗಿ ಎಲ್ಲ ನಾಗರೀಕ ಸೌಲಭ್ಯಗಳಿಂದ ಸುಸಜ್ಜಿತವಾಗಿ ಮೂಡಿದ ಒಂದು ವಸತಿ ಪ್ರದೇಶಕ್ಕೆ ಅವರು ಇಂತಹ ಹೋರಾಟಗಳಿಗೆ ತಮಗೆ ಸ್ಫೂರ್ತಿ ನೀಡಿದ ಡಾ. ರಾಮಮನೋಹರ ಲೋಹಿಯಾ ಹೆಸರಿಟ್ಟು ತಮ್ಮ ಸಮಾಜವಾದಿ ಬದ್ಧತೆಗೆ ಒಂದು ಸಾರ್ಥಕತೆ ಒದಗಿಸಿಕೊಂಡಿದ್ದಾರೆ. ಇಂದು ಈ ಡಾ. ಲೋಹಿಯಾ ನಗರ ಮತ್ತು ಆನಂದ ನಗರಗಳ ಜನರ ಮನಸ್ಸಿನಲ್ಲಿ ನೀಲಗಂಗಯ್ಯ ಪೂಜಾರರು ಅಮರರಾಗಿದ್ದಾರೆ. *

**–ನಾಗರಾಜ ಗುರಿಕಾರ**

## ಸಮಕಾಲೀನ

# ಗಾಂಧಿ–ಲೋಹಿಯಾ : ಒಂದು ನೆನಪು



**ಅಕ್ಟೋಬರ್ ಗಾಂಧಿ ಹಾಗೂ ಲೋಹಿಯಾ ನೆನಪಿನ ತಿಂಗಳು. ಅಕ್ಟೋಬರ್ ೨ ಗಾಂಧಿ ಹುಟ್ಟಿದ ದಿನವಾದರೆ, ಅಕ್ಟೋಬರ್ ೧೨ ಲೋಹಿಯಾರ ಪುಣ್ಯತಿಥಿಯ ದಿನ.( ಹಾಗೇ ಇದು ಗಾಂಧೀಜಿಯ ಇನ್ನೋರ್ವ ಪ್ರಿಯ ಶಿಷ್ಯ ಜಯಪ್ರಕಾಶ ನಾರಾಯಣರು ಹುಟ್ಟಿದ ತಿಂಗಳೂ–ಅಕ್ಟೋಬರ್ ೧೧–ಹೌದು)**

**ಜಾಗತೀಕರಣದ ಇಂದಿನ ಮಾರುಕಟ್ಟೆ ಗಿಜಿಬಿಜಿಯ ನಡುವೆ ನಮಗೆ ನಾವೇ ಅಪರಿಚತರಾಗಿ ಬಾಳುವ ಖಂಡನೆಗೆ ಒಳಗಾಗಿರುವ ನಮಗೆ ಇವರ ನೆನಪು ನಮ್ಮನ್ನು ನಮಗೆ ಮತ್ತೆ ಪರಿಚಯ ಮಾಡಿಕೊಟ್ಟೀತು ಎಂಬ ಆಶಯದೊಂದಿಗೆ 'ನವ ಮಾನವ' ಈ ಮಹಾ ಗುರು ಮತ್ತು ಅವರೋರ್ವ ವಿಶಿಷ್ಟ ಶಿಷ್ಯನನ್ನು ವಿಶಿಷ್ಟ ಬರಹಗಳ ಮೂಲಕ ಇಲ್ಲಿ ನೆನಪು ಮಾಡಿಕೊಳ್ಳುತ್ತಿದೆ.–*ಸಂಪಾದಕ***

# ಗಾಂಧಿ ಆತ್ಮಕಥೆಯ ಪವಾಡ!

* ನೀಲತ್ತಹಳ್ಳಿ ಕಸ್ತೂರಿ

*ಭಗವಾನ್ ಬುದ್ಧನ ಕಾಲದಲ್ಲಿ ಅಂಗುಲಿಮಾಲಾ ಎಂಬ ಕ್ರೂರ ದರೋಡೆಕೋರನಿದ್ದನಂತೆ. ಆತ ಬುದ್ಧನ ದರ್ಶನ ಮಾಡಿದ ಮೇಲೆ ಮನಃಪರಿವರ್ತನೆಗೊಂಡ. ದುಷ್ಟತನದ ಹಾದಿ ತೊರೆದು ಸಾಧುವಾದ. ಬುದ್ಧನ ಶಿಷ್ಯನಾಗಿ ಆತನ ಜೊತೆಯಲ್ಲಿ ನಡೆದ.*

*ನಮ್ಮ ಕಾಲದಲ್ಲಿ ಮಧ್ಯಪ್ರದೇಶದ ಡಕಾಯಿತರು ವಿನೋಬ–ಜಯಪ್ರಕಾಶ ನಾರಾಯಣರ ಸಂಪರ್ಕದಿಂದ ಕಾಡು ಜೀವನದಿಂದ ನಾಡು ಜೀವನಕ್ಕೆ ಬಂದು ನಾಗರೀಕರಾದ ಪ್ರಸಂಗವೂ ನಡೆದಿದ್ದಿದೆ. ಈಗ ಅಂಥ ಇನ್ನೊಂದು ಪ್ರಸಂಗ ಸಂಭವಿಸಿದೆ. ಇಲ್ಲಿ ವ್ಯಕ್ತಿ ಸಂಪರ್ಕವೂ ಆಗಿಲ್ಲ. ಕೇವಲ ಪುಸ್ತಕ ಓದಿ ಪರಿವರ್ತನೆ ಆಗಿದೆ.*

ಲಕ್ಷ್ಮಣ ಗೋಲೆ ಮುಂಬೈನ ಫಾಟ್ ಕೂಪರ್ ಸ್ಲಂಗಳಲ್ಲಿ ಗೂಂಡಾಗಿರಿ ನಡೆಸುತ್ತಿದ್ದ ವ್ಯಕ್ತಿ. ನೀರಿಗಾಗಿ ನಡೆಯುತ್ತಿದ್ದ ಜಗಳಗಳಲ್ಲಿ ಆತನದೇ ಘರ್ಷಣೆ, ಹಲ್ಲೆ. ಅಲ್ಲೊಬ್ಬ ಇವನನ್ನು ಮೀರಿಸುವ ಪುಂಡನೊಬ್ಬ ಇದ್ದ. ನೀರಿನ ಜಗಳದ ಮುಖಂಡ. ಒಮ್ಮೆ ಆತನಿಗೂ ಗೋಲೆಗೂ ಹಣಾಹಣಿಯಾಯಿತು. ಗೋಲೆ ಚಾಕುವಿನಿಂದ ಆ ಪುಂಡನನ್ನು ಇರಿದ. ಗೋಲೆಯ ಕುಕೃತ್ಯಗಳ ಕಾಟ ಅಲ್ಲಿಂದ ಹೆಚ್ಚಾಯಿತು ಮತ್ತು ಮುಂದುವರೆಯಿತು. ಲೂಟಿ, ಹಲ್ಲೆ, ಕಳ್ಳ ದಂಧೆ, ಬ್ಲಾಕ್‌ಮೇಲ್, ಬೆದರಿಕೆ ಇತ್ಯಾದಿ. 'ಕೊಲೆ ಒಂದು ಬಿಟ್ಟು ಬೇರೆ ಎಲ್ಲ ಅಪರಾಧ ಮಾಡಿದೆ. ಬೇಕಾದಷ್ಟು ಹಣ ದೋಚಿದೆ. ಜೇಲಿಗೆ ಹೋಗಿ ಬರುವುದು ಮಾಮೂಲಾಗಿತ್ತು' ಎಂದು ಅವನೇ ಹೇಳುತ್ತಿದ್ದ.

ಬರಬರುತ್ತಾ ಮುಂಬೈನಲ್ಲಿ ಭಯೋತ್ಪಾದಕತೆ ಬೆಳೆಯಿತು. ಲಕ್ಷ್ಮಣ ಗೋಲೆ ಬಂಧನವಾಯಿತು. ಈ ಬಾರಿ ಜಾಮೀನು ದೊರೆಯದೆ ಜೈಲುವಾಸವೇ ಗತಿಯಾಯಿತು. ಅಲ್ಲಿ ನಡೆದುದೇ ಚಮತ್ಕಾರ. ಆತ ನಾಸಿಕ್ ಮತ್ತು ಆರ್ಥರ್ ರೋಡ್ ಜೈಲುಗಳಲ್ಲಿದ್ದ ಕಾಲ. ಆಗ ಅವನಿಗೆ ಪ್ರದೀಪ ಬಾಳೇಕರ್ ಎಂಬ ಅಪರಾಧಿಯ ಪರಿಚಯವಾಯಿತು. ಆತ ಗೋಲೆಗೆ ಮಹಾತ್ಮ ಗಾಂಧಿಯವರ ಕತೆ ಹೇಳಿದ. ಸಣ್ಣ ಪುಸ್ತಕ ಕೊಟ್ಟ. ಗೋಲೆ ಅದನ್ನು ಓದಿದ. ಮನಸ್ಸಿಗೆ ಏನೋ, ನೆಮ್ಮದಿ, ಬೆಳಕು ದೊರೆತಂತೆ ಅನ್ನಿಸಿತು. ತಾನು ಮಾಡಿದ ತಪ್ಪಿಗಾಗಿ ತಂದೆಯ ಮುಂದೆ ತಪ್ಪೊಪ್ಪಿಕೊಳ್ಳುತ್ತಾ ನಿಂತಿದ್ದ ಬಾಲ ಗಾಂಧಿಯ ಚಿತ್ರ ಗೋಲೆಯ ಮನಸ್ಸಿನಲ್ಲಿ ಮುದ್ರೆಗೊಂಡಿತು. 'ನಾನೂ ಒಳ್ಳೆಯವನಾಗಬೇಕು' ಎನಿಸಿತು.

ಆಮೇಲೆ ಗೋಲೆ ಗಾಂಧೀಜಿಯ ಜೀವನ ಚರಿತ್ರೆಯ ದೊಡ್ಡ ಪುಸ್ತಕ ಕೇಳಿದ. ಅದನ್ನು ಓದಿದ ಮೇಲೆ ಆತ ನಿರ್ಧರಿಸಿದ, ತಾನೂ ತಪ್ಪು ಒಪ್ಪಿಕೊಳ್ಳಬೇಕು ಎಂದು. ಆಗ ಅವನ ತಲೆಯ ಮೇಲೆ ಸುಮಾರು ೧೮ ಮೊಕದ್ದಮೆಗಳು ಇದ್ದವು. ಗೋಲೆ ನ್ಯಾಯಾಧೀಶರಿಗೆ ಪತ್ರ ಬರೆದು, ತಾನು ತಪ್ಪು ಒಪ್ಪಿಕೊಳ್ಳುವುದಾಗಿಯೂ, ತನಗೆ ಶಿಕ್ಷೆ ಪ್ರಕಟಿಸಬೇಕೆಂದೂ, ತನ್ನ ಮೇಲಿನ ಮೊಕದ್ದಮೆಗಳ ವಿಚಾರಣೆ ಮುಂದುವರೆದು ಕಾಲ ವ್ಯಯವಾಗುವುದು ಬೇಡವೆಂದೂ ಕೇಳಿಕೊಂಡ.

ಪತ್ರ ನೋಡಿ ಬೆರಗಾದ ನ್ಯಾಯಾಧೀಶರು ಗೋಲೆಯಯನ್ನು ಕೋರ್ಟಿಗೆ ಕರೆಸಿ, ಇದ್ದಕ್ಕಿದ್ದಂತೆ ಈ ವಿಚಿತ್ರ ಬಿನ್ನಹಕ್ಕೆ ಕಾರಣವೇನೆಂದು ಕೇಳಿದರು. ಗಾಂಧಿಯವರು ತಪ್ಪು ಒಪ್ಪಿಕೊಂಡಿದ್ದನ್ನು ಓದಿ ತಿಳಿದು ತನಗೂ ಹಾಗೇ ಅನಿಸಿತು ಎಂದ ಗೋಲೆ. ಆತ ಮಾಡಿದ್ದ ಅಪರಾಧಗಳಿಗೆ ಒಟ್ಟು ಏಳು ವರ್ಷ ಶಿಕ್ಷೆ ವಿಧಿಸಬಹುದು ಎಂದು ನ್ಯಾಯಾಧೀಶರು ಹೇಳಿದರು. ಗೋಲೆ ಹಿಂಜರಿಯದೆ, ಆಗಲಿ, ಶಿಕ್ಷೆಗೆ ಸಿದ್ಧ ಎಂದ. ಲಕ್ಷ್ಮಣ ಗೋಲೆಯ ಈ ತಪ್ಪೊಪ್ಪಿಗೆಯನ್ನು ನೋಡಿ ನ್ಯಾಯಾಧೀಶರ ಮನ ಕರಗಿ ಅವನಿಗೆ ಐದು ವರ್ಷಗಳ ಶಿಕ್ಷೆ ಮತ್ತು ಜುಲ್ಮಾನೆ ವಿಧಿಸಿದರು.

ಜೈಲಿನಲ್ಲಿ ಗೋಲೆ ಶಿಕ್ಷೆ ಅನುಭವಿಸುತ್ತಾ ಸುಮ್ಮನೆ ಕೂರಲಿಲ್ಲ. ಇನ್ನಷ್ಟು ಗಾಂಧಿ ಸಾಹಿತ್ಯ ಓದಿದ. ಜೊತೆಯ ಕೈದಿಗಳಿಗೆಲ್ಲ ಆ ಸಾಹಿತ್ಯ ಓದಲು ಹಚ್ಚಿದ. ಅಪರಾಧಿಗಳ ಮನಸ್ಸನ್ನು ತಿದ್ದಲು ಯತ್ನಿಸಿದ. ಮುಂಬೈನ ಗಾಂಧಿ ಬುಕ್ ಸೆಂಟರ್‌ನಿಂದ ಇನ್ನಷ್ಟು ಗಾಂಧಿ ಸಾಹಿತ್ಯ ಕೋರಿ ಬರೆದ ೭೨ ಪತ್ರಗಳು ಆ ಬುಕ್ ಸೆಂಟರ್‌ನಲ್ಲಿ ಈಗಲೂ ಇವೆ. ಜೈಲಿನ ಅಧಿಕಾರಿಗಳು ಇವನ ನಡವಳಿಕೆಯನ್ನು ಮೆಚ್ಚಿ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಿದರು.

ಗೋಲೆ ಶಿಕ್ಷೆ ಮುಗಿಸಿ ಹೊರಬಂದ. ಜೈಲಿನ ಅಧಿಕಾರಿಗಳಿಂದ ಈತನ ಕತೆ ಕೇಳಿದ ಹಲವು ವ್ಯಾಪಾರೋದ್ಯಮಿಗಳು ಇವನಿಗೆ ಕೆಲಸ ಕೊಡಲು ಮುಂದೆ ಬಂದರು. ಒಬ್ಬ ವಜ್ರದ ವ್ಯಾಪಾರಿ ಹಾಗೆ ಮುಂದೆ ಬಂದರು. ಲಕ್ಷ್ಮಣ ನಿರಕರಿಸಿದ. 'ವಜ್ರದ ವ್ಯಾಪಾರದಿಂದ ಬೇಕಾದಷ್ಟು ಹಣ ಸಿಗಬಹುದು. ಆದರೆ ನೆಮ್ಮದಿ ಸಿಗಲಾರದು. ನಾನು ಗಾಂಧೀಜಿಗಾಗಿ ಕೆಲಸ ಮಾಡಬೇಕು. ಗಾಂಧೀಜಿ ತೋರಿದ ದಾರಿಯಲ್ಲಿ ನಡೆಯಬೇಕು ಎಂದ. ಅದಕ್ಕಾಗಿ ಗಾಂಧಿ ಬುಕ್ ಹೌಸ್‌ನಲ್ಲಿ ಕೆಲಸಕ್ಕಾಗಿ ಬಿನ್ನವಿಸಿಕೊಂಡ.

ಈಗ ಮುಂಬೈನ ಗ್ರ್ಯಾಂಟ್ ರೋಡಿನಲ್ಲಿರುವ ಗಾಂಧಿ ಬುಕ್ ಸೆಂಟರಿನಲ್ಲಿ ಲಕ್ಷ್ಮಣ ಗೋಲೆ ಉದ್ಯೋಗಿ. ಗೋಲೆ ಓದಿದ್ದು ಏಳನೇ ತರಗತಿಯವರೆಗಷ್ಟೆ. ಆದರೆ ಜೈಲಿನಲ್ಲಿದ್ದಾಗ ಗುಜರಾತಿ ಓದು ಬರೆಹ ಕಲಿತುಕೊಂಡ. ಈಗ ಈತ ಅಲ್ಲಿ ಪುಸ್ತಕ ಮಾರುತ್ತಾನೆ. ಮನೆಯಲ್ಲಿ ಚರಕಾ ನೂಲುತ್ತಾನೆ.

ಗಾಂಧೀಜಿಯ ಜೀವನ ಚರಿತ್ರೆಯಲ್ಲಿ ಒಂದು ಅಧ್ಯಾಯವಿದೆ. ('ಒಂದು ಪುಸ್ತಕ ಮಾಡಿದ ಮೋಡಿ'.) ಜಾನ್ ರಸ್ಕಿನ್ನರ 'ಅನ್‌ಟು ದ ಲಾಸ್ಟ್' ಓದಿ ಗಾಂಧೀಜಿ ಬಾಳು ಬೇರೆಯಾಯಿತು. ಅದೇ ಗಾಂಧೀಜಿಯ ಚರಿತ್ರೆ ಓದಿ ಲಕ್ಷ್ಮಣ ಗೋಲೆ ಎಂಬ ಅಪರಾಧಿಯ ಬಾಳು ಬದಲಾಯಿತು. *

(ಕೃಪೆ: '**ನಂದಿನಿ**':ಅವಕಾಶ ವಂಚಿತರ ಪತ್ರಿಕೆ, ಚೆನ್ನೈ)

# ಲೋಹಿಯಾ ಜೊತೆ : ಡಾ ಯು ಆರ್ ಅನಂತಮೂರ್ತಿ



**ನಾ**ನು ಲೋಹಿಯಾ ಅವರನ್ನು ಮೊದಲು ನೋಡಿದ್ದು ಶಿವಮೊಗ್ಗ ನಗರದಲ್ಲಿ. ರೈಲ್ವೆ ಸ್ಟೇಶನ್‌ನಲ್ಲಿ. ಬೆಂಗಳೂರಿನಿಂದ ಸಾಗರಕ್ಕೆ ಹೋಗುವ ರೈಲು ಡಬ್ಬಿಯಲ್ಲಿ ಅವರೊಬ್ಬರೇ ನಿದ್ದೆಗೆಟ್ಟು ಎದ್ದು ಕೂತಿದ್ದರು. ನಾನು ಅವರಿಗೆ ನಮ್ಮ ಮನೆಯಿಂದ ನಮ್ಮಮ್ಮ ಮಾಡಿದ ಡಿಕಾಕ್ಷನ್ ಕಾಫಿಯನ್ನು ಮತ್ತು ಪಕ್ಕದ ಹೋಟೇಲ್‌ನಿಂದ ಕೊಂಡಿದ್ದ ಬಿಸಿಬಿಸಿ ಇಡ್ಲಿಯನ್ನು ತೆಗೆದುಕೊಂಡು ಹೋಗಿದ್ದೆ.

ಲೋಹಿಯಾರವರು ಸತ್ಯಾಗ್ರಹಿಯಾಗಿ ಉಪವಾಸ ಇದ್ದರೆಂದು ಕಾಣುತ್ತದೆ. ನಸು ನಕ್ಕು ಬೇಡವೆಂದರು. ಈ ಘಟನೆಗೆ ಇರುವ ಹಿನ್ನೆಲೆ ಹೇಳುವೆ. ಕಾಗೋಡು ರೈತ ಸತ್ಯಾಗ್ರಹದಲ್ಲಿ ಲೋಹಿಯಾರವರು ನೇಗಿಲು ಹಿಡಿದು ಉಳಲು ಹೋಗಿ ಎಲ್ಲ ರೈತರಂತೆ ಬಂಧಿತರಾಗಿದ್ದರು. ನೆಹರೂವರ ಅತ್ಯುತ್ತಮ ಸ್ನೇಹಿತರೊಲ್ಲೊಬ್ಬರೆಂದೇ ಖ್ಯಾತರಾಗಿದ್ದ ಲೋಹಿಯಾರವರನ್ನು ಸರ್ಕಾರ ಸಾಗರದ ಜೈಲಿಗೆ ಹಾಕಿರಲಿಲ್ಲ. ಬೆಂಗಳೂರಿನ ಜೈಲಿನಲ್ಲಿ ಇಟ್ಟಿದ್ದರು. ನನಗೆ ನೆನಪಿಲ್ಲ–ಲೋಹಿಯಾರವರು ಇದನ್ನು ಪ್ರತಿಭಟಿಸಿದ್ದರೋ ಏನೋ...


ಮ್ಯಾಜಿಸ್ಟ್ರೇಟರ್ ಎದುರು ಒಬ್ಬ ಅಪರಾಧಿಯಾಗಿ ನಿಂತು ಲೋಹಿಯಾರವರು ಅವರ ಯಾವತ್ತಿನ ನುಡಿಗಟ್ಟಿನಲ್ಲಿ ಮ್ಯಾಜಿಸ್ಟ್ರೇಟರ್‌ನ್ನು 'ಮ್ಯಾಜಿಸ್ಟರ್' ಎಂದು ಕರೆದರು. ನಾವು ಭಾಷೆಯನ್ನು ಪಡೆಯುವುದೇ ಹೀಗೇ ಎಂದು ವಿವರಿಸಿದರು ಕೂಡಾ. ಕೆಲವು ದಿನಗಳಲ್ಲೇ ಲೋಹಿಯಾ ಅಮೇರಿಕಾಕ್ಕೆ ಹೋಗುವುದಿತ್ತು. ನೆಹರೂರವರು ಮಧ್ಯಪ್ರವೇಶಿಸಿ ಅವರನ್ನು ಬಿಡುಗಡೆ ಮಾಡಿದರು ಎಂಬ ಸುದ್ದಿಯೂ ಇತ್ತು. ನನಗೊಬ್ಬ ವಿಲಕ್ಷಣ ವ್ಯಕ್ತಿ ಎನಿಸುತ್ತದೆ ಈ ಲೋಹಿಯಾ.

ಲೋಹಿಯಾ ಬಗ್ಗೆ ಹೀಗೆ ಹಲವು ಕತೆಗಳಿದ್ದವು. ಅದರಲ್ಲಿ ಒಂದು ಕತೆ ಪ್ರಕಾರ ಇಂದಿರಾ ಅವರಿಗೆ ತುಂಬಾ ಇಷ್ಟವಾದವರು ಲೋಹಿಯಾ. ಜೈಲಿನಲ್ಲಿದ್ದಾಗ ನೆಹರು ಮಗಳಾದ ಇಂದಿರಾ ಒಂದು ಬುಟ್ಟಿ ಮಾವಿನ ಹಣ್ಣನ್ನು ಲೋಹಿಯಾರಿಗೆ ಕಳುಹಿಸಿದ್ದರು ಎಂದು ಎಲ್ಲಾ ಪತ್ರಿಕೆಗಳಲ್ಲೂ ಬಂದಿತ್ತು.

ಮತ್ತೆ ನಾನು ಲೋಹಿಯಾರನ್ನು ನೋಡಿದ್ದು ನನ್ನ ಯೌವನದ ದಿನಗಳಲ್ಲಿ. ಶಾಂತವೇರಿ ಗೋಪಾಲ ಗೌಡರ ಜೊತೆ. ಒಂದು ಭೇಟಿ ನನಗೆ ಯಾವತ್ತೂ ನೆನಪಿರುತ್ತದೆ. ಲೋಹಿಯಾರನ್ನು ಕೃಷ್ಣರಾಜ ಸಾಗರ ಹೋಟೇಲ್‌ನಲ್ಲಿ ಇಳಿಸಿದ್ದರು. ಅವರ ಜೊತೆ ಬೆಳಗಿನ ಉಪಹಾರಕ್ಕೆಂದು ಶಾಂತವೇರಿ ನನ್ನನ್ನು ಕರೆದುಕೊಂಡು ಹೋದರು.

ಲೋಹಿಯಾ ತುಂಬಾ ಸಜ್ಜನಿಕೆಯ ಮಾತುಗಾರ. ಮತ್ತು ಮಾತಾಡುವುದರಲ್ಲಿ ಖುಶಿ ಇದ್ದವರು. ಊಟದ ಹೊತ್ತಿನಲ್ಲಿ ಅವರಷ್ಟು ಉಪಚಾರ ಮಾಡುವವರನ್ನು ಕಾಣುವುದು ಅಪರೂಪ. ಮೊದಲು ನನಗೆ ಅವರು ಪಪ್ಪಾಯಿಯನ್ನು ಒತ್ತಾಯಪಡಿಸಿ ಹೊಟ್ಟೆತುಂಬಾ ತಿನ್ನಿಸಿದರು. ಸಸ್ಯಾಹಾರಿಯಾದರೂ ಲೋಹಿಯಾ ಮೊಟ್ಟೆಯೊಂದನ್ನು ಮಾತ್ರ ತಿನ್ನುತ್ತಿದ್ದರು. ನನಗೂ ಅವರಿಗೂ ಆಮ್ಲೇಟ್, ಬ್ರೆಡ್‌ನ್ನು ತರಿಸಿದರು. ಭಾಷೆ ಬಗ್ಗೆ ನಮ್ಮ ಮಾತು ತಿರುಗಿತು.

ಲೋಹಿಯಾ ಹೇಳಿದರು– 'ನೀನೊಬ್ಬ ಲೇಖಕ. ಇದನ್ನು ಬರೆದು ಪ್ರಚಾರ ಮಾಡಬೇಕು ನೀನು. ನಾವೆಲ್ಲಾ ಇಂಗ್ಲೀಷ್‌ನ್ನು ಗ್ರಹಿಕೆಯ ಭಾಷೆಯಾಗಿ ಕಲಿಯಬೇಕು. ಆದರೆ ಅಭಿವ್ಯಕ್ತಿ ಭಾಷೆಯಾಗಿ ಅಲ್ಲ. ವೇದೋಪನಿಷತ್ತುಗಳನ್ನು ಸಂಸ್ಕೃತದಿಂದ ಇಂಗ್ಲೀಷ್‌ಗೆ ಭಾಷಾಂತರ ಮಾಡಿದ ಮ್ಯಾಕ್ಸ್ ಮುಲ್ಲರ್ ಸಂಸ್ಕೃತದಲ್ಲಿ ಮಾತನಾಡುವ ಶಕ್ತಿ ಪಡೆದಿದ್ದನೋ ಇಲ್ಲವೋ. ಆದರೆ ಅವನ ಗ್ರಹಿಸುವ ಶಕ್ತಿಯಿಂದ ಎಂಥಾ ಕೆಲಸವನ್ನು ಅವನು ಮಾಡುವುದು ಸಾಧ್ಯವಾಯಿತು! ಹಾಗೇ ನಮಗೆ ಯುರೋಪ್ ಗ್ರಹಿಕೆಗೆ ಬೇಕು. ಅಭಿವ್ಯಕ್ತಿಗೆ ಮಾತ್ರ ನಮ್ಮ ನಮ್ಮ ಭಾಷೆಗಳೇ ಬೇಕು. ಆದರೆ ನಿನಗೊಂದು ಸಲಹೆ– ಕನ್ನಡವನ್ನು ನೀವು ಗ್ರಾಜುಯೇಶನ್ ಶಿಕ್ಷಣ ಮಟ್ಟಕ್ಕೆ ಬಳಸಿ. ಪೋಸ್ಟ್ ಗ್ರಾಜುಯೇಶನ್ ಹಂತಕ್ಕೆ ಬಂದಾಗ ಹಿಂದಿಯನ್ನು ಬಳಸಬೇಕೆಂದು ನಾನು ಸೂಚಿಸುತ್ತೇನೆ.'



ನನಗಾಗ ಥಟ್ಟನೆ ಹೊಳೆದಿದ್ದನ್ನು ಹೇಳಿದೆ 'ಸರ್, ಒಂದು ಭಾಷೆ ಪೋಸ್ಟ್ ಗ್ರಾಜುಯೇಶನ್ ಅಧ್ಯಯನಕ್ಕೆ ಸಲ್ಲದು ಎನ್ನಿಸಿದರೆ ಅದು ಪ್ರೈಮರಿ ಅಧ್ಯಯನಕ್ಕೂ ಸಲ್ಲದು ಎಂದು ತಿಳಿಯಬೇಕು.' ನನಗಾದ ಆಶ್ಚರ್ಯವೆಂದರೆ ಇದನ್ನು ಕೇಳಿಸಿಕೊಂಡ ಲೋಹಿಯಾ ಯಾವ ಪ್ರತಿವಾದವನ್ನು ಹೂಡಲಿಲ್ಲ. ನನ್ನ ಮಾತನ್ನು ಒಪ್ಪಿಕೊಂಡು ಹೇಳಿದರು 'ನಿನ್ನ ಮಾತನ್ನು ಒಪ್ಪುವೆ. ಇಂಡಿಯಾಕ್ಕೊಂದು ಸಾಮಾನ್ಯ ಭಾಷೆ ಇರಬೇಕು. ಇಂಗ್ಲೀಷ್ ಆಗಿರಬಾರದೆಂದು ನಾನು ಇದನ್ನು ಹೇಳಿದೆ. ನಿನ್ನ ಮಾತನ್ನು ನಾನು ಸಂಪೂರ್ಣ ಒಪ್ಪಿಕೊಳ್ಳುತ್ತೇನೆ. ಭಾರತ ಬಹುಭಾಷಿಕ ದೇಶವಾಗಿದೆ. ಎಲ್ಲಾ ಭಾಷೆಗಳೂ ಇಲ್ಲಿ ರಾಷ್ಟ್ರಭಾಷೆಗಳೇ ಆಗಿವೆ. ವಿಶ್ವಸಂಸ್ಥೆಯಲ್ಲಿ ಇರುವಂತೆ ನಮ್ಮ ಎಲ್ಲಾ ಪ್ರಾಂತ್ಯಗಳಿಂದ ಬಂದ ಜನ ದೆಹಲಿಯಲ್ಲಿ ಕೂಡುವಂತಾದರೆ ಭಾಷೆಯಿಂದ ಭಾಷೆಗೆ ಅನುವಾದ ಮಾಡಲು ಹಲವರು ಇರಬೇಕು. ಆಗ ಸ್ವರಾಜ್ಯ ಎನ್ನುವುದು ಎಲ್ಲಾ ಭಾಷೆಗಳಲ್ಲಿ ನೈಜವಾಗುತ್ತದೆ.

ನಾನು ಇಂಗ್ಲೆಂಡ್‌ನಿಂದ ಓದಿ ಬಂದ ಮೇಲೆ ನನ್ನ ಥೀಸಿಸ್ ವಿಷಯ ಕೇಳಿದರು. ಇಷರ್‌ವುಡ್ ಎಂಬ ಲೇಖಕ ಕ್ರಮೇಣ ಕ್ರಾಂತಿಯ ವಿಚಾರಗಳಿಂದ ವಿಮುಖನಾಗಿ ರಾಮಕೃಷ್ಣರ ಭಕ್ತನಾದದ್ದನ್ನು ನಾನು ಹೇಳಿದೆ. ಈ ಘಟನೆಯನ್ನು ಅಚ್ಯುತ ಪಟವರ್ಧನರನ್ನು ಕಂಡಿದ್ದ ಲೋಹಿಯಾ ತುಂಬಾ ಕುತೂಹಲಿಯಾಗಿ ಇನ್ನೊಮ್ಮೆ ವಿವರಗಳನ್ನು ನನ್ನಿಂದ ಕೇಳಿ ತಿಳಿದರು. ಆ ದಿನವೇ ನಾನು ಅಕ್ಕಮಹಾದೇವಿಯ ಕೆಲವು ವಚನಗಳನ್ನು ಅವರಿಗೆ ಓದಿ ವಿವರಿಸಿದೆ. ನನಗಿಂತ ಮೊದಲೇ ಈ ಕೆಲಸವನ್ನು ಶಾಂತವೇರಿ ಮಾಡಿದ್ದರೆಂದು ಆಮೇಲೆ ತಿಳಿಯಿತು.

ಇನ್ನೊಂದು ಘಟನೆ ಲೋಹಿಯಾರ ಕೋಪಕ್ಕೆ ಸಂಬಂಧಿಸಿದ್ದು. ಮೈಸೂರಿನ ಮಾನಸ 'ಗಂಗೋತ್ರಿಯ ಪೊಲಿಟಿಕಲ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಲೋಹಿಯಾ ಮಾತಾಡುವಂತೆ ಶಾಂತವೇರಿ ಒತ್ತಾಯ ಮಾಡಿದರು. ಶಾಂತವೇರಿ ಮೇಲಿನ ಈ ಒತ್ತಾಯ ತಂದವರು ಆಗ ಅಲ್ಲಿದ್ದ ಪ್ರೊಫೆಸರ್ ಒಬ್ಬರು. ದಾಕ್ಷಿಣ್ಯ ಸ್ವಭಾವದ ಲೋಹಿಯಾರಂತೂ ಒಪ್ಪಿ ಗಂಗೋತ್ರಿಗೆ ಬಂದರು. ಅಷ್ಟರಲ್ಲಾಗಲೇ ಲೋಹಿಯಾ ಇಂಗ್ಲೀಷ್‌ನ್ನು ಸಾರ್ವಜನಿಕ ಸಭೆಯಲ್ಲಿ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದರು. ಲೋಹಿಯಾ ಎಲ್ಲದರಲ್ಲೂ ಹೀಗೆ. ಹಿಂದಿಯಲ್ಲೇ ಮಾತಾಡುವುದೆಂದು ಹಟ ತೊಟ್ಟು ದಕ್ಷಿಣ ಭಾರತದವರಿಗೆ ಅಪ್ರಿಯರಾದರು. ದಕ್ಷಿಣ ಭಾರತದವರು ಪ್ರಧಾನಮಂತ್ರಿಯಾಗಬೇಕೆಂದು ಹೇಳಿ ಉತ್ತರದಲ್ಲಿ ಅಪ್ರಿಯರಾದರು. ಆವತ್ತು ಶಾಂತವೇರಿ ಮತ್ತು ಪ್ರೊಫೆಸರ್ ಒತ್ತಾಯಕ್ಕೆ ಕಟ್ಟುಬಿದ್ದು ಇಂಗ್ಲೀಷ್‌ನಲ್ಲೇ ಮಾತನಾಡಿದರು. ಅಂದಿನ ಮಾತಿನ ಸಾರಾಂಶ ಹೀಗಿತ್ತು. ಭಾರತದ ಕೊನೆಯ ದೊಡ್ಡ ಚಿಂತಕನೆಂದರೆ ಶಂಕರಾಚಾರ್ಯ. ಅವರ ನಂತರ ಉತ್ಕೃಷ್ಟ ಮಟ್ಟದ ಚಿಂತನೆ ಮಾಡಿದಂತವರು ಭಾರತದಲ್ಲಿ ಹುಟ್ಟಲೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಜನರು ತಮ್ಮ ತಮ್ಮ ಜಾತೀಯ

ಕೂಪಗಳಲ್ಲಿ ಬದುಕಿರುವುದೇ ಆಗಿದೆ. ಮತ್ತೆ ಇನ್ನೊಂದು ದೊಡ್ಡ ವರ್ಣಸಂಕರದ ಮಂಥನ ಈ ದೇಶದಲ್ಲಿ ನಡೆಯದೇ ಹೋದರೆ ಹೊಸ ಜ್ಞಾನದ ಉತ್ಪತ್ತಿ ಸಾಧ್ಯವಿಲ್ಲವೇನೋ..

ಇದನ್ನು ಹೇಳಿ ಲೋಹಿಯಾ ಕುಳಿತ ನಂತರ ಮಾನಸಗಂಗೋತ್ರಿಯ ಪ್ರೊಫೆಸರ್ ಅವರು ತಮ್ಮ ಜ್ಞಾನ ಪ್ರದರ್ಶನ ಮಾಡಿದರು. ನೆಹರೂಗೆ ಬಲಗೈಯಂತಿದ್ದ ಲೋಹಿಯಾ ಇಷ್ಟು ನಿರಾಶಾವಾದಿಯಾಗಿ ಯೋಚಿಸುತ್ತಿದ್ದಾರೆಂದು ಮರುಗಿ ತಮ್ಮ ಮಾತನ್ನು ಮುಗಿಸಿದರು. ಇದೆಲ್ಲವನ್ನೂ ಸುಮ್ಮನೆ ಕುಳಿತುಕೊಂಡೇ ಕೇಳಿಸಿಕೊಂಡ ಲೋಹಿಯಾ ಹೊರಗೆ ಬಂದು ನೇರವಾಗಿ ಕಾರಿನಲ್ಲಿ ಹೋಗಿ ಕುಳಿತರು. ಆಗ ಅಲ್ಲಿದ್ದವರು ನಾನು, ಶಾಂತವೇರಿ ಮತ್ತು ಕಾರ್ ಡ್ರೈವರ್. ಲೋಹಿಯಾ ಅದೆಷ್ಟು ತೀವ್ರವಾಗಿ ತನ್ನ ಜೊತೆಯವರ ಮೇಲೆ ಸಿಟ್ಟುಗೊಂಡಿದ್ದರು ಎಂಬುದನ್ನು ನಾನು ನೋಡಿದ್ದು ಆವತ್ತೇ. ' ಈ ಶಾಂತವೇರಿ ಯುನಿವರ್ಸಿಟಿಯಲ್ಲಿ ಗ್ರಾಜುಯೇಟ್ ಆಗಲಿಲ್ಲ. ಯುನಿವರ್ಸಿಟಿಯಲ್ಲಿ ಡಿಗ್ರಿ ಮಾಡಿದ ಮಹಾಜ್ಞಾನಿಗಳ ಭ್ರಾಂತಿಯಲ್ಲಿದ್ದಾನೆ. ನನ್ನನ್ನು ಒಬ್ಬ ಮೂರ್ಖನನ್ನು ನೋಡಲು ಕರೆದುಕೊಂಡು ಹೋದ. ನಾನು ನನ್ನ ವ್ರತ ಮುರಿದು ದರಿದ್ರ ಇಂಗ್ಲೀಷ್‌ನಲ್ಲಿ ಮಾತಾಡುವಂತಾಯಿತು. ಇದರ ಬದಲು ರಸ್ತೆ ಬದಿಯಲ್ಲಿ ಜನರ ಮಧ್ಯೆ ಮಾತಾಡಬಹುದಿತ್ತು' ಎಂದು ಹುಬ್ಬು ಗಂಟಿಕ್ಕಿ ಕೂತರು. ಶಾಂತವೇರಿಗೂ ಬೇಸರವಾಗಿತ್ತು. ಆದರೆ ಲೋಹಿಯಾ ನಿಂದನೆ ಅವರಿಗೆ ಸಹಜವಾಗಿಯೇ ನಿರಾಧಾರ ಎನಿಸಿತ್ತು. ಅವರು ಆಳವಾದ ಧ್ವನಿಯಲ್ಲಿ 'ನಿಮ್ಮ ಸೇವೆ ಸಾಕು ನನಗೆ' ಎಂದು ಸ್ವಲ್ಪಹೊತ್ತು ಸುಮ್ಮನಾಗಿಬಿಟ್ಟರು. ಲೋಹಿಯಾ ಶಾಂತವೇರಿ ಹೆಗಲ ಮೇಲೇ ಕೈಹಾಕಿ 'ಎಲ್ಲವನ್ನೂ ಮರೆತು ಬಿಡೋಣ' ಎಂದರು.

ಲೋಹಿಯಾರವರೇ ಶಾಂತವೇರಿಯಿಂದ 'ಸಂಸ್ಕಾರ' ಕಾದಂಬರಿ ಕತೆ ಕೇಳಿ ಅದನ್ನು ಪಟ್ಟಾಭಿರಾಮ ರೆಡ್ಡಿಗೆ, ಸ್ನೇಹಲತಾರಿಗೂ ಹೇಳಿ ಸಿನಿಮಾ ಮಾಡಲು ಪ್ರೇರಕ ಶಕ್ತಿಯಾದರು. *

**ಅಕ್ಷರ ರೂಪ : ಜಿ ಪಿ ಪ್ರಭಾಕರ ತುಮರಿ, ಮಣಿಪಾಲ.**

# (ಅ)ಹಿಂಸೆ: ಕೆಲವು ಬಿಡಿ ಆಲೋಚನೆಗಳು...

*** ಎಚ್. ಎಸ್ ರಾಘವೇಂದ್ರ ರಾವ್**



ಇವು ಬಹಳ ಹಳೆಯ ಪ್ರಶ್ನೆಗಳು: ಮನುಷ್ಯನ ಸ್ವಭಾವದ ಭಾಗವಾಗಿಯೇ ಹಿಂಸೆ ಎನ್ನುವುದು ಇದೆಯೋ ಇಲ್ಲವೋ ಎನ್ನುವುದು, ಯಾವುದೇ ಬದಲಾವಣೆಯನ್ನು ತರಲು ನಡೆಸುವ ಪ್ರಯತ್ನ/ಹೋರಾಟಗಳಲ್ಲಿ ಬಳಸುವ ಉಪಕರಣಗಳಲ್ಲಿ ಒಂದಾಗಿ ಹಿಂಸೆಗೆ ಎಡೆ ಇರಬೇಕೇ ಎನ್ನುವುದು ಮತ್ತು ಹಿಂಸೆಯ ಫಲವಾಗಿ ತಂದ ಬದಲಾವಣೆಯ ಎಷ್ಟು ಶಾಶ್ವತವಾಗಿ ಉಳಿಯುತ್ತದೆ ಎನ್ನುವುದು. ಇಷ್ಟೇ ಮುಖ್ಯವಾದ ಇನ್ನೊಂದು ಪ್ರಶ್ನೆಯೆಂದರೆ ರಕ್ತಪಾತದ ಲವಲೇಶವೂ ಕಾಣದಿದ್ದರೂ, ಮನುಷ್ಯರ ನಡುವೆ ಹಾಗೂ ಸಮುದಾಯಗಳ ನಡುವೆ ಅನುಕ್ಷಣವೂ ಇರುವ ಹಿಂಸೆಯ ಸ್ವರೂಪವೇನು ಎನ್ನುವುದು. ಗಾಂಧೀಜಿಯವರ ಕಲ್ಪನೆಯ 'ಅಹಿಂಸೆ'ಯನ್ನು ಕುರಿತಾದ ಚರ್ಚೆಯು ಇಲ್ಲಿನ ಒಂದೇ ಒಂದು ನೆಲೆಯಲ್ಲ. ಏಕೆಂದರೆ ಅವರು ಪ್ರತಿಪಾದಿಸಿದ ಅಹಿಂಸೆಯ ಪರಿಕಲ್ಪನೆಯ ಆಚೆಗೂ ಈ ವಿಷಯವು ಹರಡಿಕೊಂಡಿದೆ.

ನಾವೂ ಸೇರಿದಂತೆ, 'ಪ್ರಾಣಿಸಂಬಂಧ'ಗಳ ಈ ಜಗತ್ತು, ಯಾವಾಗಲೂ ಉದ್ದೇಶಿತ, ಅನುದ್ದೇಶಿತ ಹಾಗೂ ಅನಿವಾರ್ಯ ಹಿಂಸೆಗಳಲ್ಲಿ ಜೀವಿಸಿದೆ. ಇಂತಹ ನಡವಳಿಕೆಯು ಕೇವಲ ವೈಯಕ್ತಿಕ ಲಕ್ಷಣವಾಗಿ ಉಳಿಯದೇ ಬೇರೆ ಬೇರೆ ಸಮುದಾಯಗಳಿಗೂ ವಿಸ್ತರಿಸುತ್ತದೆ. ಅದು ಸಹಜೀವನದ ನಡುವೆಯೂ ತನ್ನ ಹೆಡೆಯನ್ನು ಎತ್ತುತ್ತಲೇ ಇರುತ್ತದೆ. ಹಲವು ಬಗೆಯ ಅಧಿಕಾರ ಕೇಂದ್ರಗಳಿಗೂ ಹಿಂಸೆಗೂ ಇರುವ ನಿಕಟ ಸಂಬಂಧವು ಎಲ್ಲರಿಗೂ ಗೊತ್ತು. ತಂದೆ, ತಾಯಿ, ಗುರು, ಗಂಡ/ಹೆಂಡತಿ, ಧರ್ಮಗುರು, ಪುರೋಹಿತ, ಪೋಲೀಸು ಇವರೆಲ್ಲರೂ ಕಾಣುವ/ಕಾಣದ ಬಗೆ ಬಗೆಯ ಹಿಂಸೆಗಳ ಪ್ರತಿನಿಧಿಗಳೇ ಆಗಿರುತ್ತಾರೆ. ತನ್ನ ಅನಿಸಿಕೆಗಳನ್ನು ಇತರರ ಮೇಲೆ ಹೇರುವ ಎಲ್ಲ ಬಗೆಗಳೂ ಹಿಂಸೆಯ ಅವತಾರಗಳೇ. ಹಿಂಸೆಗೆ ಒಳಪಟ್ಟಾಗಲೂ ಪ್ರತಿಭಟಿಸುವ ಶಕ್ತಿಯಿಲ್ಲದೆ ನರಳುವ ಮನಸ್ಸಿನಲ್ಲಿ ಮೂಡುವ ಭಾವನೆಗಳಿಗೆ, ಹಿಂಸೆಯ ಸ್ಪರ್ಶವು ಇದ್ದೇ ಇರುತ್ತದೆ. ಹಾಗೆಂದು ಎಲ್ಲರೂ ತಮಗೆ ತೋರಿದಂತೆ ಬದುಕುಬಹುದು, ಬದುಕಲಿ ಎಂದು ಸುಮ್ಮನಾದರೆ, ಆಗಲೂ ದುರ್ಬಲರು ಹಿಂಸೆಯ ಬಿರುಗಾಳಿಯಲ್ಲಿ ತತ್ತರಿಸಿಹೋಗುತ್ತಾರೆ. ಸಮಾಜವನ್ನು ಕಟ್ಟುವ ಎಲ್ಲ ಪ್ರಯತ್ನಗಳೂ ದುರ್ಬಲರಿಗೆ 'ತುಟಿ ಮರುಕ'ವನ್ನು ತೋರುತ್ತವೆ ಮತ್ತು ಅವರಿಗೆ ಆಗುವ ಕಷ್ಟವನ್ನು ಕಡಿಮೆ ಮಾಡುವ ಕಾನೂನುಗಳನ್ನೋ ಧರ್ಮವನ್ನೊ ರೂಪಿಸುತ್ತವೆ. ಆದರೆ, ಬಹುಪಾಲು ಜನರು ಅವುಗಳನ್ನು ಮುರಿಯುತ್ತಾರೆ, ಮೀರುತ್ತಾರೆ. ಆದರೂ ಅಂತಹ ಕಟ್ಟುಪಾಡುಗಳೇ ಇಲ್ಲದ ಸನ್ನಿವೇಶಕ್ಕಿಂತ ಈ ಹರುಕು ಮುರುಕು ಆಡಳಿತ ವಾಸಿ. 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದು ಪುರಂದರದಾಸರು ಹೇಳಿದ್ದು ಸರಿ. ಆದರೆ, ಅರಾಜಕತೆ ಕೂಡ ಯಾವುದಕ್ಕೂ ಪರಿಹಾರವಲ್ಲ. ಅಲ್ಲಿಯೂ ಬಲಶಾಲಿಯ ಸರ್ವಾಧಿಕಾರವೇ ಇರುತ್ತದೆ.



ಸಂಸ್ಕೃತಿ ಮತ್ತು ನಾಗರಿಕತೆಗಳು ಮನುಷ್ಯನ ಈ ಹಿಂಸ್ರಕ ಸ್ವಭಾವದಲ್ಲಿ ಬದಲಾವಣೆಯನ್ನು ತಂದಿವೆಯೇ ಎಂಬ ಪ್ರಶ್ನೆಗೆ 'ಹೌದು' ಎನ್ನುವ ಉತ್ತರವನ್ನು ಕೊಡುವುದು ಕಷ್ಟ. ಆದರೆ, ದೈನಂದಿನ ಜೀವನದಲ್ಲಿ ಮನುಷ್ಯರು ಪರಸ್ಪರ ಪ್ರೀತಿ–ವಿಶ್ವಾಸಗಳನ್ನು ತೋರಿಸುತ್ತಾರೆ. ಅವಕಾಶ ಸಿಕ್ಕರೆ ಶಾಂತಿ–ಸಮಾಧಾನಗಳಿಂದ ಜೀವನ ನಡೆಸಲು ಇಷ್ಟಪಡುತ್ತಾರೆ. ಆದರೆ, ನೂರರಲ್ಲಿ ತೊಂಬತ್ತು ಜನರಿಗೆ ಅದು ಸಾಧ್ಯವಾಗುವುದಿಲ್ಲ. ಏಕೆಂದರೆ, ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸ್ವಾರ್ಥಮೂಲವಾದ ಹಿಂಸ್ರಕ ಪ್ರವೃತ್ತಿಯು ಇದ್ದೇ ಇರುತ್ತದೆ. ಹೆಚ್ಚೆಂದರೆ, ದೈಹಿಕ ಹಿಂಸೆಯ ಪ್ರಮಾಣ ಕಡಿಮೆಯಾಗಬಹುದು. ಮಾನಸಿಕ ಹಿಂಸೆಯು ಅನೇಕ ಸಲ ಅದಕ್ಕಿಂತ ಕ್ರೂರವಾಗಿರುತ್ತದೆ. ಎಸ್. ದಿವಾಕರ ಅವರ 'ಕ್ರೌರ್ಯ' ಕಥೆಯು ಇದನ್ನು ಪರಿಣಾಮಕಾರಿಯಾಗಿ ದಾಖಲಿಸುತ್ತದೆ. ನಮ್ಮ ದೃಷ್ಟಿಯಿಂದ ಅತ್ಯಂತ ತತ್ವನಿಷ್ಠುರ ಮತ್ತು ಪ್ರಾಮಾಣಿಕ ಎಂದು ತೋರುವ ನಿಲುವು, ಬೇರೊಬ್ಬ ಫಲಾನುಭವಿಯ ನೆಲೆಯಿಂದ ನೋಡಿದಾಗ ಪರಮಾವಧಿ ಹಿಂಸೆ ಅಗಿರಬಹುದು. ದಕ್ಷಿಣ ಆಫ್ರಿಕಾದ ಯಾವುದೋ ಊರಿನ ನಡುಬೀದಿಯಲ್ಲಿ, ನಡುರಾತ್ರಿಯಲ್ಲಿ ಒಂಟಿಯಾಗಿ ನಿಂತ ಕಸ್ತೂರಿ ಬಾ ಅವರ ನೆನಪು ನನ್ನನ್ನು ಎಂದಿನಿಂದಲೂ ಕಾಡಿದೆ. ಗಾಂಧೀಜಿಯವರಿಗಿಂತ ನೂರುಪಟ್ಟು ಕ್ಷುಲ್ಲಕರಾದ ನಾವು ಇಂತಹ ಸಾವಿರ ಹಿಂಸೆಗಳನ್ನು ಮಾಡಿಲ್ಲ, ಮಾಡುತ್ತಿಲ್ಲ ಎಂದು ಹೇಳುವುದು ಹೇಗೆ? ಮೊದಲಿನಿಂದಲೂ ನಮ್ಮದು ಎಂದು ನಾವು ಹೇಳಿಕೊಳ್ಳುವ ಸಂಸ್ಕೃತಿಯಾಗಲೀ ಹೊರಗಿನಿಂದ ಬಂದು ನಮ್ಮ ಜೀವನಕ್ರಮದಲ್ಲಿ ಪಲ್ಲಟ ತಂದಿದೆ ಎನ್ನಲಾಗುವ ಸಂಸ್ಕೃತಿಯಾಗಲೀ ನಮ್ಮ ಸ್ವಭಾವದಲ್ಲಿ ಅಂತಹ ಹೆಚ್ಚಿನ



ಬದಲಾವಣೆಯನ್ನು ತಂದಿರುವುದಿಲ್ಲ. ಸಂಸ್ಕೃತಿ ನಿರ್ದಿಷ್ಟವಾದ ಮೌಲ್ಯಗಳು ಹೆಚ್ಚೆಂದರೆ ಒಂದು ಬಗೆಯ ಹಿಂಸೆಯ ಜಾಗದಲ್ಲಿ ಇನ್ನೊಂದು ಬಗೆಯ ಹಿಂಸೆಯನ್ನು ತರಬಹುದು ಅಷ್ಟೆ.

ಮನುಷ್ಯನ ಸ್ವಭಾವ ರಚನೆಯು ಹಿಂಸೆಯನ್ನು ಕುರಿತ ಚರ್ಚೆಯ ಒಂದು ನೆಲೆಯಾದರೆ, ಇತಿಹಾಸದ ಅವಲೋಕನವು ಇನ್ನೊಂದು ನೆಲೆ. ಸಮಾಜದಲ್ಲಿ ಬದಲಾವಣೆಯನ್ನು ತರಲೆಂದು ಹೋರಾಡುವ ಗೆಲ್ಲುವ/ಸೋಲುವ ಬಗೆಗಳು ಅದರ ಮತ್ತೊಂದು ನೆಲೆ. ಇಲ್ಲಿ ಯಾವುದು ಹಿಂಸೆ ಯಾವುದು ಅಲ್ಲ ಎಂದು ತೀರ್ಮಾನಿಸುವುದು ಸ್ವಂತ ಹಿತಾಸಕ್ತಿಗಳು ಮಾತ್ರವೇ. ನಾನು, ನನ್ನ ಕುಟುಂಬ, ಜಾತಿ, ವರ್ಗ, ದೇಶ ಎಲ್ಲವೂ ಈ ರೀತಿಯ ಪಕ್ಷಪಾತವು ನೆಲೆಸಿರುವ ಗೂಡುಗಳೇ ಆಗಿರುತ್ತವೆ. ನಾವು ನಮ್ಮ ನೆನ್ನೆಗಳನ್ನು ಮತ್ತು ಇಂದುಗಳನ್ನು ಗ್ರಹಿಸುವ ರೀತಿಯಲ್ಲಿಯೇ ಇಂತಹ ಪಕ್ಷಪಾತವು ಇರುತ್ತದೆ. ಅನೇಕ ವ್ಯಕ್ತಿಗಳು ಇವುಗಳನ್ನು ಮೀರುವ ಆಂಶಿಕ ಪ್ರಯತ್ನ ಮಾಡುತ್ತಾರೆ, ತಮ್ಮದೇ ಸಮುದಾಯಗಳ ಒಳಗೆ ಮತ್ತು ಹೊರಗೆ ಆಗಂತುಕರಾಗಿಯೇ ಉಳಿಯುತ್ತಾರೆ. ಅವರು ಆರಾಧನೆ ಮತ್ತು ಒಂಟಿತನ ಎರಡನ್ನೂ ಏಕಕಾಲದಲ್ಲಿ ಅನುಭವಿಸುತ್ತಾರೆ. ಏಸುವೂ ಅಷ್ಟೆ, ಗಾಂಧಿಯೂ ಅಷ್ಟೆ. ಯುದ್ಧದಲ್ಲಿ ತೊಡಗಬಾರದು, ಸಶಸ್ತ್ರ ಹೋರಾಟಗಳಲ್ಲಿ ತೊಡಗುವುದು ನಿರುಪಯುಕ್ತ, ಅದು 'ಕಂಡವರ ಮಕ್ಕಳನ್ನು ಬಾವಿಯಲ್ಲಿ ತಳ್ಳಿ ಆಳನೋಡುವ ಪ್ರಯತ್ನ' ಎನ್ನುವ ಮಾತುಗಳು ತಮ್ಮಷ್ಟಕ್ಕೆ ತಾವು ಸರಿ. ಆದರೆ, ಅದು ವ್ಯವಸ್ಥೆಯಿಂದ ಎಲ್ಲ ಸವಲತ್ತುಗಳನ್ನು ಪಡೆದ 'ಜಾಣ ಬುದ್ಧಿಜೀವಿ'ಗಳ ಮಾತು. ಆದರೆ, ಅಂತಹ ವಾದಕ್ಕೆ ಬೆಲೆಯಿರುವುದಿಲ್ಲ. ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವಗಳೆಂದು ಕರೆದುಕೊಳ್ಳುವ ಇಂಡಿಯಾ, ಯು.ಎಸ್.ಎ. ಮುಂತಾದ ದೇಶಗಳ ಪಾಡುಗಳನ್ನು ನೋಡಿದವರಿಗೆ ಹೆಚ್ಚಿನ ಭ್ರಮೆಗಳಿರುವುದಿಲ್ಲ. ಹಿಂಸೆಯ ಹಲವು ಬಣ್ಣಗಳ ಕಮ್ಯೂನಿಸ್ಟರು ಮಾತ್ರ ಕಂಡುಕೊಂಡಿರುವ ಯುದ್ಧತಂತ್ರವೆಂಬ ನಿಲುವು ತಪ್ಪಲ್ಲವೇ? ಆಗ ಯೆಹೂದಿಗಳು, ತಾಲಿಬಾನಿಗಳು, ಸಂಘ ಪರಿವಾರಿಗಳು ಇವರೆಲ್ಲರನ್ನೂ ಏನೆಂದು ಕರೆಯಬೇಕು? ಹಾಗೆಂದು ಇವರೆಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಿನೋಡಲು ಸಾಧ್ಯವೇ? ಜೀವನದ ಆದರ್ಶಗಳು, ಜೀವನ ವಿಧಾನಗಳು ಮತ್ತು ತ್ಯಾಗದ ಪ್ರಮಾಣದಲ್ಲಿ ಅವರುಗಳ ನಡುವೆ ವ್ಯತ್ಯಾಸವಿಲ್ಲವೇ?

ಆಧುನಿಕವೆಂದು ಕರೆಯಲಾದ ನಮ್ಮ ಕಾಲದ ಜೀವನ ಕ್ರಮಗಳಲ್ಲಿಯೇ, ನಾವು ಮಾಡಿಕೊಳ್ಳುವ ಪ್ರಗತಿ ಪಥದ ಆಯ್ಕೆಯಲ್ಲಿಯೇ, ನಾವು ಬದಿಗೆ ಸರಿಸುವ ಸಮುದಾಯಗಳ ಹಾಡು-ಪಾಡುಗಳಲ್ಲಿಯೇ ಹಿಂಸೆಯು ಹಾಸು ಹೊಕ್ಕಾಗಿರುವಾಗ, ಯಾವುದೋ ಒಂದನ್ನು ಹಿಂಸೆ 'ಯೆಂದು ಹೆಸರಿಸಿ, ಅವುಗಳಿಗೆ ಇರುವ ಪರ್ಯಾಯಗಳು



ಹಾಗಲ್ಲವೆಂದು ಹೇಳಲು ಸಾಧ್ಯವೇ? ಈಗ ನಮ್ಮೆಲ್ಲರ ಇಂತಹ ಚರ್ಚೆಗಳ ನಡುವೆಯೇ ನಿರ್ವಸಿತರು, ಅಲೆಮಾರಿಗಳು, ಕಡುಬಡವರು ಸಮುದಾಯಗಳು ಸೃಷ್ಟಿಯಾಗುತ್ತಿಲ್ಲವೇ?



ಇದೆಲ್ಲವನ್ನೂ ಹಿಂಸೆಯ ಚೌಕಟ್ಟಿನಿಂದ ಆಚೆಗೆ ಇಡುವ ನಿಲುವುಗಳು ಹೇಗೆ ಸರಿ. ಡೆಮೊಕ್ರಾಟಿಕ್ ಹಾಗೂ ನಾನ್ ವಯೊಲೆಂಟ್ ಎಂದು ನಾವು ಕರೆದುಕೊಳ್ಳುವ ಹೋರಾಟಗಳು ಮತ್ತು ಚಳುವಳಿಗಳು ತಂದಿರುವ ಬದಲಾವಣೆಗಳು ಯಾವ ಬಗೆಯವು, ಅವುಗಳಿಂದಲೇ ಹುಟ್ಟಿಕೊಂಡಿರುವ ಹೊಸ ಹಿಂಸೆಗಳು ಯಾವ ಬಗೆಯವು ಎಂಬ ಪ್ರಶ್ನೆಯ ಕಡೆಗೆ ನಮ್ಮ ಗಮನ ಹರಿದಿರುವುದು ಬಹಳ ಕಡಿಮೆ.


ಹೌದು. ಯಾವುದೇ ಸಮಸ್ಯೆಗೂ ಸರಳವಾದ, ಸಂಪೂರ್ಣವಾದ ಪರಿಹಾರವಿಲ್ಲ. ಹಿಂಸೆಯಿಲ್ಲದ ಹೋರಾಟಗಳು ಕೂಡ ಒಂದಿಷ್ಟಾದರೂ ಪರಿಹಾರ ನೀಡಿವೆ. ಹಾಗಲ್ಲದ ಹೋರಾಟಗಳು ನೋವಿನಲ್ಲಿಯೆ ಹುಟ್ಟಿ ಅಲ್ಲಿಯೇ ಅಳಿದವರದು ಮಾತ್ರವಲ್ಲ. ಸುಖಜೀವನದ 'ಕಂಫರ್ಟ್ ಝೋನು'ಗಳನ್ನು ಬಿಟ್ಟುಹೋದವರೂ ಅವರಲ್ಲಿ ಹಲವರಿದ್ದಾರೆ. ಅವರ ಹೋರಾಟದ ಫಲವಾದ ಎಚ್ಚರಗಳು ಅಥವಾ ತಿಳಿವಳಿಕೆಗಳು ಅಥವಾ ಪಾಠಗಳು ಇನ್ನೂ ಸ್ಪಷ್ಟವಾಗಿಲ್ಲ. ಅವರಲ್ಲಿಯೂ ಮನುಷ್ಯ ಸಹಜವಾದ ಎಲ್ಲ ದೌರ್ಬಲ್ಯಗಳೂ ಇವೆ. ನಾಯಕತ್ವಕ್ಕಾಗಿ ನಡೆಯುವ ಕೋಳಿ ಜಗಳಗಳಿವೆ. ಸಂಶಯಗಳ ಫಲವಾದ ರಕ್ತಪಾತಗಳಿವೆ. ನಮ್ಮಂತಹ ಬೃಹತ್ ಸಮಾಜಗಳಲ್ಲಿ, ತಂತ್ರಜ್ಞಾನವು ನೀಡುವ ತಿಳಿವಳಿಕೆಯನ್ನು ಕೊಲ್ಲುವ ಆಯುಧಗಳಾಗಿ ಬಳಸಿಕೊಳ್ಳಲು ಸನ್ನದ್ಧವಾಗಿರುವ ಸಮಾಜಗಳಲ್ಲಿ ಇಂತಹ ಹೋರಾಟಗಳು ಮೊದಲಿನಿಂದಲೇ ಮುಳುಗಿ ಹೋಗಿರುವ ಅಪಾಯ ಇದ್ದೇ ಇದೆ. ಯಾವುದರ ಬಗ್ಗೆಯೂ ಸಾರಾಸಗಟಾದ ತೀರ್ಮಾನಗಳನ್ನು ಕೊಡಲು ಸಾಧ್ಯವಿಲ್ಲ. ಯಾವುದು ಸರಿಯಲ್ಲ ಎಂದು ಹೇಳುವುದು ಯಾವಾಗಲೂ ಸುಲಭ. ಯಾವ ದಾರಿ ಸರಿ ಎಂದು ಹೇಳುವುದು ಕಡುಕಷ್ಟ. ಹಾಗೆಂದು ಯಾವ ದಾರಿಯು ಸರಿಯೆಂದು ಆಲೋಚಿಸುತ್ತಾ ಜೀವಮಾನವನ್ನೇ ಕಳೆದುಬಿಡುವ ಆರಾಮಕುರ್ಚಿಯ ಬುದ್ಧಿಜೀವಿಗಳ ಜಡತನ ಎಂದಿಗೂ ಸರಿಯಲ್ಲ. ತಮಗೆ ಸರಿಯೆಂದು ತೋರಿದುದನ್ನು ಮಾಡುತ್ತಾ ಹಾಗಲ್ಲವೆನ್ನಿಸಿದ್ದರ ಸಂಗಡವೂ ತೆರೆದ ಮನದ ಸಂವಾದವನ್ನು ಇಟ್ಟುಕೊಳ್ಳುವುದು ಮಾತ್ರ ಸಾಧ್ಯವೇನೋ. ಈ ಹಾದಿಯಲ್ಲಿ ಸಹಪಯಣಿಗರೂ ಇರುತ್ತಾರೆ, ಬೇರೆ ಹಾದಿಯಲ್ಲಿ ನಡೆಯುವವರೂ ಇರುತ್ತಾರೆ. ಕೊನೆಗೂ ನಮ್ಮ ಅನಿಸಿಕೆಗಳನ್ನು ಇನ್ನೊಬ್ಬರ ಮೇಲೆ ಹೇರುವುದೂ ಹಿಂಸೆಯೇ. ಮನ ಒಲಿಸಬಹುದು ಎಂದುಕೊಳ್ಳುತ್ತೇವೆ. ಇದು ವ್ಯಕ್ತಿಗಳ ನೆಲೆಯಲ್ಲಿ ಆಗುವಷ್ಟು ಸರಳವಾಗಿ ಸಮುದಾಯಗಳ/ಹಿತಾಸಕ್ತ ವಲಯಗಳ ಸಂದರ್ಭದಲ್ಲಿ ಆಗುವುದಿಲ್ಲ. ವ್ಯಕ್ತಿಗಳಲ್ಲಿ ಆಗುವ ಬದಲಾವಣೆ ಕೂಡ ಅವರವರ ವರ್ಗ, ವರ್ಣ, ಲಿಂಗ ಮತ್ತು ಜೀವನ ಕ್ರಮಮಗಳ ಚೌಕಟ್ಟುಗಳು ಹೇರುವ ಲಕ್ಷಣಗಳಿಂದ ಸಂಪೂರ್ಣವಾಗಿ ಬಿಡುಗಡೆ ಪಡೆದಿರುವುದಿಲ್ಲ.

ಈ ಸನಾತನವಾದ ಪ್ರಶ್ನೆಗಳಿಗೆ ಖಚಿತವಾದ ಉತ್ತರಗಳು ಇವೆಯೆಂದಾಗಲೀ ಇದ್ದ ಮಾತ್ರಕ್ಕೆ ಅವುಗಳನ್ನು ಅನ್ವಯಕ್ಕೆ ತರಬಹುದೆಂದಾಗಲೀ ನಾನು ತಿಳಿದಿಲ್ಲ. ಈ ಅನಿಸಿಕೆಗಳು ನಮ್ಮ ಕ್ರಿಯಾಶೀಲತೆಗೆ ತಣ್ಣೀರು ಎರಚಬಾರದು. ಬದಲಾಗಿ ನಮ್ಮದೇ ಸರಿಯೆಂಬ ಹಟದ ಬದಲು ಒಂದಷ್ಟು ವಿನಯವನ್ನು ಒಂದಷ್ಟು ಹೊಂದಿಕೊಳ್ಳುವ ಗುಣವನ್ನು ಕಲಿತರೆ ಚೆನ್ನ. ಅದು ಕೂಡ ಹೇಳುವಷ್ಟು ಸುಲಭವಲ್ಲ.

*

# ಕರ್ಮಯೋಗ: ಕೆಲವು ಟಿಪ್ಪಣಿಗಳು

*ಪ್ರಸನ್ನ, ಹೆಗ್ಗೋಡು



**ಕ**ರ್ಮಯೋಗವೆಂದರೇನು ಎಂದು ಚರ್ಚಿಸುವುದಕ್ಕೂ ಮೊದಲು ಕರ್ಮಯೋಗವೆಂಬ ವಿಚಾರವು ಇತ್ತೀಚೆಗೆ ನನ್ನನ್ನು ಹೇಗೆ ಆಕರ್ಷಿಸಿತು ಎಂಬ ಬಗ್ಗೆ ಮೊದಲು ಹೇಳ ಬಯಸುತ್ತೇನೆ. ಹಾಗೆ ಮಾಡಿದರೆ, ಪ್ರಾಯಶಃ, ತುಂಬ ಗಂಭೀರವಾಗಿ ಕಾಣುತ್ತಿರುವ ಈ ವಿಷಯವು ಹೆಚ್ಚು ಪ್ರಸ್ತುತವೂ, ಹೆಚ್ಚು ಆತ್ಮೀಯವೂ ಆಗಿ ಕಂಡೀತು.

* * *

ನಾನು ಇತ್ತೀಚೆಗೆ ವರ್ಧಾ ನಗರಕ್ಕೆ ಹೋಗಿದ್ದೆ. ವರ್ಧಾ ನಗರವು ಮಹಾರಾಷ್ಟ್ರ ರಾಜ್ಯದ ವಿದರ್ಭ ಪ್ರದೇಶದ ಒಂದು ಊರು. ಈ ಊರು ಹಲವಾರು ವರ್ಷಗಳ ಕಾಲ ಮಹಾತ್ಮಾಗಾಂಧಿಯವರ ವಾಸಸ್ಥಾನವಾಗಿತ್ತು, ಹಾಗೆಯೇ ವಿನೋಬಾ ಭಾವೆಯವರ ವಾಸಸ್ಥಾನವೂ ಆಗಿತ್ತು. ವರ್ಧಾದಲ್ಲಿ ಅವರು, ಸೇವಾಗ್ರಾಮದಿಂದ ಆರು ಕಿಲೋಮೀಟರು ದೂರದಲ್ಲಿ, ಪೌನಾರ್ ಎಂಬ ಗ್ರಾಮದಲ್ಲಿ, ದಾಮ್ ನದಿಯ ದಡದಲ್ಲಿ, ಪರಂದಾಮ (ದಾಮ, ಪರಂದಾಮ!) ಎಂಬ ಆಶ್ರಮವನ್ನು ಕಟ್ಟಿಕೊಂಡು ಗ್ರಾಮಸೇವೆಯಲ್ಲಿ ನಿರತರಾದರು.

೧೯೫೧ರಲ್ಲಿ ವಿನೋಬಾ ಭಾವೆ ಭೂದಾನ ಚಳುವಳಿಯನ್ನು ಆರಂಭಿಸಿದರು. ಆಗ ಅವರೊಟ್ಟಿಗೆ ಅನೇಕ ಮಹಿಳೆಯರು ಚಳುವಳಿಯಲ್ಲಿ ಭಾಗವಹಿಸಿದ್ದರು. ಅಲ್ಲಿ ವಿನೋಬಾ ಅವರ ಗಮನಕ್ಕೆ ಒಂದು ಸಂಗತಿ ಬಂತು. ಅದೆಂದರೆ, ಒಬ್ಬ ಮಹಿಳೆಯು, ಧಾರ್ಮಿಕವಾಗಿ, ನೈತಿಕವಾಗಿ ಹಾಗೂ ಸಾಮಾಜಿಕವಾಗಿ, ಸಾಧನೆ ಮಾಡಬಯಸಿದರೆ, ಪುರುಷರಿಗಿರುವಷ್ಟು ಅವಕಾಶಗಳು ಮಹಿಳೆಗಿಲ್ಲ ಎಂಬುದು. ಹಾಗಾಗಿ ಅವರು ತಮ್ಮ ಜೊತೆಗಿದ್ದ ಮಹಿಳೆಯರ ಆಗ್ರಹದಂತೆ ಪೌನಾರಿನಲ್ಲಿ ಒಂದು ಆಶ್ರಮವನ್ನು ಶುರು ಮಾಡಿದರು. ಪರಂದಾಮ ಆಶ್ರಮದ ಬಳಿ ಖಾಲಿ ಬಿದ್ದಿದ್ದ ಜಮ್ನಾಲಾಲ್ ಬಜಾಜರ ಬಂಗಲೆಯೊಂದನ್ನು ಬಳಸಿಕೊಂಡು ೧೯೫೯ರಲ್ಲಿ ವಿನೋಬಾ ಆರಂಭಿಸಿದ ಈ ಆಶ್ರಮದ ಹೆಸರು ಬ್ರಹ್ಮವಿದ್ಯಾಮಂದಿರ ಎಂದು.

ಬ್ರಹ್ಮ ವಿದ್ಯಾಮಂದಿರದಲ್ಲಿ ಆಗ ವಾಸಮಾಡಲಿಕ್ಕೆ ಶುರುಮಾಡಿದ ಕೆಲವು ಮಹಿಳೆಯರು ಈಗಲೂ ಅಲ್ಲಿ ವಾಸವಾಗಿದ್ದಾರೆ. ನಂತರದಲ್ಲಿ ಆಶ್ರಮವನ್ನು ಸೇರಿಕೊಂಡವರೂ ಸಹ ಕೆಲವರು ಅಲ್ಲಿದ್ದಾರೆ. ಕೆಲವರು ಪುರುಷರೂ ಇದ್ದಾರೆ. ನಾನಲ್ಲಿದ್ದಾಗ ಆಶ್ರಮವಾಸಿಗಳನ್ನು ಕಂಡೆ. ಅವರದ್ದು ಸುಕ್ಕುಗಟ್ಟಿದ ಮಯ್ಯಿ ಹಾಗೂ ಏಳುಬೀಳುಗಳ ನಡುವೆ, ಇಂದಿನ ಗ್ರಾಹಕ ಸಂಸ್ಕೃತಿಯ ಆರ್ಭಟದ ನಡುವೆ, ಆದರ್ಶವೊಂದರ ಕಾವನ್ನು ಐವತ್ತಮೂರು ವರ್ಷಗಳ ಕಾಲ ಉಳಿಸಿಕೊಂಡು ಬಂದಿದ್ದಾರೆ ಈ ಮಹಿಳೆಯರು! ಸಣಕಲು ದೇಹ. ಹೆಚ್ಚು ಕಡಿಮೆ ಎಲ್ಲರೂ ಮುದುಕಿಯರು. ಆದರೇನು! ಅವರ ಮುಖದ ತೇಜಸ್ಸು ಹಾಗೂ ಲವಲವಿಕೆಗಳನ್ನು ಕಂಡು ನಾನು ಬೆರಗಾಗಿ ಹೋದೆ. ಇದು ಸುಲಭದ ಮಾತಲ್ಲ. ಬೆಂಕಿಯ ಪೊಟ್ಟಣವೊಂದನ್ನು ಹೊರತುಪಡಿಸಿ, ತಮ್ಮ ಬದುಕಿಗೆ ಬೇಕಾಗುವ ಮಿಕ್ಕೆಲ್ಲವನ್ನೂ ಅವರು ತಾವೇ ಬೆಳೆದುಕೊಳ್ಳುತ್ತಾರೆ ಅಥವಾ ಸಿದ್ಧಪಡಿಸಿಕೊಳ್ಳುತ್ತಾರೆ; ಗೋಶಾಲೆ ನಡೆಸುತ್ತಾರೆ, ಬೇಸಾಯ ಮಾಡುತ್ತಾರೆ, ಹತ್ತಿಯಿಂದ ನೂಲು ತೆಗೆದು ಬಟ್ಟೆ ನೇಯುತ್ತಾರೆ; ಜೊತೆ 'ಜೊತೆಗೆ ವ್ಯಾಸಂಗ ಮಾಡುತ್ತಾರೆ, ದೇವರ ಧ್ಯಾನ ಮಾಡುತ್ತಾರೆ, ಬಂದವರೊಟ್ಟಿಗೆ ಹರಟುತ್ತಾರೆ ಹಾಗೂ ಗ್ರಾಮಸೇವೆ ಮಾಡುತ್ತಾರೆ. ಪೌನಾರಿನ ಆಶ್ರಮದ ಆ ಹೆಂಗಸರ ಸದ್ದಿರದ ಸಾಧನೆಯನ್ನು ಕಂಡಾಗ ಕರ್ಮಯೋಗವೆಂದರೇನೆಂದು ನನಗೆ ಗೊತ್ತಾಯಿತು.



* * *

ಗಾಂಧೀಜಿ ಹಾಗೂ ವಿನೋಬಾ ಇಬ್ಬರೂ 'ಕರ್ಮಯೋಗ'ದಲ್ಲಿ ನಂಬಿಕೆಯುಳ್ಳವರಾಗಿದ್ದರು. ಕರ್ಮಯೋಗವೆಂದರೇನು? ನಾನು ಸಂಸ್ಕೃತದ ಗ್ರಂಥಗಳನ್ನು ಓದಿದವನಲ್ಲ. ಗೀತೆ ಕೂಡ ಪೂರ್ತಿ ತಿಳಿಯದು. ನನ್ನ ಸರಳ ತಿಳುವಳಿಕೆಯ ಪ್ರಕಾರ, ಪ್ರತಿದಿನ ನಾವು ಮಾಡುವ ಕರ್ಮದಲ್ಲಿಯೇ ಧರ್ಮವನ್ನು ಕಾಣುವುದು ಹಾಗೂ ಒಳಿತನ್ನು ಕಾಣುವುದು ಕರ್ಮಯೋಗ. ಇದೇ ಮಾತನ್ನು, ತನ್ನ ಸ್ವಧರ್ಮವನ್ನು ಪಾಲಿಸಿಕೊಂಡು ಬರುವುದು ಎಂದು ಸಹಿತ ಅರ್ಥೈಸಲಾಗುತ್ತದೆ. ಶ್ರಮದ ದುಡಿಮೆ, ಜ್ಞಾನಾರ್ಜನೆ ಹಾಗೂ ಪ್ರಾರ್ಥನೆ ಇವು ಮೂರು ಸಂಗತಿಗಳು ಹದವರಿತು ಮಿಳಿತಗೊಂಡ ಬದುಕೇ ಕರ್ಮಯೋಗಿಯ ಬದುಕು. ತನ್ನ ಸುತ್ತಲ ಸಮಾಜ ಪ್ರಾಣಿಪಕ್ಷಿಗಳು ಹಾಗೂ ನಿಸರ್ಗದಲ್ಲಿಯೇ ದೇವರನ್ನು ಕಾಣುವವರು ಕರ್ಮಯೋಗಿಗಳು. ಕರ್ಮಯೋಗಿಯು ತಾನು ಮಾಡುವ ಕರ್ಮದ ಫಲವನ್ನು ತನಗಾಗಿ ಬಯಸಬಾರದು, ಅದು ನಿಸ್ವಾರ್ಥ ಸೇವೆಯ ರೂಪ ಪಡೆದುಕೊಳ್ಳಬೇಕು. ಕರ್ಮಯೋಗದ ಸಾರವಿದು.

* * *

ಆಶ್ರಮವಾಸ ಹೇಗಿರಬೇಕು ಎಂದು ವಿವರಿಸುತ್ತ ವಿನೋಬಾ ಕಾಂಚನಮುಕ್ತಿ ಹಾಗೂ ಋಷಿಖೇತಿ ಎಂಬೆರಡು ಪರಿಕಲ್ಪನೆಗಳನ್ನು ಮಂಡಿಸುತ್ತಾರೆ. ಕಾಂಚನವೆಂದರೆ ಹಣ. ಆಶ್ರಮವಾಸಿಗಳು ಸಂಪೂರ್ಣವಾಗಿ ಹಣದಿಂದ ಮುಕ್ತವಾದ ಬದುಕನ್ನು ಬದುಕಬೇಕು ಎಂದು ತಾಕೀತು ಮಾಡುತ್ತಾರೆ ಅವರು. ಇನ್ನು ಋಷಿ ಖೇತಿ; ಖೇತಿಯೆಂದರೆ ಬೇಸಾಯ, ಋಷಿ ಖೇತಿಯೆಂದರೆ ಋಷಿಗಳ ಮಾಡುವ ಬೇಸಾಯ ಪದ್ಧತಿ ಎಂದರ್ಥ. ಅಂದರೆ ನಿನ್ನ ಆಹಾರವನ್ನು ನಿನ್ನದೇ ಶ್ರಮದಿಂದ ನೀನೇ ಬೆಳೆದುಕೋ ಎಂದು ಆಶ್ರಮವಾಸಿಗಳಿಗೆ ತಾಕೀತು ಮಾಡುತ್ತಾರೆ ವಿನೋಬಾ. ನೇಗಿಲಿಗೆ ಪಶುಗಳನ್ನು ಹೂಡುವುದನ್ನು ಸಹ ಅವರು ವಿರೋಧಿಸುತ್ತಾರೆ. ಇನ್ನು ರಾಸಾಯನಿಕ ಗೊಬ್ಬರಗಳ ಬಳಕೆ ದೂರವೇ ಉಳಿಯಿತು. ಜಪಾನಿನ ಸಂತ ಫುಕೋವೋಕಾ ಪ್ರತಿಪಾದಿಸುವ ಸಹಜ ಕೃಷಿ ಪದ್ಧತಿಯು ವಿನೋಬಾ ಹೇಳುವ ಋಷಿಖೇತಿಗೆ ಹತ್ತಿರವಾಗಿದೆ ಎನ್ನಬಹುದು.

* * *

ಭಕ್ತಿ ಚಳುವಳಿಯು ಮೂಲತಃ ಕರ್ಮಯೋಗಿಗಳ ಚಳುವಳಿಯಾಗಿತ್ತು. ಭಕ್ತಿ ಚಳುವಳಿಯ ಅನೇಕ ಸಂತರು, ಕುಂಬಾರಿಕೆ, ಕಮ್ಮಾರಿಕೆ, ನೇಯ್ಗೆ, ಚಮ್ಮಾರಿಕೆ ಇತ್ಯಾದಿ ಕಾಯಕಗಳನ್ನು ನಡೆಸುತ್ತಲೇ ಧರ್ಮಮಾರ್ಗಿಗಳಾಗಿದ್ದರು. ವಿನೋಬಾ ಅವರ ಅಭಿಪ್ರಾಯದಲ್ಲಿ ಶ್ರೀಕೃಷ್ಣ ಭಕ್ತಿ ಪರಂಪರೆಯ ದೇವರು. ಹಾಗಾಗಿ ಆತನೇ ಕರ್ಮಯೋಗಕ್ಕೆ ಪ್ರತೀಕವಿದ್ದಂತೆ. ಕುರುಕ್ಷೇತ್ರದ ಪ್ರತಿದಿನದ ಯುದ್ಧ ಕೊನೆಗೊಂಡ ನಂತರ, ಅರ್ಜುನನಿಗೆ ಸಾರಥಿಯಾಗಿದ್ದ ಶ್ರೀಕೃಷ್ಣ ರಥದ ಕುದುರೆಗಳ ಆರೈಕೆ ಮಾಡುತ್ತಿದ್ದನಂತೆ. ಕಡಿವಾಣವನ್ನು ತೆಗೆದು, ಅವುಗಳ ಮೈಯುಜ್ಜಿ, ಅವುಗಳಿಗೆ ಮೇವುಣ್ಣಿಸಿ, ನೀರು ಕುಡಿಸುತ್ತಿದ್ದನಂತೆ. ರಾಜಸೂಯ ಯಾಗ ನಡೆದಿದ್ದಾಗ ಶ್ರೀ ಕೃಷ್ಣ ಉಂಡವರ ಎಲೆ ಬಳಿದು ಸೇವೆ ನಡೆಸುತ್ತಿದ್ದನಂತೆ.

*

# ಸಮಾನತೆಯ ಪರಿಕಲ್ಪನೆ: ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾ ವಿಚಾರಗಳು

ಮೂಲ ಇಂಗ್ಲಿಷ್: ದಿವ್ಯಾಂಶು ಪಟೇಲ
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ



**ಭಾ**ರತದಲ್ಲಿ ಸಮಾನತೆಯ ಪರಿಕಲ್ಪನೆಯನ್ನು ಕೇಂದ್ರವಾಗಿರಿಸಿಕೊಂಡ ಹಲವಾರು ಚರ್ಚೆಗಳು ನಿರಂತರವಾಗಿ ನಡೆಯುತ್ತಲಿವೆ. ಅವು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಮಹಾನ್ ಚಿಂತಕರ ಗಮನ ಸೆಳೆದಿವೆ. ಈ ಚರ್ಚೆಯ ಯಾವುದೇ ಆಯಾಮವನ್ನು ಮುನ್ನೆಲೆಗೆ ತರುವ ಪ್ರಯತ್ನ ಭಾರತೀಯ ಸಮಾಜಕ್ಕೆ ಯಾವತ್ತೂ ಕಿರಿಕಿರಿ ಉಂಟು ಮಾಡಿದೆ, ನಿದ್ರೆಗೆಡಿಸಿದೆ. ಅದರಲ್ಲೂ ಆನಾದಿಯಿದಿಂದಲೇ ಪಾರಂಪರಿಕವಾಗಿ ಅಧಿಕಾರ ಅನುಭವಿಸುತ್ತ ಬಂದಿರುವ ಹಾಗೂ ಅಸಮಾನತೆಯ ಸಿದ್ಧಾಂತಗಳನ್ನು ಎತ್ತಿಹಿಡಿದು ತಮ್ಮ ಸ್ಥಾನವನ್ನು ನ್ಯಾಯಸಮ್ಮತಗೊಳಿಸುತ್ತ ಬಂದಿರುವವರ ಮನೋಭಾವದಲ್ಲಿ ಇದು ಅಪಾರ ಅಭದ್ರತೆ ಮೂಡಿಸಿದೆ.

ಸಮಾನತೆ ಕುರಿತ ಚರ್ಚೆಯನ್ನು ಎತ್ತಿದಾಗಲೆಲ್ಲ ಅಥವಾ ಅಭಿಪ್ರಾಯ ವ್ಯಕ್ತಪಡಿಸಿದಾಗೆಲ್ಲ ಅದನ್ನು ಅನಿವಾರ್ಯವಾಗಿ ಜಾತಿ ಆಧರಿತ ಅಸಮಾನತೆಗೆ ತಳುಕು ಹಾಕಲಾಗುತ್ತದೆ. ಎಷ್ಟೋ ಸಲ ಈ ತರಹದ ಸಾಮಾಜಿಕ ಅಸಮತೋಲನ ಸಮಾಜದಲ್ಲಿನ ಎಲ್ಲ ಬಗೆಯ ಅಸಮಾನತೆಯ ಮೂಲವಾಗಿದೆ ಎಂದು ಜನ ತೀರ್ಪು ನೀಡುತ್ತಾರೆ. ಭಾರತದ ಸಂದರ್ಭದಲ್ಲಿ ಜಾತಿ ಒಂದು ಮಹತ್ವದ ಸಂಕೇತವಾಗಿದ್ದರೂ ಇದು ತಪ್ಪು ವಿವರಣೆಯಾಗಿದೆ. ಕಾರಣ ಅದು ಒಂದೇ ಆಯಾಮವನ್ನು ಗಣನೆಗೆ ತೆಗೆದುಕೊಳ್ಳುತ್ತದೆ, ಹಾಗಾಗಿ ಸಾಮಾಜಿಕ ಭಿನ್ನತೆಗಳಿಗೆ ಕಾರಣವಾಗಿರುವ ಇತರ ಅಂಶಗಳನ್ನು ಅಲಕ್ಷಿಸುತ್ತದೆ ಎನ್ನುವುದು. ಭಾರತೀಯ ಸಮಾಜದ ಸಂರಚನೆಯನ್ನು ತಿಳಿದುಕೊಳ್ಳಬೇಕಾದರೆ ಹಾಗೂ ಶ್ರೇಣೀಕರಣ–ಲಂಬ ಮತ್ತು ಸಮಾನಾಂತರ ಶ್ರೇಣೀಕರಗಳೆರಡರ–ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅಂತರ್‌ಶಾಸ್ತ್ರೀಯ ವಿಧಾನದ ಮೂಲಕ ಸಮಸ್ಯೆಯನ್ನು ವಿಶ್ಲೇಷಿಸಬೇಕಾಗುತ್ತದೆ.

### ೧. ಸಮಾನತೆಯ ಪರಿಕಲ್ಪನೆ

ಭಾರತದಲ್ಲಿ ಸಮಾನತೆಯ ವಿಚಾರ ಹಾಗೂ ಅಸಮಾನತೆಯನ್ನು ತಗ್ಗಿಸಲು ತೆಗೆದುಕೊಳ್ಳಲಾದ ಕ್ರಮಗಳು ಸಮಕಾಲೀನ ಜಗತ್ತಿನಲ್ಲಿ ಸ್ಪಷ್ಟವಾಗಿ ಪ್ರಕಟಗೊಂಡಿವೆ. ಅಷ್ಟೇ ಅಲ್ಲ ಹಲವು ಬಗೆಯ ಜಾನಪದೀಯ ಹಾಗೂ ಪೌರಾಣಿಕ ವ್ಯಕ್ತಿತ್ವಗಳು ಮತ್ತು ಪ್ರಸಂಗಗಳು ಇವುಗಳ ಅನಿವಾರ್ಯತೆಯನ್ನು ರುಜುವಾತುಪಡಿಸುತ್ತವೆ. ಅದಕ್ಕೆ ನಿದರ್ಶನಗಳು ಬಿಲ್ಲು ವಿದ್ಯೆ ಒಂದು ವಿಶಿಷ್ಟ ಜಾತಿಯ ಹಕ್ಕು ಎನ್ನುವ ಆಧಾರದಲ್ಲಿ ತನಗೆ 'ಅನುಮತಿ' ನಿರಾಕರಿಸಿದಾಗ್ಯೂ ಬಿಲ್ಲು ವಿದ್ಯೆಯನ್ನು ಕಲಿಯುವ ಏಕಲವ್ಯನ ಛಲ ಹಾಗೂ ಸತತ ಪರಿಶ್ರಮದಿಂದ ಹಿಡಿದು, ಸಮಾನತೆಯನ್ನು ಮೂಲಭೂತ ಹಕ್ಕನ್ನಾಗಿ ರೂಪಿಸಿದ ಸಂವಿಧಾನದ ೧೪–೧೮ನೆಯ ಪರಿಚ್ಛೇದಗಳಂಥ ಸಾಂವಿಧಾನಿಕ ಮಾರ್ಗೋಪಾಯಗಳ ಮೂಲಕ ಸಾಮಾಜಿಕ ಸಮಾನತೆ ತರುವುದಕ್ಕಾಗಿ ಕೈಗೊಂಡ ಹಲವು ಬಗೆಯ ಉಪಕ್ರಮಗಳವರೆಗೆ ಹರಡಿಕೊಂಡಿದೆ.

ಸಮಾಜದಲ್ಲಿ ಸಮಾನತೆ ತರಲು ಮಾಡಿದ ಪ್ರಯತ್ನಗಳಿಗೆ ಸುದೀರ್ಘ ಇತಿಹಾಸವಿದ್ದರೂ, ಇಲ್ಲಿಯವರೆಗೂ ಭಾರತೀಯ ಸಾಮಾಜಿಕ ಸಂರಚನೆಯು ಆಳವಾಗಿ ಬೇರೂರಿದ ಹಾಗೂ ಕಟ್ಟುನಿಟ್ಟಾದ ಶ್ರೇಣೀಕೃತ ವ್ಯವಸ್ಥೆಯ ಅಡಿಯಾಳಾಗಿದೆ. ಬಲವಾದ ಪ್ರಯತ್ನಗಳ ನಂತರವೂ ಈ ವ್ಯವಸ್ಥೆಯಲ್ಲಿ ಬದಲಾವಣೆಗಳಾದದ್ದು ಅಷ್ಟಕ್ಕಷ್ಟೇ. ಅದು ಇನ್ನೂ ತನಕ ವರ್ಣ ವ್ಯವಸ್ಥೆ ಹುಟ್ಟು ಹಾಕಿದ ವಿಭಜನೆಗಳನ್ನೇ ಅವಲಂಬಿಸಿದೆ. ವಿಶಿಷ್ಟ ಜಾತಿಗಳಾಗಿ ಸಮುದಾಯಗಳ ಪ್ರತ್ಯೇಕೀಕರಣದ ತರ್ಕ ಇನ್ನೂ ಪ್ರಭಾವಶಾಲಿಯಾಗಿಯೇ ಇದೆ, ಸಾಕಷ್ಟು ಬಲಶಾಲಿಯೂ ಆಗಿದೆ. ವರ್ಣ/ಜಾತಿ ವಿಭಜನೆಗಳ ಆಧಾರದಲ್ಲಿ ನಿರ್ಮಾಣಗೊಂಡ ಈ ಶ್ರೇಣಿ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕುರಿತಂತೆ ಸಮಾಜಶಾಸ್ತ್ರಜ್ಞರು ಆಗಾಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಲಿದ್ದಾರೆ. ಸಾಮಾಜಿಕ ಶ್ರೇಣೀಕರಣಕ್ಕೆ ಜಾತಿಯೇ ಮೂಲ ಕಾರಣವೆನ್ನುವುದನ್ನು ಒತ್ತಿ ಹೇಳುತ್ತಲಿದ್ದಾರೆ. ಕರ್ನಾಟಕದ ಲಿಂಗಾಯತ ಪಂಗಡ/ಜಾತಿ ಹಾಗೂ ಪಂಜಾಬ, ಹರ್ಯಾಣಾ ಮತ್ತು ಪಶ್ಚಿಮ ಉತ್ತರ ಪ್ರದೇಶ (*ದೀಪಂಕರ ಗುಪ್ತ*) ದಂತಹ ನಿದರ್ಶನಗಳ ಹೊರತುಪಡಿಸಿದಂತೆ ಸಾಂಪ್ರದಾಯಿಕ ಸಾಮಾಜಿಕ ಸೀಮೆಗಳು ಹಾಗೂ ವಿಭಜನೆಗಳನ್ನು ಕೆಣಕಿದ್ದನ್ನು ಕೆಲವಷ್ಟೇ ಉದಾಹರಣೆಗಳು ಋಜುವಾತುಪಡಿಸುತ್ತವೆ.

ಅಸಮಾನತೆ ಹಾಗೂ ಭೇದಭಾವವು ಜಾತಿ ಆಧರಿತ ಶ್ರೇಣೀಕೃತ ವ್ಯವಸ್ಥೆಯ ತಿರುಳಾಗಿರುತ್ತದೆ. ಗತ ಕಾಲದಲ್ಲಿ ಸಮಾಜದಲ್ಲಿನ ಜಾತಿಗಳ ವ್ಯವಸ್ಥೆ ಅಥವಾ ಶ್ರೇಣಿಯನ್ನು ಹುಟ್ಟು ಹಾಕಿ ನ್ಯಾಯಸಮ್ಮತಗೊಳಿಸುವುದಕ್ಕೆ ಮನುಷ್ಯ ದೇಹವನ್ನು ಹೇಗೆ ಆಧಾರವಾಗಿಸಿಕೊಳ್ಳಲಾಗುತ್ತಿತ್ತೆನ್ನುವುದು ಮುಖ್ಯವಾಗಿತ್ತು. ಇಂತಹದೇ ವಾದವನ್ನು ಜಾತಿಗಳ ಪ್ರತ್ಯೇಕೀಕರಣವನ್ನು ಪ್ರಮಾಣೀಕರಿಸುವುದಕ್ಕೆ ಮಂಡಿಸಲಾಗಿದೆ.(*ಶ್ರೀನಿವಾಸ –೨೦೦೧*) ಅವರು ಜಾತಿ ಹಾಗೂ ವರ್ಣಗಳ ನಡುವಣ ಅರ್ಥಭೇದವನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ಜಾತಿಯನ್ನು ಸ್ಥಳೀಯ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಂಶಗಳಿಗೆ ತಳುಕು ಹಾಕಲಾಗಿದ್ದು ಅದು ಈ ಅಂಶಗಳನ್ನವಲಂಬಿಸಿದೆ ಎನ್ನಲಾಗಿದೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಪಾರಂಪರಿಕವಾಗಿ ಹಿಂದುಳಿದವು ಎಂದು ಪರಿಗಣಿಸಲ್ಪಟ್ಟ ಜಾತಿಗಳು ಪ್ರಭಾವಶಾಲಿ ಜಾತಿಗಳನ್ನು ಗಮನದಲ್ಲಿರಿಸಿಕೊಂಡು ಅವುಗಳ ಅನುಕರಣೆಗೆ ತೊಡಗುತ್ತವೆ. ಲಿಂಗಾಯತ, ರೆಡ್ಡಿ, ಜಾಟ, ಯಾದವ ಹಾಗೂ ಕುರ್ಮಿ ಪ್ರಭಾವಶಾಲಿ ಜಾತಿಗಳಿಗೆ ನಿದರ್ಶನಗಳಾಗಿವೆ. ಅವು ಪಾರಂಪರಿಕ ಕಟ್ಟುನಿಟ್ಟುಳಿಂದ ಹೊರ ಬಂದವು; ಮೇಲ್ಕಾಣಿಸಿದ ಅಂಶಗಳ ಆಧಾರದಲ್ಲಿ ತಾವು ಚಲಾಯಿಸಬಹುದಾದ ಅಧಿಕಾರವನ್ನು ಅಪಾರವಾಗಿ ಅವಲಂಬಿಸಿದ ಬೇರೆಯೇ ಆದ ಜೀವನ ಶೈಲಿಯನ್ನು ಅಂಗೀಕರಿಸಿದವು.

ವರ್ಣ ಹಾಗೂ ಜಾತಿಗಳ ಪರಿಕಲ್ಪನೆ ಹಾಗೂ ವ್ಯತ್ಯಾಸಕ್ಕೆ ಒತ್ತು ಕೊಡುವುದರ ಜೊತೆಗೇ ಭಾರತೀಯ ಸಮಾಜದಲ್ಲಿ ಕಂಡು ಬರುವ ಶ್ರೇಣೀಕೃತ ವ್ಯವಸ್ಥೆಯ ಸ್ವರೂಪ ಹಾಗೂ ಸ್ವಭಾವವನ್ನು ವಿಶ್ಲೇಷಿಸುವುದೂ ಅವಶ್ಯವಾಗುತ್ತದೆ. ಅದು ಪ್ರತ್ಯಕ್ಷವಾಗಿ ಯೂರೋಪಿಯನ್ ದೇಶಗಳಿಗಿಂತ ಭಿನ್ನವಾಗಿರುವಂತಹುದು. ಅದಕ್ಕೆ ಮುಖ್ಯ ಕಾರಣವೆಂದರೆ ಪಶ್ಚಿಮದಲ್ಲಿ ಆ ವ್ಯವಸ್ಥೆ ವರ್ಗವನ್ನಾಧರಿಸಿದರೆ ಭಾರತದಲ್ಲಿ ಅದು ವರ್ಣ ಹಾಗೂ ಜಾತಿಗಳಂತಹ ಅಂಶಗಳನ್ನಾಧರಿಸಿರುತ್ತದೆ. ಜಾತಿ ಆಧರಿತ ಪ್ರತ್ಯೇಕತೆಯು ಕೆಲವರಿಗೆ ವಿಶೇಷಾಧಿಕಾರಗಳನ್ನು ಒದಗಿಸುತ್ತದೆ ಹಾಗೂ ಅಪಾರ ಜನ ಸಮುದಾಯದ ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾಡುತ್ತದೆ.

ಅಷ್ಟೇ ಅಲ್ಲ, ಹುಟ್ಟನ್ನು ಸಾಮಾಜಿಕ ಅಸಮಾನತೆ, ಪಕ್ಷಪಾತ ಹಾಗೂ ಪೂರ್ವಗ್ರಹಗಳ ಆಧಾರವನ್ನಾಗಿ ಸ್ವಿಕರಿಸುವುದು ಭಾರತದಲ್ಲಿನ ಸಾಮಾಜಿಕ ಶ್ರೇಣೀಕರಣವನ್ನು ಬೇರೆ ದೇಶಗಳಲ್ಲಿನ ಸಾಮಾಜಿಕ ಶ್ರೇಣಿಕರಣಕ್ಕಿಂತ ಭಿನ್ನವಾಗಿಸುವ ಅನನ್ಯ ಲಕ್ಷಣವಾಗಿದೆ. ಆಚರಣೆಗಳನ್ನಾಧರಿಸಿದ ಶ್ರೇಣೀಕರಣ ವೃತ್ತಿಯನ್ನಾಧರಿಸಿದ್ದ ಸಮಾಜವನ್ನು ಸಂಪೂರ್ಣವಾಗಿ ನಾಶ ಮಾಡಿತು. ಅದು ಆ ಸಮಾಜದ ವಿನ್ಯಾಸವನ್ನು ಹುಟ್ಟು ಮತ್ತು ಜಾತಿಯಂತಹ ಸಂಗತಿಗಳನ್ನಾಧರಿಸಿದ 'ವ್ಯವಸ್ಥೆಯನ್ನಾಗಿಸಿತು.

ಕಾಲ ಗತಿಸಿದಂತೆಲ್ಲ ಈ ಎಲ್ಲೆಗಳು ಹೆಚ್ಚು ಹೆಚ್ಚು ಕಟ್ಟುನಿಟ್ಟುಗಳಿಗೆ ಒಳಗಾದವು. ಆದರೆ ಅದೇ ವೇಳೆಗೆ ಗಮನಾರ್ಹವಾಗಿ ಪ್ರಭಾವಿಸಬಲ್ಲ ಸನ್ನಿವೇಶಗಳೂ ಉಂಟಾದವು. ಅವುಗಳಲ್ಲಿ ತೀವ್ರ ಕೈಗಾರಿಕೀರಣ ಹೊಮ್ಮಿಸಿದ ಶಕ್ತಿ, ಸ್ವಾತಂತ್ರ್ಯ ಹೋರಾಟದ ಸನ್ನಿವೇಶ, ಪ್ರಜಾ ಸತ್ತಾತ್ಮಕ ವ್ಯವಸ್ಥೆಯ ಕನಸು ಮುಂತಾದ ಅಂಶಗಳು ಒಳಗೊಂಡಿದ್ದವು. ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಭಾರತೀಯ ಸಮಾಜದ ಶ್ರೇಣೀಕರಣವನ್ನು ವಿಶ್ಲೇಷಿಸಲೆತ್ನಿಸುವುದರಿಂದ ನೈಜ ಸನ್ನಿವೇಶದ ತಪ್ಪು ಚಿತ್ರಣ ದೊರೆಯುತ್ತದೆ.ಸಾಮಾಜಿಕ ಅಸಮಾನತೆ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದವರಲ್ಲಿ ಹೆಚ್ಚಾಗಿ ಕಬೀರ, ನಾನಕ ಹಾಗೂ ರಾಮದೇವರಂತಹ ಸಂತರನ್ನು ಹೆಸರಿಸಲಾಗುತ್ತದೆ. ಅದೇ ರೀತಿ ಮಧ್ಯೆ ಯುಗದ ಬೌದ್ಧ ಚಿಂತಕರನ್ನು ಈ ವಲಯದಲ್ಲಿ ಸೇರಿಸಲಾಗುತ್ತದೆ. ವಸಾಹತುಶಾಹಿ ಆಡಳಿತದ ಆರಂಭದಲ್ಲಿ ಜ್ಯೋತಿಬಾ ಘುಲೆ, ಸಾವಿತ್ರಿ ಘುಲೆ, ಪೆರಿಯಾರ್ ಹಾಗೂ ಶಾಹು ಮಹಾರಾಜರ ಕೊಡುಗೆ ಮತ್ತು ಪ್ರಯತ್ನಗಳು ಅನನ್ಯವಾಗಿದ್ದು ಅವುಗಳನ್ನು ಕಡೆಗಣಿಸಲಾಗದು

ಆದರೆ ಭಾರತದ ಸಂದರ್ಭದಲ್ಲಿ ಸಮಾಜದಲ್ಲಿ ಸಮಾನತೆಯನ್ನು ಸಾಕಾರಗೊಳಿಸಲು ಯೋಜನಾಬದ್ಧ ಪ್ರಯತ್ನ ಮಾಡುವ ನಿಟ್ಟಿನಲ್ಲಿ, ಅದನ್ನು ಜನರಲ್ಲಿ ಜಾಗೃತಿ ಮತ್ತು ಅರಿವನ್ನು ಮೂಡಿಸಲು ಅವಶ್ಯವಾದ ರಾಷ್ಟ್ರೀಯ ಕಾಳಜಿಯನ್ನಾಗಿ ಮಾಡುವಲ್ಲಿ ಗಾಂಧೀ ಮುಂಚೂಣಿಯಲ್ಲಿರುತ್ತಾರೆ ಎಂದು ನಾನು ಬಲವಾಗಿ ನಂಬುತ್ತೇನೆ. ತಮ್ಮ ಇತರ ಚಿಂತನೆಗಳಂತೆಯೆ ತಮ್ಮ ತಾತ್ವಿಕತೆಯಲ್ಲಿ ಅವರು ಸಮಾನತೆಯ ಪರಿಕಲ್ಪನೆಯನ್ನು ನಿರಂತರವಾಗಿ ಅವಲೋಕಿಸಿದ್ದಾರೆ ಹಾಗೂ ಪರಿಷ್ಕರಿಸಿದ್ದಾರೆ. ಸಮಾನತೆಗೆ ಸಂಬಂಧಿಸಿದ ಅವರ ವಿಚಾರಗಳಿಗೆ ದಕ್ಷಿಣ ಆಫ್ರಿಕಾದಲ್ಲಿ ಅವರ ವಾಸ್ತವ್ಯದ ಕಾಲಕ್ಕೆ ಬುನಾದಿ ಹಾಕಲಾಗಿತ್ತು. ದಕ್ಷಿಣ ಆಫ್ರಿಕಾದಲ್ಲಿ ಆಚರಣೆಯಲ್ಲಿದ್ದ ಜನಾಂಗೀಯ ಭೇದಭಾವದ ವಿರುದ್ಧ ಯಶಸ್ವಿ ಹೋರಾಟದ ನಂತರ ಅವರು ಭಾರತಕ್ಕೆ ಮರಳಿದ ಮೇಲೆ ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಟ ಆರಂಭಿಸಿದರು. ಜೊತೆಗೆ, ಜಾತಿ ಆಧರಿತ ಭೇದಭಾವದ ನಿರ್ಮೂಲನೆಗೆ ಒತ್ತು ಕೊಟ್ಟರು. ಭಾರತದ ವಿಭಿನ್ನ ಪ್ರದೇಶಗಳಿಗೆ ಭೇಟಿಕೊಡತೊಡಗಿದ ಅವರಿಗೆ ಜಾತಿ ಆಧಾರಿತ ಪ್ರತ್ಯೇಕೀಕರಣ ಭಾರತೀಯ ಸಮಾಜದಲ್ಲಿ ಅಭೇದ್ಯ ಕೋಟೆ ನಿರ್ಮಿಸಿದೆ ಎನ್ನಿಸಿತು. ಹೀಗೆ ಜನಾಂಗವಾದದ ವಿರುದ್ಧ ನಡೆಸಿದ್ದ ಪ್ರಯತ್ನಗಳನ್ನು ಅವರು ಭಾರತದಲ್ಲಿ ಈ ಬಗೆಯ ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಲು ಪ್ರಯೋಗಿಸಿದರು.

ವಿಭಿನ್ನ ಸನ್ನಿವೇಶಗಳಲ್ಲಿ ಅವರಿಗೆ ಆದ ಮಹತ್ವಪೂರ್ಣ ಅನುಭವಗಳ ಹಿನ್ನೆಲೆಯಲ್ಲಿ ಗಾಂಧಿಯ ಚಿಂತನೆಯ ಬೆಳವಣಿಯನ್ನು ಪರಿಶೀಲಿಸುವುದು ಅರ್ಥಪೂರ್ಣವಾಗುತ್ತದೆ.ಸಾಕಷ್ಟು ಸುಪ್ತವಾಗಿಯಾದರೂ ಅವರು ತಮಗೆ ಆದ ಅನುಭವಗಳ ಆಧಾರದಲ್ಲಿ ತಮ್ಮ ಚಿಂತನೆಗಳನ್ನು ಪರಿಶೀಲಿಸುವ ಹಾಗೂ ಪರಿಷ್ಕರಿಸುವ ಕೆಲಸಕ್ಕೆ ಕೈ ಹಾಕಿದರು. ಆ ಕಾರಣಕ್ಕಾಗಿಯೇ ಅವರು ದಕ್ಷಿಣ ಆಫ್ರಿಕಾದಿಂದ ಮರಳಿದ ನಂತರದ, ನಾಗರಿಕ ಅವಿಧೇಯತೆ ಆಂದೋಲನದ ಅವಧಿಯಲಿನ ಹಾಗೂ ಭಾರತ ಅನಂತರ ಸ್ವಾತಂತ್ರ್ಯ ಗಳಿಸುವವರೆಗಿನಗೆ ಗ್ರಂಥಗಳಲ್ಲಿ ನಾವು ಮುಖಾಮುಖಿಯಾಗುವ ಗಾಂಧಿಯ ವ್ಯಕ್ತಿತ್ವ ಗಮನಾರ್ಹವಾಗಿ ಬದಲಾಗುತ್ತಾ ಹೋಗುತ್ತದೆ. ಅವರ ಚಿಂತನೆ ಹಾಗೂ ಕಾರ್ಯವೈಖರಿಯಲ್ಲಿ ಕಂಡು ಬರುವ ದೃಷ್ಟಿಕೋನದಲ್ಲಿನ ಬದಲಾವಣೆ ಸಮಾಜ ಕಲ್ಯಾಣದತ್ತ ತಿರುಗಿದ ಅವರ ಪ್ರಯತ್ನಗಳಲ್ಲೂ ಸ್ಪಷ್ಟವಾಗುತ್ತದೆ.

ಗಾಂಧಿಯ ವಿಚಾರಗಳು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿನ ಪರ್ಯಾಲೋಚನೆಗಳಾಗಿದ್ದರೂ, ಅವರ ವಿಚಾರಗಳು ನವೀಕರಣಗೊಳ್ಳುವುದನ್ನು ಅಥವಾ ಅವರು ಮುಖಾಮುಖಿಯಾದ ಸಾಮಾಜಿಕ ರಾಜಕೀಯ ಬದಲಾವಣೆಗಳಿಂದ ಅವರ ವಿಚಾರಗಳು ಪ್ರಭಾವಿತಗೊಳ್ಳುವುದನ್ನು ನಾವು ಗಮನಿಸಬೇಕಾಗುತ್ತದೆ. ರಾಜಕೀಯ ಹೋರಾಟಗಳು ಹಾಗೂ ಸಮಾಜ ಕಲ್ಯಾಣಕ್ಕಾಗಿ ರೂಪಿಸುವ ಕಾರ್ಯಕ್ರಮಗಳಿಗೆ ಯಾವತ್ತೂ ಅವರ ವಿಚಾರಗಳು ಏಕೆ ಪ್ರಸ್ತುತ ಹಾಗೂ ಮಹತ್ವಪೂರ್ಣವಾಗುತ್ತವೆ ಎನ್ನುವುದಕ್ಕೆ ಇದೊಂದು ಅವಶ್ಯವಾದ ಕಾರಣವಾಗುತ್ತದೆ. ಸಮಾನತೆಯನ್ನು ಸ್ಥಾಪಿಸದೆ ಸ್ವತಂತ್ರ ದೇಶವನ್ನು ಸಾಧಿಸುವ ಹೋರಾಟವನ್ನು ಮುಂದುವರಿಸಲಾಗದು ಎನ್ನುವ ವಿಚಾರದಲ್ಲಿ ಅವರಿಗೆ ಬಲವಾದ ನಂಬಿಕೆ ಇತ್ತು. ಕಾರಣ, ಸಾಮಾಜಿಕ ಪ್ರತ್ಯೇಕೀಕರಣವು ಒಂದು ಸಾಮಾನ್ಯ ಉದ್ದೇಶಕ್ಕಾಗಿ ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವ ಗುರಿಯ ಸಾಧನೆಗೆ ಅಡ್ಡಿಯಾಗಬಹುದಿತ್ತು ಎನ್ನುವುದು. ಅಸ್ಪೃಶ್ಯರ ಹಕ್ಕುಗಳ ಸಮಸ್ಯೆ ಅವರ ಮನಸ್ಸನ್ನು ಕೊರೆಯುತ್ತಿತ್ತು. ಹಾಗಾಗಿ ೧೯೨೦ರಿಂದಲೇ ಈ ಸೂಕ್ಷ್ಮ ವಿಷಯವಾಗಿ ಜನಾಭಿಪ್ರಾಯವನ್ನು ರೂಪಿಸಲೆತ್ನಿಸಿದರು. ಅಸ್ಪೃಶ್ಯತೆಯ ಸಾಮಾಜಿಕ ಪಿಡುಗು ಗಾಂಧಿಯ ಆಳವಾದ ಕಾಳಜಿ ಹಾಗೂ ಕೊರಗಿಗೆ ಕಾರಣವಾಗಿತ್ತು. ಅವರು ಈ ಕಾಳಜಿಯನ್ನು ರಾಜಕೀಯ ಕ್ಷೇತ್ರದ ತಿರುಳನ್ನಾಗಿ ಮಾಡುವುದರಲ್ಲಿ ಕಾರಣಕರ್ತರಾದರು.

ಗಾಂಧಿಯ ಸಮಾನತೆಯ ಪರಿಕಲ್ಪನೆಯು ಮಂದಿರ ಪ್ರವೇಶದಂತಹ ನಿರ್ದಿಷ್ಟ ಧಾರ್ಮಿಕ ಹಕ್ಕುಗಳ ಮನ್ನಣೆ ಹಾಗೂ ಕೊಡುಗೆಗೆ ಸೀಮಿತವಾಗಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಆ ಹಕ್ಕುಗಳು ವ್ಯಕ್ತಿಗತವಾಗಿ ಜನರ ಅಥವಾ ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟವರ ದೈನಂದಿನ ಬದುಕಿನಲ್ಲಿ ಸಮಾನತೆಯನ್ನು ತರುವ ಮೂಲಕ ಬದಲಾವಣೆ ಸಾಧಿಸುವ ಉದ್ದೇಶ ಹೊಂದಿದ್ದವು. ಅವರು ಸಮಾನತೆಯ ಪರಿಕಲ್ಪನೆಯನ್ನು ಗ್ರಾಮಗಳಿಗೆ ತಳುಕು ಹಾಕಿದರು. ತಮ್ಮ ಆದರ್ಶ ಗ್ರಾಮದ ಪರಿಕಲ್ಪನೆಯನ್ನು ರೂಪಿಸುವಲ್ಲಿ ಸಹ, ಅವರು ಸಮಾಜದ ಎಲ್ಲ ಸದಸ್ಯರಿಗೆ ಆರೋಗ್ಯಕರವಾದ ಹಾಗೂ ಪೂರಕವಾದ ಪರಿಸರವನ್ನು ನಿರ್ಮಿಸುವುದಕ್ಕಾಗಿ ಗ್ರಾಮಗಳಲ್ಲಿನ ಪಾರಂಪರಿಕ ಗಡಿಗಳನ್ನು ನಿರ್ಮೂಲನೆ ಮಾಡುವುದಕ್ಕೆ ಒತ್ತು ಕೊಟ್ಟರು. ಗಾಂಧಿ ಯಾವತ್ತೂ ಅಸ್ಪೃಶ್ಯತೆಯನ್ನು ಧಾರ್ಮಿಕ ಸಮಸ್ಯೆಗಿಂತ ಹೆಚ್ಚಾಗಿ ಸಾಮಾಜಿಕ ಸಮಸ್ಯೆಯೆಂದು ಪರಿಗಣಿಸಿದ್ದರು. ಹಾಗಾಗಿ ಅದಕ್ಕೆ ಸಾಮಾಜಿಕ ಪರಿಹಾರದ ಮಹತ್ವಕ್ಕೆ ಅವರು ಒತ್ತು ನೀಡಿ ಆ ಮೂಲಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮುಂದುವರಿದರು. ತಮ್ಮ ಪ್ರಾರಂಭಿಕ ದಿನಗಳಲ್ಲಿ, ಅವರು ವರ್ಣವ್ಯವಸ್ಥೆ ಹಿಂದೂ ಸಮಾಜದ ಅನಿವಾರ್ಯ ಅಂಗವೆನ್ನುವ ಅಭಿಪ್ರಾಯವುಳ್ಳವರಾಗಿದ್ದರು. ಆದರೆ ನಂತರ, ೧೬ ನವೆಂಬರ್ ೧೯೩೨ರ 'ಹರಿಜನ'ದ ಸಂಚಿಕೆಯಿಂದ ಋಜುವಾತಾಗಿರುವಂತೆ ಸಮಾಜದಲ್ಲಿ ಸಮಾನತೆ ಸಾಧಿಸಬೇಕೆಂದರೆ ತಾರತಮ್ಯವನ್ನು ತಗ್ಗಿಸುತ್ತ ಕೊನೆಗೊಮ್ಮೆ ನಿರ್ಮೂಲನೆ ಮಾಡಲೇಬೇಕು ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಅದು ಗಾಂಧಿಯ ಚಿಂತನೆಯಲ್ಲಿ ನಮ್ಯತೆ ಹಾಗೂ ತಿದ್ದುಪಡಿಗೆ ಅವಕಾಶವಿರುವುದನ್ನು ಸೂಚಿಸುತ್ತದೆ. ಸಮಾನತೆಯ ತಮ್ಮ ಪರಿಕಲ್ಪನೆಯನ್ನು ಸಾಕಾರಗೊಳಿಸುವುದಕ್ಕಾಗಿ ಪಾರಂಪರಿಕ ಸಂರಚನೆಗಳ ವಿರುದ್ಧ ಬಂಡೇಳುವುದಕ್ಕಿಂತ ಗ್ರಾಮಾಭಿವೃದ್ಧಿ, ಖಾದಿ ಹಾಗೂ ಶಿಕ್ಷಣವನ್ನು ಸಮಾಜದಲ್ಲಿ ಪರಿವರ್ತನೆ ತರುವುದಕ್ಕಾಗಿ ಸಾಧನಗಳನ್ನಾಗಿ ಬಳಸಿಕೊಳ್ಳುವ ಸಾಧ್ಯತೆಗೆ ಗಾಂಧಿ ಒತ್ತು ಕೊಟ್ಟರು. ಅದು ಸಮಸ್ಯೆಯನ್ನು ಇನ್ನೂ ಚೆನ್ನಾಗಿ ಗ್ರಹಿಸಿಕೊಳ್ಳುವಲ್ಲಿ ಸಹಾಯಕವಾಯಿತು ಹಾಗೂ ಸಮಸ್ಯೆಯನ್ನು ಅಮೂಲಾಗ್ರವಾಗಿ ನಿರ್ಮೂಲನೆ ಮಾಡುವ ಕಾರ್ಯಕ್ರಮ ರೂಪಿಸುವಲ್ಲಿ ಸಹಹಕಾರಿಯಾಯಿತು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

## ಸಾಹಿತ್ಯ–ಸಂಸ್ಕೃತಿ–ಕಲೆ ಇತ್ಯಾದಿ

# ಹೇಳಿ, ನಿಜವಾಗ್ಲೂ ಇದು ತೆಂಗಾ?



ಕಲೆಯೊಂದಿಗೆ ಕಾಯಕ ಜೊತೆಗೂಡಿದರೆ ಅಲ್ಲೊಂದು ಮಿಂಚು ಸಂಚಾರ ಖಚಿತಟಿ. ಇನ್ನು ಅವೆರಡೂ ಹಾವಿನಂತೆ ಒಂದಾದರೆ ಸೊಬಗಿನ ಹೊಸ ಸೃಷ್ಟಿಯೇ ಅಲ್ಲಿ ಮೈತಳೆದು ಒಂದು ಸಾಂಸ್ಕೃತಿಕ ಕ್ರಾಂತಿಯನ್ನೇ ಮಾಡಬಲ್ಲದು ಎಂದು ನನಗೆ ಅನಿಸಿದ್ದು ಮೊನ್ನೆ ಗೆಳೆಯ ಗೌಸಿ ಮತ್ತು ಲೋಕಿಯ ಅರ್ಥವತ್ತಾದ ಆಲೋಚನೆಗಳು ಸೇರಿ ರೂಪು ಪಡೆದ ನಮ್ಮ ಸೀಮೆಯ ಕಲಾಕೃತಿಗಳು. ತೆಂಗಿನ ದಿವಾನ್, ತೆಂಗಿನ ಮಂಚ, ತೆಂಗಿನ painting frame, ಬೊಂಬಾಟ್ ಟೀಪಾಯ್! ನೋಡಿದವರೆಲ್ಲ ಊರಗಲ ಬಾಯ್ಕಿಸಿದು ಅಬ್ಬಾ! ಎಂದವರೇ, ರೇಟಿನಲ್ಲಿ ಅಜಗಜಾಂತರ. ಉಳ್ಳವರ ತೇಗವೆಲ್ಲಿ? ಬಡವರ ತೆಂಗೆಲ್ಲಿ?

ನಮ್ಮೂರಿನ ತೆಂಗು ತೇಗಕ್ಕೆ ಸೈಡೊಡೆದರೆ ಮುಂದೆ ನಡೆಯುವ ಕ್ಷಿಪ್ರ ಕ್ರಾಂತಿಯನ್ನು ಎಂತಹ ಅಬ್ಬೇಪಾರಿಯೂ ಊಹಿಸಬಹುದು. ದುಡ್ಡು ದಂಡಿಗಿಲ್ಲದವರ ಮನೆಯಲ್ಲೂ ತರಹೇವಾರಿ ಪೀಠೋಪಕರಣಗಳು ಮನೆ ತುಂಬ ಕೂತು, ಕನಸಿನಲ್ಲೂ ಊಹಿಸಬಹುದಾದ ಶ್ರೀಮಂತಿಕೆಯ ಸ್ಪರ್ಶ ನೀಡಬಹುದು.

ನಾವು ಜೊತೆಗೆ ನೀವು ಸಣ್ಣವರಾಗಿದ್ದಾಗ ತೋಟದಲ್ಲಿ ಸಸಿಯ ಟಮಟ್ಟೆ ಬಳಸಿ ಗುಡ್ಲಾಕಿದ್ದವಲ್ಲ. ಆ ತೆಂಗಿನ ಯಡಮಟ್ಟೆ, ದಿಮ್ಮಿ, ನಮಗೆಲ್ಲ ಹುಟ್ಟಿನಿಂದಲೇ ಬಂದಿದ್ದ ಮನೆ ಕಟ್ಟುವ ಕನಸಿಗೆ ಆಗಲೇ ಒಂದು ರೂಪವನ್ನು ಕೊಟ್ಟಿತ್ತು. ತೋಟದಲ್ಲಿ ಕೂರುವಾಗ ಯಡಮಟ್ಟೆಯನ್ನೇ ಕುರ್ಚಿ ಮಾಡಿಕೊಂಡದ್ದು. ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಅಂದು ಕುಂಡಿಗೆ ತಾವು ಕೊಟ್ಟ ಯಡಮಟ್ಟೆಯೇ ಇಂದಿನ ಈ ತೆಂಗಿನ ಪೀಠೋಪಕರಣಗಳ ಪೀಠಿಕೆಯೆಂದೆನಿಸುತ್ತದೆ.

ಮುರಿದ ಅಥವಾ ಮುರಿಯುತ್ತಿರುವ ಎರಡೇ ಹಳೇ ಪ್ಲಾಸ್ಟಿಕ್ ಛೇರಿನಲ್ಲೇ ಜೀವಮಾನ ಸವೆಸುವರಿಗೇನು ಕಮ್ಮಿಯಿಲ್ಲ. ಇಂತಹ ಹತಾಶ ಮನಸ್ಥಿತಿಗೆ ಇಂದು ಒಂದು ಹೊಸ ಚಿಗುರನ್ನು ನೀಡುತ್ತಿರುವುದು ನಮ್ಮ ತೆಂಗೇ. ತೇಗದ ರೇಟು ಕೇಳಿದರೆ ಸಾಕು ಹೃದಯಾಘಾತವಾಗುವ ಈ ದಿನಗಳಲ್ಲಿ ಕಾಫಿಗೆ ಕೈಯೊಡ್ಡುವಾಗಲೆಲ್ಲ 'ತಿಚಿಡಿ'ಗಳಾಗುತ್ತಿರುವುದು ಅತೀ ಸಾಮಾನ್ಯ ದೃಶ್ಯಗಳೇ. ಕಾಫಿಗೆ ಕೈಯೊಡ್ಡಿದಾಗ ಟೀಫಾಯಿಲ್ಲದೆ ನೆಲಕ್ಕೆ ಕುಕ್ಕಿ 'ನಿಮ್ಮ ಯೋಗ್ಯತೆಗೊಂದು.......... ಇಲ್ಲ' ಎನ್ನುವ ಈ ಗಳಿಗೆಯಲ್ಲಿ ನಮ್ಮ ಜೇಬಿಗೆ ಹೊರೆಯಾಗದೆ, ನಮ್ಮ ಮನೆಗಳಲ್ಲಿ, ನಮ್ಮ ಮಿತಿಯೊಳಗೆ, ನಮ್ಮ ನಮ್ಮ ಕೈಗೆ ತಕ್ಕಂತೆ ಅವಕ್ಕೆ ಸ್ಥಾನ ನೀಡಲು ಸಾಧ್ಯವಾದರೆ ಅದು ಎಲ್ಲಾ ರೀತಿಯಿಂದಲೂ ಕಾಮನಬಿಲ್ಲಿನ ಮಾತೇ ಆಗುತ್ತದೆ.

ಬಲಿತು ಒಣಗಿದ ಸಣ್ಣೆಳೆಯ ಹಳೆಯ ಮರ ಸಿಕ್ಕಿದರೆ ಸಾಕು ನಮ್ಮ ಕನಸಿನ ಪ್ರಯಾಣ ಅರ್ಧ ಸಾಗಿದಂತೆ. ತೆಂಗಿನ ಸುಳಿಯೊಳಗೇ ಬದುಕುವ ನಮಗೆ ಅದೇನು ಅಷ್ಟೊಂದು ಕಷ್ಟದ ಕೆಲಸವಲ್ಲ ಬಿಡಿ. ಅದನ್ನು ಅಳತೆಗೆ ತಕ್ಕಂತೆ ಕೊಯ್ಯಿಸಿ ನಮಗಿಷ್ಟವಾದ ರೂಪವನು ಕೊಡಲು ನಮ್ಮ ಲೋಕಿ ತಯಾರಿದ್ದಾನೆ. 'ಮರ ಎಷ್ಟೊಂದುಗಟ್ಟಿಯೆಂದರೆ ಉಳಿಬಾಯಿ ಬೇಗ ಹೋಗುತ್ತೆ'.ಎನ್ನುತ್ತಲೇ ನಮ್ಮ ಲೋಕಿ ಮರದ ಗಟ್ಟಿತನ, ಬಾಳಿಕೆ ಬಗ್ಗೆ ಇರುವ ಅನುಮಾನಗಳನ್ನೆಲ್ಲಾ ಉಳಿಬಾಯಿ ತೋರ್ಸಿಯೇ ನೀಗುತ್ತಾನೆ. 'ಇದರ ಇನ್ನೊಂದು ವಿಶೇಷಾಂದ್ರೆ ಹುಳಾಡುವುದಿಲ್ಲ'. ಎನ್ನುವುದು ಲೋಕಿಯ Eye witness. ಇನ್ನು ಸುಲಭವಾಗಿ Judgment ಕೊಡಬಹುದು ಅಲ್ವಾ?





ಮೊದಮೊದಲು ಅಷ್ಟೇನು ಸುಂದರವಾಗಿ ಕಾಣದ ದಿಮ್ಮಿ. ಇದರಿಂದ ನಮ್ಮ ನಡುಮನೆಗಿಡುವ ಟೀಪಾಯಿಯ್ ಹೇಗಪ್ಪ ಸಾಧ್ಯ? ಎಂಬ ಅನುಮಾನ ಹುಟ್ಟದೆ ಬಿಡಲ್ಲ. ಸಾಮಿಲ್ಲಿನಲ್ಲಿ ಪ್ರಥಮ ಶಾಸ್ತ್ರವಾದರೆ ಸಾಕು, ಮದುವೆಗೆ ಹೆಣ್ಣು ರೆಡಿ. ಇನ್ನು ಪ್ಲೈನಿಂಗ್ ಆಗಿ, ತೋಪ್ಡ ಹೊಡೆದು, ಕೂಲ್ ಹಾಕಿ, ತಿದ್ದಿ, ತೀಡಿ, Final touch ಕೊಟ್ಟು polish ಹಾಕಿದ್ರೆ ಸಾಕು. ಯಾರು ಮಾತೇ ಆಡಲ್ಲ. ಕಂಡವರೆಲ್ಲ ಕೇಳ್ತಾರೆ. 'ನಿಜವಾಗ್ಲು ಇದು ತೆಂಗಾ'? ಎಂದು. ಇಂತದ್ದೆಲ್ಲ ಕೇರಳದಲ್ಲಿ ಇದೆ ಎನ್ನುತ್ತಾನ'ತೆಂಗಿನ ಗೆಳೆಯ ವಿಶ್ವನಾಥ್. ಆದ್ರೆ ಇಲ್ಲಿ ಯೂ ಆಗ್ಬೇಕಾಗಿತ್ತು.ಇಷ್ಟು ಮಜಬೂತಾಗಿ ಆಗಿರೋದು ತುಂಬಾ ಖುಷಿ.ಎನ್ನುವುದು ಅವನ ಅನಿಸಿಕೆ.ಜೊತೆಗೆ ಇದರ ಮುಂದಿನ ಸಾಧ್ಯತೆಗಳನ್ನೆಲ್ಲ ಲೆಕ್ಕಹಾಕಿ, ಕೂಡಿ ಕಳೆದು ತೆಂಗು ಬೆಳೆದವನ ಕಾಸಿನ ಕಂಡೀಶನ್ ಭವಿಷ್ಯದಲ್ಲಿ ಹೇಗಿರುತ್ತದೆ? ಎನ್ನುವುದು ಅವನ ಲೆಕ್ಕಾಚಾರ.

ಹೌದು, ತೇಗದ ರೇಟಿನಲ್ಲಿ ಅರ್ಧ ಬೇಡ, ಕಾಲು ಸಿಕ್ಕಿದರೂ ಸಾಕು. ನಮ್ಮ ರೈತರ ಬದುಕು ಪ್ಲಾಟಿನಮ್ಮೇ ಆಗುತ್ತದೆ. ಇದಕ್ಕಿಂತ ಹೆಚ್ಚಾಗಿ ಬಡವರ ಬದುಕಿನ ಮನೆಯಲ್ಲೂ ದಿಮಾಕಿನ ದಿವಾನ್, ದಣಿದ ಮೈಚಾಚೋ ಮಂಚ, ಕಾಲಿಳೆಬಿಡುವ ಕುರ್ಚಿ, ಬೆಲ್ಲದ ಬರ್ಗಾಫಿ ಇಡೋ ಟೀಫಾಯಿ, ಮೂಲೆಮುಚ್ಚೋ ಮೂಲೆಸ್ಟಾಂಡು, ಟೀವಿ ಕುಕ್ಕರಿಸೋ ಟೀವಿ ಸ್ಟಾಂಡು, ಮಧ್ಯದಲ್ಲಿ ಮದ್ವೆ ಫೋಟೋ ಇಟ್ಟು ಸುತ್ತ ಜಾತ್ರೆ ಗೊಂಬೆ, ಹಳೇ ಕ್ಯಾಸೆಟ್ಟು, ಹತ್ತದೇಇರುವ ಪೆನ್ನು, ಎಸ್ಕ್ಯೋಕಾಗ್ದೆ ಇರೋ ವಾಝು, ನೊಣ ಹೇತಿರೋ ಹೂವ, ಇನ್ನೂ ಏನೇನೋ ತುಂಬಿ ತುಳುಕಾಡೊ ಶೋಕೇಸು, ಏನೆಲ್ಲಾ ಮಾಡ್ಸಿ, ಜುಂ ಅಂತ ಶ್ರೀಮಂತರಿಗೆ ಸೈಡೊಡ್ದು, ಯಾರ್ಬಂದರೂ ನಡ್ಮನೇಲೆ ಮಲಗಿ ಬಡವರೂ ಅಳುಕಿಲ್ಲದೆ ಬದುಕಬಹುದು. ಅಷ್ಟೇಅಲ್ಲ, ನಾವೇ ನೀರಾಕಿ, ನಮ್ಮ ತೋಟದಲ್ಲಿ ಬೆಳೆಸಿದ ಒಲೆಗಿಕ್ಕೋ ಮರದಲ್ಲಿ ಮಾಡಿಸಿದ್ದು ಅನ್ನೋದೇನು ಕಮ್ಮಿ ಹೆಮ್ಮೆಯೇ?

ನೋಡಿ ಸಾರ್, ಅಲ್ಲಿರೋದು ಎರಡು ಗುಡ್ಡೆ ಮರ, ಒಂದು ತೇಗದ್ದು, ಇನ್ನೊಂದು ತೆಂಗಿಂದು, ತೇಗದ ಗುಡ್ಡೆಗೆ ೨೮,೦೦೦, ಇದಕ್ಕೆ ಬರೇ ೧೮೦೦, ಅದ್ರಲ್ಲೂ ಮರ, ಇದೇ ಜಾಸ್ತಿ ಇರಾದು, ಇನ್ನೂ ಉಳಿಯುತ್ತೆ. ಏನಾದ್ರು ಮಾಡಬಹುದು ಎನ್ನುವ ಲೋಕಿ ಮಾತನ್ನು ನೀವೇ ಯೋಚ್ನೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ.

ನಮ್ಮ ಹುಟ್ಟಿನ ಜೊತೇನೇ ಹುಟ್ಟೋ ತೆಂಗಿನ ಸಂಬಂಧವನ್ನು ನಮ್ಮ ಮನ ಮನೆಯೊಳಕ್ಕೂ ಕೊಂಡೊಯ್ದು, ನಮ್ಮ ಘನತೆಯನ್ನು ನಾವೇ ಜಾಸ್ತಿ ಮಾಡಿ, ನಮ್ಮ ಕನಸನ್ನು ನಾವೇ ಸಾಧಿಸಿ, ನಮ್ಮ ಬದುಕನ್ನು ನಾವೇ ಬಂಗಾರ ಮಾಡಿಕೊಂಡು, ನಮ್ಮ ದುಡ್ಡನ್ನು ನಾವೇ ಉಳಿಸಿ, ನಮ್ಮ ಮರವನ್ನು ನಾವೇ ಬಳಸಿ, ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡು, ಬೇರೆಯವರಿಂದಲೂ ತಟ್ಟಿಸ್ಕೋಬಹುದು. ಇದಕ್ಕೆ ಬೇಕಾಗಿರೋದು 'ಲೋಕಿ'ಯಂತಹ ಕ್ರಿಯೇಟಿವ್‌ಕಾಯಕ, ಗೌಸಿ ತರ ಸಾಧ್ಯತೆಗಳನ್ನು ಇನ್ನೊಂದು angleನಲ್ಲಿ ಯೋಚ್ನೆ ಮಾಡೊ ಕಲೆ. ಜೊತೆಗೆ ಇವರಿಬ್ಬರ ದೃಷ್ಟಿಯನ್ನು ಊರೆಲ್ಲಾ ವಿಸ್ತರಿಸಿ, ಸಾಧ್ಯತೆಗಳನ್ನು ಕಂಡಲ್ಲೆಲ್ಲಾ ಹರಡಿ ನುಸಿಪೀಡೆ ಕಳೆಯುವ ನಾವು–ನೀವು ಏನಂತೀರ? *


**–ರಾಧಾಕೃಷ್ಣ. ಬಿ.ಎಸ್, ಚಿಕ್ಕನಾಯಕನಹಳ್ಳಿ**

ನಿಮ್ಮ ಕನಸಿಗೆ ಕರೆ ಮಾಡುವುದಾದರೆ –ಲೋಕಿ: ೯೦೩೫೭೮೧೪೮೮

# ಪುಸ್ತಕಾವಲೋಕನ

ಪು: **ಸಮಾಜವಾದವೇ ಪರ್ಯಾಯ** ಸಂ: **ಬಿ.ಎನ್. ಶಾರದಾ** ಪ್ರ: **ಸಂಬುದ್ಧ ಪ್ರಕಾಶನ**, ಬೆಂಗಳೂರು ಪು: ೧೪೨ ಬೆಲೆ: ರೂ.೧೦೦/

## ಸಮಾಜವಾದಿ ವಿಚಾರ ವೈವಿಧ್ಯ...




ಸಮಾಜವಾದಿ ಮಾಸಿಕ 'ಮುಕ್ತ ಸಮಾಜವಾದಿ ಮಾತುಕತೆ'ಯಿಂದ 'ಪತ್ರಿಕೆ'ಯ ಸಂಪಾದಕಿ ಬಿ.ಎನ್. ಶಾರದಾ ಅವರು ಆಯ್ದು ಸಿದ್ಧಪಡಿಸಿದ ಲೇಖನಗಳ ಸಂಗ್ರಹ : 'ಸಮಾಜವಾದವೇ ಪರ್ಯಾಯ' ಪುಸ್ತಕ. ೨೦೦೪ರಲ್ಲಿ ಹೊರಬಂದ ಈ ಪುಸ್ತಕದ ಲೇಖನಗಳೆಲ್ಲವೂ ಹಿಂದಿನ ಆರು ವರ್ಷಗಳಲ್ಲಿ 'ಪತ್ರಿಕೆ'ಗೆ ಬೇರೆ ಬೇರೆ ಲೇಖಕರು ಬರೆದಂತಹವು. ಇಲ್ಲಿರುವ ೫೧ ಲೇಖನಗಳಲ್ಲಿ ಬಹುಪಾಲನ್ನು ಮಂಗ್ಳೂರು ವಿಜಯ ಹಾಗೂ ಆಶೋಕರಾಜ್ ಬರೆದಿದ್ದಾರೆ. ಇದಲ್ಲದೆ, ಡಾ. ಲೋಹಿಯಾ, ಕಿಶನ್ ಪಟ್ನಾಯಕ್ ಮೇಧಾ ಪಾಟ್ಕರ್, ಭಾಯಿವೈದ್ಯ, ಜಾವೆದ್ ಅಕ್ತರ್, ಡಾ. ಕಾಳೇಗೌಡ ನಾಗವಾರ, ದೇವನೂರ ಮಹಾದೇವ, ಕಾಂಚಾ ಐಲಯ್ಯ ಎಲ್.ಎನ್. ಗೋಪಾಲಕೃಷ್ಣ, ಡಾ. ಹನುಮಂತ, ಅಲಿಬಾಬಾ, ಬಿ.ಎನ್. ಶಾರದಾ ಅವರ ಲೇಖನಗಳೂ ಇಲ್ಲಿವೆ.

೨೦೦೪ ರಲ್ಲಿ ಪ್ರಕಟವಾದ ಈ ಪುಸ್ತಕದ ಬರಹಗಳಿಗೆ ಕಳೆದ ಶತಮಾನದ ಕೊನೆಗಾಲದ ಅಥವಾ ಆ ಸಂಕ್ರಮಣ ಕಾಲದ ಕೋಲಾಹಲವೆಲ್ಲವೂ ಭಟ್ಟಿಯಿಳಿದಿದೆ. ಸಮಾಜವಾದದ ಸ್ಪಂದನಶೀಲತೆಯ ದಾಖಲೆಯೊಡನೆ, ಸಮಾಜವಾದಿ ಸಂಘಟನೆಯ ಏಳುಬೀಳುಗಳ ಚರಿತ್ರೆಯ ಪುಟಗಳೂ ಆಗಿರುವ ಈ ಕೃತಿ ಒಂದು ಬಗೆಯಲ್ಲಿ ತನಗೇ ಗೊತ್ತಿಲ್ಲದಂತೆ ಚಾರಿತ್ರಿಕ ಕಾಲಘಟ್ಟವೊಂದರ ಆಕರ ಗ್ರಂಥವೂ ಆಗಿಬಿಟ್ಟಿದೆ.

ಇಲ್ಲಿ ಹಲವು ಲೇಖಕರ, ಚಿಂತಕರ, ಹೋರಾಟಗಾರರ ಬರಹಗಳಿದ್ದರೂ ಮೊದಲಿಗೇ ಗಮನ ಸೆಳೆಯುವುವು ಡಾ. ಲೊಹಿಯಾ ಮತ್ತು ಕಿಶನ್ ಪಟ್ನಾಯಕ್ ಅವರ ಬರಹಗಳು. ಸಮಾಜವಾದಿ ತಾತ್ವಿಕತೆಗಿರುವ ಆವೃತತೆಯನ್ನು ಪರಿಚಯಿಸುವಂತಿರುವ ಡಾ. ಲೋಹಿಯಾ ಅವರ ಟಿಬೆಟ್ ಕುರಿತ ಬರಹ ಪುಟ್ಟರಾಷ್ಟ್ರ ಟಿಬೆಟ್‌ನ ಸಾರ್ವಭೌಮತೆಯನ್ನು ಪ್ರತಿಪಾದಿಸುತ್ತದೆ. (*ಟಿಬೆಟ್ : ಸ್ವತಂತ್ರವಾಗಿದ್ದ ಮಿತ್ರ ರಾಷ್ಟ್ರ ಡಾ. ರಾಮಮನೋಹರ ಲೊಹಿಯಾ*) 'ಟಿಬೆಟ್ ಒಂದು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿತ್ತು. ಟಿಬೆಟ್ ಅಂದರೆ ಚೀನಾ ಅಲ್ಲ; ಟಿಬೆಟ್ ಅಂದರೆ ಟಿಬೆಟ್, ಅಷ್ಟೆ' ಎಂದು ಖಚಿತವಾಗಿ ಭಾಷೆ, ಲಿಪಿ, ಜೀವನ ವಿಧಾನ, ಧರ್ಮ, ಚರಿತ್ರೆ, ಜನಾಭಿಪ್ರಾಯಗಳ ಆಧಾರ ಪಡೆದು ತಲಸ್ಪರ್ಶಿಯಾಗಿ ವಾದಿಸುವ ಲೋಹಿಯಾ ಈ ಮೂಲಕ ವ್ಯಕ್ತಿ, ರಾಷ್ಟ್ರ ಅಥವಾ ಯಾವುದೇ ಮಾನವ ಸಮುದಾಯಗಳ ಅನನ್ಯತೆಯನ್ನು, ಸಾರ್ವಭೌಮತೆಯನ್ನು ಎತ್ತಿ ಹಿಡಿಯುತ್ತಾರೆ. ಮಾನವ ಸಮುದಾಯಗಳೊಡನೆ ಸಂವಾದಿಸಬಯಸುವ ಯಾವುದೇ ತಾತ್ವಿಕತೆಯೂ ಸ್ವಾರ್ಥ ಮತ್ತು ನೈಚ್ಯಾನುಸಂಧಾನದಿಂದ ಮುಕ್ತವಿರಬೇಕೆಂದವರು ಈ ಮೂಲಕ ಸೂಚಿಸುತ್ತಾರೆ. ಚೀನಾ ಮತ್ತು ಬ್ರಿಟಿಷ್ ಸಂಚುಕೋರತನದ ರಾಕ್ಷಸ ಶಕ್ತಿಗಳೆದುರು ನಿರ್ಭೀತಿಯಿಂದ ಮಂಡಿಸಲಾಗಿರುವ ಸತ್ಯದ ಪ್ರತಿಪಾದನೆಯೂ ಇಲ್ಲಿನ ಪ್ರಾಣಸ್ವರೂಪಿ ಅಂಶವಾಗಿದೆ.

'ಸೋಷಲಿಸ್ಟ್ ಇಂಟರ್ ನ್ಯಾಷನಲ್'ನ ಸಮಾವೇಶದಲ್ಲಿ ವಿದೇಶಿ ಪ್ರತಿನಿಧಿಗಳೆದುರು ಕಿಶನ್ ಪಟ್ನಾಯಕ್ ಅವರ ಸ್ಫೋಟಕ ಕರೆ ಎಲ್ಲ ಸಮಾಜವಾದಿಗಳೂ ಮುಟ್ಟಿ ನೋಡಿಕೊಳ್ಳುವಂತಿದೆ. 'ಸಮಾಜವಾದ ಎಂಬ ಚಿಂತನೆ ಯಾರ ಶೋಕಕ್ಕೂ ಒಳಪಡದೆ ನೈಸರ್ಗಿಕವಾಗಿ ಸತ್ತು ಹೋದೀತೆ?... ಇಂಥ ಪ್ರಶ್ನೆ ಸೋಷಲಿಸ್ಟ್ ಇಂಟರ್ ನ್ಯಾಷನಲ್ ನಾಯಕರನ್ನು ಕೊಂಚವಾದರೂ ತಟ್ಟೀತು ಎಂಬ ಭರವಸೆ ಉಳಿದಿಲ್ಲ. ಇವರಿಗೆ ಸಮಾಜವಾದವನ್ನು ಬಿಟ್ಟು ಬಿಡುವ ಧೈರ್ಯವೂ ಇಲ್ಲ ಅಥವಾ ಅದರ ಸಾವಿನ ಘೋಷಣೆ ಮಾಡುವ ಧೈರ್ಯವೂ ಇಲ್ಲ. ತಮ್ಮ 'ಸಮಾಜವಾದ' ಇತರೆಲ್ಲ 'ವಾದ' ಗಳಿಗಿಂತ ಉತ್ತಮ ಎಂಬುದನ್ನು ಸಾರುವ ಆತ್ಮವಿಶ್ವಾಸವೂ ಇವರಲ್ಲಿಲ್ಲ. ಸಮಾಜವಾದ ತಮ್ಮದು ಎಂದು ಹೇಳಿಕೊಳ್ಳಲು ಇವರಲ್ಲಿ ನಾಚಿಕೆ ಇದೆ. ಸಮಾಜವಾದದ ಚರಿತ್ರೆಯನ್ನು ಮುಚ್ಚಿಡಬಯಸುವ ಕೀಳರಿಮೆ ಇದೆ. ಜಾಗತೀಕರಣದ ಈ ಯುಗದಲ್ಲಿ ಸಮಾಜವಾದವು ಹೀಗೆ ಮುಖ ಮುಚ್ಚಿಕೊಂಡು ಬದುಕಬೇಕೆ?.... ಖಂಡಿತ ಕೂಡದು...' ಈ ಪುಸ್ತಕದ ಬೇರೆ ಬೇರೆ ಲೇಖನಗಳಲ್ಲಿ ಕಿಶನ್ ಅವರು ವ್ಯಕ್ತ ಪಡಿಸಿರುವ ಇದೇ ಬಗೆಯ ಆತಂಕ ಆಗ್ರಹಗಳು ಬೇರೆ ಬೇರೆ ತೀವ್ರತೆಯಲ್ಲಿ ಪ್ರಕಟವಾಗಿರುವುದರಿಂದ ಈ ಪ್ರಾತಿನಿಧಿಕ ಸಂವೇದನೆಯನ್ನು ದಾಖಲಿಸಲು ಕಿಶನ್ ಅವರ 'ಮಾತು' ಗಳನ್ನು ಇಲ್ಲಿ ಕಾಣಿಸಲಾಗಿದೆ. ಸರ್ವತ್ರ ವ್ಯಾಪಿಸಿರುವ ಮುಖೇಡಿತನ, ಅನಾಮಿಕತೆ, ಹಿಂಜರಿಕೆ ಮತ್ತು ಪಲಾಯನವಾದಕ್ಕೆ ಕಿಶನ್ ಅವರ ಮಾತುಗಳು ಸಾತ್ವಿಕ ಚಿಕಿತ್ಸೆ ನೀಡಬಲ್ಲದಾಗಿದೆ. ಇನ್ನೊಬ್ಬ ಸಮಾಜವಾದಿ ಚಿಂತಕ, ಭಾಯಿ ವೈದ್ಯ ಅವರು ('*ಇಂದಿನ ತುರ್ತು : ಸಮಾಜವಾದಿಗಳ ಏಕತೆ*') ೨೦೦೨ರಲ್ಲಿ ಪುಣೆಯಲ್ಲಿ ನಡೆದ ಸಮಾಜವಾದಿ ಸಮಾವೇಶದಲ್ಲಿ ಮಾತಾಡುತ್ತ 'ಸಮಾಜವಾದ ನಿರ್ನಾಮಗೊಂಡಿದೆ, ಇನ್ನು ಧರ್ಮನಿರಪೇಕ್ಷತೆಯನ್ನು ಇತಿಶ್ರೀ ಮಾಡುವುದಷ್ಟೇ ಬಾಕಿ ಉಳಿದಿದೆ' ಎಂಬ ವಿಹಿಂಪ ನಾಯಕರೊಬ್ಬರ ಮಾತುಗಳ ಕಡೆ ಸಭೆಯ ಗಮನ ಸೆಳೆದು ಸಮಾಜವಾದಿಗಳ ಏಕತೆಗೆ ಕರೆ ನೀಡುತ್ತಾರೆ. ಮತೀಯವಾದವೇ ಸಮಾಜವಾದಕ್ಕಿರುವ ಪ್ರಾಣಘಾತಕ ಮೃತ್ಯುವೆಂದು ಮನಗಾಣಿಸಲು ಯತ್ನಿಸುತ್ತಾರೆ.

ಬಹುಶಃ ಇದೇ ಸಮ್ಮೇಳನದಲ್ಲಿ ಸ್ವೀಕರಿಸಲಾಗುವ 'ನೀತಿಪತ್ರ'ದಲ್ಲಿರುವ ಘೋಷಣೆಗಳಲ್ಲಿ ಅತ್ಯಂತ ಸ್ಪಂದನಶೀಲ ನಿರ್ಣಯಗಳೆಂದರೆ ೧. ಬೃಹತ್ ಯಂತ್ರಗಳಿಂದ ಕೂಡಿದ ರಭಸದ ಔದ್ಯೋಗೀಕರಣದ ಅಪಾಯದ ಕುರಿತು ಲೊಹಿಯಾ ಎಚ್ಚರಿಸಿದ್ದನ್ನು ಸಮಗ್ರವಾಗಿ ಚರ್ಚಿಸಿದೆ ಉದಾಸೀನ ಮಾಡಿದ ಅಂಶ ಹಾಗೂ ೨. ಭೂಮಿಯ ಒಡೆತನದ ಪ್ರಶ್ನೆಯ ಇತ್ಯರ್ಥಕ್ಕೆ ಮುಂದಾಗಬೇಕೆನ್ನುವ ತೀರ್ಮಾನ. ಪ್ರತ್ಯಕ್ಷ ಕೃಷಿಯಲ್ಲಿ ತೊಡಗಿರುವವರಿಗಷ್ಟೆ ಭೂ ಒಡೆತನ ನೀಡುವ ಘೋಷಣೆ. ವಿಪರ್ಯಾಸವೆಂದರೆ ದಶಕವೇ ಕಳೆದರೂ ಈ ಕುರಿತ ಯಾವ ಚರ್ಚೆಯನ್ನೂ, ಹೋರಾಟವನ್ನೂ ಸಂಘಟಿಸಲಾಗಿಲ್ಲ.

'ಹಸಿವಿಗೆ ಮತ್ತು ಇಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ತರಗಳಲ್ಲಿರುವ ಬಿರುಕುಗಳಿಗೂ ಹತ್ತಿರದ ಸಂಬಂಧವಿದೆ' ಎಂಬುದು ನಮಗಿನ್ನೂ ಮನದಟ್ಟಾಗಿಲ್ಲ' ಎನ್ನುವ ಸಮಕಾಲೀನ ಭಾರತ ಕಂಡ ಅಪ್ರತಿಮ ಹೋರಾಟಗಾರ್ತಿ ಮೇಧಾಪಾಟ್ಕರ್, ಸ್ವಾತಂತ್ರ್ಯೋತ್ತರ ಭಾರತ ಸಮರ್ಥ ನಾಯಕತ್ವ ಪಡೆಯಲಿಲ್ಲ ಎಂದು ತಮ್ಮ ಲೇಖನದಲ್ಲಿ ವಾದಿಸುತ್ತಾರೆ.

ಮಂಗ್ಳೂರ ವಿಜಯ ಅವರು ಸಂಗ್ರಹಿಸಿರುವ ಲೇಖನ ('ಅಂಬೇಡ್ಕರ್ ಮತ್ತು ಸಮಾಜವಾದ') ಅಂಬೇಡ್ಕರ್ ಅವರ ಸಮಾಜವಾದಿ ಒಳನೋಟಗಳು ಅಪೂರ್ವವಾಗಿವೆ. ಅಂಬೇಡ್ಕರ್ ಅವರ ಆಗ್ರಹಗಳಾದ ೧. ಯಾವ ತಿದ್ದುಪಡಿಯೂ ಬದಲಿಸಲಾಗದ ಪ್ರಭುತ್ವ ಸಮಾಜವಾದದ ಜಾರಿ ೨. ಜಾತಿ ಪದ್ಧತಿಯ ಗುರ್ತಿಸುವಿಕೆ ಮತ್ತು ಜಾತಿವಿನಾಶ ೩. ಭೂಮಿಯ ರಾಷ್ಟ್ರೀಕರಣ ಮತ್ತು ಸಹಕಾರಿ ಕೃಷಿ ಜಾರಿ. ಇವುಗಳಿಂದಷ್ಟೇ ನೈಜ ಸಮಾಜವಾದ ಸಾಧ್ಯವಾಗುತ್ತದೆ. ಎನ್ನುವ ನಿರ್ಣಾಯಕ ಮಾತುಗಳು ಗಮನಾರ್ಹವಾಗಿವೆ.

ಇನ್ನು ಇಲ್ಲಿರುವ ಲೇಖನಗಳಲ್ಲಿ ಅರ್ಧದಷ್ಟನ್ನು ಮಂಗ್ಳೂರು ವಿಜಯ ಮತ್ತು ಆಶೋಕ್‌ರಾಜ್ ಬರೆದಿದ್ದಾರೆ. ಈ ಇಬ್ಬರೂ ಲೇಖಕರೂ ಹರಿಗಡಿಯದ ಸಮಾಜವಾದಿ ಸ್ಪಂದನಶೀಲತೆಯಿಂದ ಸಮಕಾಲೀನ ವಿದ್ಯಮಾನಗಳಿಗೆ ಪ್ರತಿಕ್ರಿಯಿಸಿದ್ದಾರೆ. ಮಂಗ್ಳೂರ ವಿಜಯ ಅವರ ಕೆಲವು ಮುಖ್ಯ ಅನುವಾದಗಳು ಸೇರಿದಂತೆ ಇಲ್ಲಿರುವ ಸಮಾಜವಾದಿ ಚರಿತ್ರೆಯ ಬರವಣಿಗೆ ಗಮನಾರ್ಹ ಹಾಗೇ, ಅಶೋಕ್‌ರಾಜ್ ಅವರು ವಿಶ್ವಸಂಸ್ಥೆಯ ಕುರಿತು, ಹಸಿವು, ಆಹಾರದ ಹಕ್ಕು, ಸಣ್ಣ ಕೈಗಾರಿಕೆಗಳ ನಾಶದ ಬಗ್ಗೆ ಬರೆದಿದ್ದು ಅಲ್ಲಿ ವ್ಯಕ್ತವಾಗುವ ಸ್ವತಂತ್ರ ಅಭಿವ್ಯಕ್ತಿ ಅವುಗಳಲ್ಲಿ ಅಂತರ್ಗತವಾಗಿರುವ ಜನಹಿತದ ಕಾಳಜಿ ಮುಖ್ಯವೆನಿಸುತ್ತದೆ. *

**–ಕೆ.ಪಿ. ನಟರಾಜ**

**ಒಂದು ವರ್ಷ ಪೂರೈಸಿರುವ ಶುಭ ಸಂದರ್ಭದಲ್ಲಿ**

## ನವ ಮಾನವ ಮಾಸಿಕಕ್ಕೆ ಹಾರ್ದಿಕ ಶುಭಾಶಯಗಳು!

ಬೆಳೆಗಾರರಿಂದ ನೇರವಾಗಿ ಗ್ರಾಹಕರಿಗೆ

ಅತ್ಯುತ್ತಮ ಕಾಫಿಪುಡಿ!

# ಕಾಪ್ಸಿ ಕಾಫಿ



**ಸಂಪರ್ಕಿಸಿ:**

**ಕಾಫಿ ಕೋ-ಆಪರೇಟೀವ್ ಸೊಸೈಟಿ, ಅರೇಹಳ್ಳಿ**
ಅರೇಹಳ್ಳಿ ಅಂಚೆ-೫೭೩ ೧೦೧
ಬೇಲೂರು ತಾಲ್ಲೂಕು(ಹಾಸನ ಜಿಲ್ಲೆ)
ದೂರವಾಣಿ: 9242103769

'ನವಮಾನವ'ದ ಎರಡನೇ ವರ್ಷದ ನಡೆಗೆ ಶುಭಾಶಯಗಳು

# ಅಂಬರ ಚಿತ್ತಾರ

ಕರಕುಶಲ ಮುದ್ರಣ ಹಾಗೂ ಕಸೂತಿ ಉಡುಪುಗಳು

ಕೇಡಲಸರ ಬಸ್ ನಿಲ್ದಾಣದ ಎದುರು, ಹೆಗ್ಗೋಡು - 577417
ಸಾಗರ ತಾಲ್ಲೂಕು - ಶಿವಮೊಗ್ಗ ಜಿಲ್ಲೆ
ದೂರವಾಣಿ : 08183 - 265751 ಮೊ. : 9731929731
Email : ambarachittara@gmail.com

- ಹತ್ತಿ ಬಟ್ಟೆಯ ಮೇಲೆ ಮರದಚ್ಚಿನ ಚಿತ್ತಾರ
- ಮಲೆನಾಡಿನ ಮಹಿಳೆಯರ ಕಸೂತಿ ಕೈಕಸುಬು
- ಮಹಿಳೆಯರಿಗಾಗಿ ಮಹಿಳೆಯರೇ ರೂಪಿಸಿದ ಅನನ್ಯ ಸಿದ್ಧುಡುಪುಗಳು



## ಹಸಿರು ಪ್ರಕಾಶನ

**ನಂ. ೯೦, ೧೬ನೇ ಅಡ್ಡ ರಸ್ತೆ, ೪ನೇ ಹಂತ,**
**ಜೆ.ಪಿ. ನಗರ ಬೆಂಗಳೂರು-೫೬೦ ೦೭೮**

**ನಮ್ಮಲ್ಲಿ ದೊರೆಯುವ ಪುಸ್ತಕಗಳು:**

೧. ಸಿನಿಮಾ ಯಾನ (ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪುಸ್ತಕ) **ಲೇ: ಕೆ.ಪುಟ್ಟಸ್ವಾಮಿ**
**ಬೆಲೆ: ರೂ. ೩೬೦/-**

೨. ಇಲ್ಲ ಯಾವುದೂ ಅಮುಖ್ಯವಲ್ಲ
**ಲೇ. ಡಿ.ಎಸ್. ನಾಗಭೂಷಣ**
**ಬೆಲೆ: ರೂ. ೧೫೦/-**

**ಶೇ ೨೦ ರಿಯಾಯ್ತಿ. ಅಂಚೆ ವೆಚ್ಚ ಉಚಿತ**


**ಮುದ್ರಕರು: ಚಿತ್ರಕೂಟ ಪ್ರಿಂಟರ್ಸ್, ದುರ್ಗಿಗುಡಿ, ಶಿವಮೊಗ್ಗ-೫೭೭ ೨೦೧ ದೂ: ೦೮೧೮೨-೨೬೦೮೯೪**

ತೆರೆದ ಅಂಚೆ

ಇವರಿಗೆ,

If undelivered, please return to D.S. Nagabhushana,
HIG-5, 'Nudi', Kallahalli Extension, Vinoba Nagara,
Shivamogga - 577204 (Karnataka)